## ಅಧ್ಯಾಯ–೩
## ಜನತೆ

ಜಿಲ್ಲೆಯ ಪೂರ್ವಭಾಗದಲ್ಲಿರುವ ಈ ತಾಲೂಕು ಚಾಮರಾಜನಗರ ಜಿಲ್ಲೆಯ ಕಸಬಾ ಹಾಗೂ ಕೊಳ್ಳೇಗಾಲ, ಮತ್ತು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕುಗಳಿಂದ ಸುತ್ತುವರಿಯಲ್ಪಟ್ಟಿದ್ದು, ಸ್ವಾತಂತ್ರ್ಯಪೂರ್ವದಲ್ಲಿ ಕೊಳ್ಳೇಗಾಲ ತಾಲೂಕು ಮದ್ರಾಸ್ ಪ್ರಾಂತದ ನಿಯಂತ್ರಣದಲ್ಲಿದ್ದುದನ್ನು ಮರೆಯುವಂತಿಲ್ಲ. ಈ ಹಿನ್ನೆಲೆಯಲ್ಲಿ ಅದರ ಪ್ರಭಾವವನ್ನು ತಾಲೂಕಿನಲ್ಲೂ ಗಮನಿಸಬಹುದಾಗಿದೆ. ಇತಿಹಾಸಪೂರ್ವ ಕಾಲದಿಂದಲೂ ಮಾನವ ಚಟುವಟಿಕೆಯನ್ನು ಕಂಡಿರುವ ಈ ತಾಲೂಕಿನ ಬಹುಪಾಲು ಪ್ರದೇಶವು ಬಯಲು ಸೀಮೆಯಾಗಿದ್ದು, ಕಾವೇರಿ–ಕಪಿಲ ನದಿಗಳಿಂದಾಗಿ, ತಾಲೂಕಿನ ಕೃಷಿಯು ಬಹು ಹಿಂದಿನಿಂದಲೂ ಸಮೃದ್ಧವಾಗಿದೆ. ಇತರೆಡೆಗಳಂತೆ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಜನರು ವಾಸಿಸುತ್ತಿದ್ದು, ಕೃಷಿ ಪ್ರಧಾನ ಕಸುಬಾಗಿದೆ. ತಾಲೂಕಿನಲ್ಲಿರುವ ವಿವಿಧ ಜಾತಿ–ಧರ್ಮಗಳಿಗೆ ಸೇರಿದ ಜನತೆ ಪರಂಪರಾಗತವಾಗಿ ಬಂದಿರುವ ಸಾಂಪ್ರದಾಯಿಕ ಕಸುಬನ್ನೇ ಜೀವನೋಪಾಯಕ್ಕೆ ಅನುಸರಿಸುತ್ತಿದ್ದರೂ, ಲಭ್ಯವಿರುವ ಶಿಕ್ಷಣ ಸೌಲಭ್ಯ ಹಾಗೂ ಸರ್ಕಾರದ ಮೀಸಲಾತಿ ನಿಯಮಗಳಿಂದಾಗಿ, ಎಲ್ಲರಿಗೂ ಅವಕಾಶ ಲಭಿಸುವುದರ ಜೊತೆಗೆ, ಕೆಳವರ್ಗದವರಿಗೆ ವಿಶೇಷ ಪ್ರೋತ್ಸಾಹ ದೊರೆತ ಪರಿಣಾಮವಾಗಿ, ಇಂದು ಸಮಾಜದಲ್ಲಿ ಸಾಕಷ್ಟು ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳುಂಟಾಗಿದೆ. ಜಾತಿಕಟ್ಟುಪಾಡುಗಳು ಸಾರ್ವಜನಿಕವಾಗಿ ಸಾಕಷ್ಟು ಸಡಿಲಗೊಂಡಿದ್ದು, ಅದನ್ನು ದೈನಂದಿನ ಬದುಕಿನಲ್ಲೂ ಕಾಣಬಹುದಾಗಿದೆ. ಸಾಮಾಜಿಕ–ಧಾರ್ಮಿಕ ಸೌಹಾರ್ದತೆಯು ಎಂದಿನಂತೆ ಮುಂದುವರಿದುಕೊಂಡು ಬಂದಿರುವುದಕ್ಕೆ ಜಾತ್ರೆ ಊರಹಬ್ಬಗಳು ನಿದರ್ಶನಗಳಾಗಿವೆ. ಈ ತಾಲೂಕಿನಲ್ಲಿ ಕಂಡುಬರುವ ವಿವಿಧ ಜಾತಿ, ಸಮುದಾಯಗಳ ಸಾಮಾಜಿಕ ಜೀವನ, ಧಾರ್ಮಿಕ ಆಚರಣೆಗಳು ಹಾಗೂ ಸಾಂಸ್ಕೃತಿಕ ಪದ್ಧತಿಗಳನ್ನು ಪರಿಚಯ ಮಾಡಿಕೊಡುವುದು ಈ ಅಧ್ಯಾಯದ ಪ್ರಮುಖ ಉದ್ದೇಶವಾಗಿದೆ.

**ಜನಸಂಖ್ಯೆ:** ಸಂಸ್ಥಾನದ ಸರ್ಕಾರವು ಅನುಸರಿಸಿದ ಖಾನೇಸುಮಾರಿ ಅಂದಾಜಿನಂತೆ ತಾಲೂಕಿನ ಜನಸಂಖ್ಯೆಯು ೧೮೫೩–೫೪ರಲ್ಲಿ ೩೯,೫೬೦ ಇದ್ದು, ಮುಂದೆ ೧೮೭೧ರಲ್ಲಿ ಜರುಗಿದ ಮೊದಲ ಅಧಿಕೃತ ಜನಗಣತಿಯಲ್ಲಿ ಇದು ೭೨,೪೬೬ಕ್ಕೆ ಏರಿದರೆ ೧೮೮೧ರಲ್ಲಿ



೭೧,೨೬೧ಕ್ಕೆ ಇಳಿಯಿತು. ಇದಕ್ಕೆ ೧೮೭೬ರಲ್ಲಿ ಭೀಕರ ಬರಗಾಲ ಕಾರಣವಾಗಿತ್ತು. ಆದರೆ ೧೮೯೧ರಲ್ಲಿ ಇದು ಮತ್ತೆ ೮೩,೪೫೪ಕ್ಕೇರಿತು. ಮುಂದೆ ಇದು ೧೯೦೧ರಲ್ಲಿ ೮೭,೬೮೦ಕ್ಕೇರಿದ್ದು, ೧೯೩೧ರಲ್ಲಿ ೧,೦೩,೪೨೪ಕ್ಕೆ ಏರುವ ಮೂಲಕ ಲಕ್ಷದ ಗಡಿಯನ್ನು ದಾಟಿತು. ಅಲ್ಲಿಂದೀಚೆಗೆ ಜನಸಂಖ್ಯಾ ಪ್ರಮಾಣದಲ್ಲಿ ಗಣನೀಯ ಹೆಚ್ಚಳ ಕಂಡುಬರಲಾರಂಭಿಸಿ, ೧೯೪೧ರಲ್ಲಿ ೧,೧೫,೧೨೭ಕ್ಕೂ ೧೯೬೧ರಲ್ಲಿ ೧,೫೨,೯೪೪ಕ್ಕೂ ಏರಿ, ೧೯೭೧ರಲ್ಲಿ ಅದು ೧,೮೨,೩೪೦ ತಲುಪಿತ್ತು. ಆ ದಶಕದಲ್ಲಿ ತಾಲೂಕಿನ ಜನಸಂಖ್ಯೆಯಲ್ಲಿ ಸುಮಾರು ಶೇ. ೨೦ ಹೆಚ್ಚಳವಾಗಿತ್ತು. ಮುಂದೆ ೧೯೮೧ರಲ್ಲಿ ೨,೨೦,೨೩೬ಕ್ಕೇರುವ ಮೂಲಕ ಎರಡು ಲಕ್ಷದ ಗಡಿ ದಾಟಿ ಶೇ. ೨೧ ರಷ್ಟು ಜನಸಂಖ್ಯಾ ಬೆಳವಣಿಗೆಯನ್ನು ವೀಕ್ಷಿಸಿತು. ಇದು ೧೯೯೧ರಲ್ಲಿ ೨,೫೮,೧೦೦ಕ್ಕೂ (ಶೇ. ೧೭.೧೧ ವಾರ್ಷಿಕ ಹೆಚ್ಚಳ) ೨೦೦೧ರಲ್ಲಿ ೨,೭೯,೦೦೫ಕ್ಕೂ ಏರಿತು. ಕಳೆದ ದಶಕದಲ್ಲಿ ಜನಸಂಖ್ಯಾ ಬೆಳವಣಿಗೆ ಪ್ರಮಾಣವು ಶೇ. ೭.೭೭ಕ್ಕೆ ಸೀಮಿತಗೊಂಡಿತ್ತು. ೨೦೦೯ರ ವೇಳೆಗೆ ತಾಲೂಕಿನ ಸಂಭವನೀಯ ಜನಸಂಖ್ಯೆಯು ೩,೦೨,೦೦೦ಕ್ಕೆ ಏರುವುದೆಂದು ನಿರೀಕ್ಷಿಸಲಾಗಿತ್ತು.

**ಜನಸಾಂದ್ರತೆ:** ತಾಲೂಕಿನಲ್ಲಿ ೧೯೪೧ರಲ್ಲಿ ಪ್ರತಿ ಚ.ಕಿಮೀಗೆ ೨೦೮ ಇದ್ದ ಜನಸಾಂದ್ರತೆಯು ೧೯೭೧ರಲ್ಲಿ ೩೦೭ಕ್ಕೂ ೧೯೮೧ರಲ್ಲಿ ೩೬೮ಕ್ಕೂ ಅಧಿಕಗೊಂಡಿತು. ಇದು ೧೯೯೧ರಲ್ಲಿ ೪೩೦ಕ್ಕೂ, ೨೦೦೧ರ ಗಣತಿ ನಂತರ ೪೬೬ಕ್ಕೂ ಏರುವ ಮೂಲಕ, ಜಿಲ್ಲೆಯ ಸರಾಸರಿ ಜನಸಾಂದ್ರತಾ ಪ್ರಮಾಣಕ್ಕಿಂತ (೪೦೧) ಹೆಚ್ಚಾಗಿತ್ತು.

**ಮನೆಗಳು ಹಾಗೂ ಕುಟುಂಬಗಳು :** ತಾಲೂಕಿನಲ್ಲಿ ೧೯೭೧ರ ಜನಗಣತಿಯಂತೆ ಇದ್ದ ೩೫,೫೫೪ (೩೧,೧೧೮ ಗ್ರಾಮೀಣ ಹಾಗೂ ೪,೪೩೬ ನಗರ) ಮನೆಗಳಲ್ಲಿ ೪೨,೮೦೫ (೩೭,೪೮೯ ಗ್ರಾಮೀಣ ಹಾಗೂ ೫,೩೧೬ ನಗರ) ಕುಟುಂಬಗಳು ವಾಸಿಸುತ್ತಿದ್ದವು. ಅದೇ ೧೯೮೧ರ ಜನಗಣತಿಯಲ್ಲಿ ತಾಲೂಕಿನಲ್ಲಿದ್ದ ೪೭,೭೩೨ (೪೦,೮೯೬ ಗ್ರಾಮಾಂತರ ಹಾಗೂ ೬,೮೩೬ ನಗರದ) ಮನೆಗಳಲ್ಲಿ ೪೮,೮೨೩ (೪೨,೮೬೦ ಗ್ರಾಮೀಣ ಹಾಗೂ ೬,೯೬೩ ನಗರ) ಕುಟುಂಬಗಳು ವಾಸಿಸುತ್ತಿದ್ದವು. ಅದೇ ೨೦೦೧ರ ವೇಳೆಗೆ ತಾಲೂಕಿನಲ್ಲಿದ್ದ ೫೮,೫೮೦ ಮನೆಗಳಲ್ಲಿ (೫೧,೫೭೮ ಗ್ರಾಮೀಣ ಹಾಗೂ ೬,೯೭೬ ನಗರ) ವಿವಿಧ ಕುಟುಂಬಗಳು ವಾಸಿಸುತ್ತಿದ್ದವು.

**ಸಾಂಸ್ಥಿಕ ಜನಸಂಖ್ಯೆ:** ವಿದ್ಯಾರ್ಥಿ ನಿಲಯ, ವಸತಿಗೃಹ, ಜೈಲು, ಆಸ್ಪತ್ರೆ, ವೃದ್ಧಾಶ್ರಮ, ಅನಾಥಾಶ್ರಮ ಮಠ, ಮುಂತಾದ ಸಂಸ್ಥೆಗಳಲ್ಲಿರುವವರನ್ನು ಸಾಂಸ್ಥಿಕ ಜನಸಂಖ್ಯೆಯಡಿ ಪರಿಗಣಿಸಲಾಗುತ್ತಿದ್ದು, ಅದರಂತೆ ೧೯೭೧ರಲ್ಲಿ ತಾಲೂಕಿನಲ್ಲಿದ್ದ ೭೪ (೫೫ ಗ್ರಾಮೀಣ, ೧೯ ನಗರ)ಸಂಸ್ಥೆಗಳಲ್ಲಿ ೪೭೪ (೩೧೭ ಗ್ರಾಮೀಣ ಹಾಗೂ ೧೫೭ ನಗರ) ಪುರುಷರು ಹಾಗೂ ೯೪ (೭೬ ಗ್ರಾಮೀಣ ಹಾಗೂ ೧೮ ನಗರ) ಮಹಿಳೆಯರು ವಾಸಿಸುತ್ತಿದ್ದರು. ಅದೇ ೧೯೮೧ರಲ್ಲಿ ತಾಲೂಕಿನಲ್ಲಿದ್ದ ೫೨ (೩೨ ಗ್ರಾಮೀಣ ಹಾಗೂ ೨೦ ನಗರ)

ಸಂಸ್ಥೆಗಳಲ್ಲಿ ೬೭೬ (೪೪೫ ಗ್ರಾಮೀಣ ಹಾಗೂ ೨೩೧ ನಗರ) ಪುರುಷರು ಹಾಗೂ ೯೪ ಮಹಿಳೆಯರು ಆಶ್ರಯ ಪಡೆದಿದ್ದರು.

**ವಸತಿಹೀನರು:** ವಾಸದ ಮನೆಯನ್ನು ಹೊಂದಿರದ ಇವರು ಗುಡಿ, ಗುಂಡಾರ, ರಸ್ತೆ ಬದಿ ಮುಂತಾದೆಡೆ ವಾಸಿಸುತ್ತಿದ್ದು, ಹೆಚ್ಚಿನವರು ಭಿಕ್ಷುಕರು ಇಲ್ಲವೇ ತಿರುಕರಾಗಿರುತ್ತಾರೆ. ತಾಲೂಕಿನಲ್ಲಿ ೧೯೭೧ರಲ್ಲಿ ಈ ವರ್ಗಕ್ಕೆ ಸೇರಿದ ೮೩ (೭೬ ಗ್ರಾಮೀಣ ಹಾಗೂ ೭ ನಗರ) ಕುಟುಂಬಗಳಿದ್ದು, ೧೮೮ (೧೭೫ ಗ್ರಾಮೀಣ ಹಾಗೂ ೧೩ ನಗರ) ಪುರುಷರನ್ನೂ ೨೨೨ (೨೧೨ ಗ್ರಾಮೀಣ ಹಾಗೂ ನಗರ) ಮಹಿಳೆಯರನ್ನೂ ಒಳಗೊಂಡಿದ್ದವು. ಅದೇ ೧೯೮೧ರಲ್ಲಿ ತಾಲೂಕಿನಲ್ಲಿದ್ದ ೬೪ (೩೭ ಗ್ರಾಮೀಣ ಹಾಗೂ ೨೭ನಗರ) ಕುಟುಂಬಗಳಲ್ಲಿ ೧೩೦ (೮೬ ಗ್ರಾಮೀಣ ಹಾಗೂ ೪೪ ನಗರ) ಪುರುಷರು ಹಾಗೂ ೭೪ (೬೪ ಗ್ರಾಮೀಣ ೧೧ ನಗರ) ಮಹಿಳೆಯರು ಇದ್ದರು.

**ಸ್ತ್ರೀ–ಪುರುಷ ಪ್ರಮಾಣ :** ಪ್ರತಿ ೧೦೦೦ ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆಯನ್ನು ಸ್ತ್ರೀ ಪುರುಷ ಪ್ರಮಾಣ ಎಂದು ಕರೆಯಲಾಗುತ್ತದೆ. ತಾಲೂಕಿನಲ್ಲಿ ಸ್ತ್ರೀ–ಪುರುಷ ಪ್ರಮಾಣವು ೧೯೭೧ರಲ್ಲಿ ೯೪೧.೫೮ (೯೪೧.೩೦ ಗ್ರಾಮೀಣ ಹಾಗೂ ೯೪೪.೦೮ ನಗರ) ಇತ್ತು. ಇದು ೧೯೮೧ರಲ್ಲಿ ೯೪೪.೪೫ (೯೪೫.೮೮ ಗ್ರಾಮೀಣ ಹಾಗೂ ೯೩೨.೮೮) ಕ್ಕೇರಿದರೂ, ಜಿಲ್ಲಾ ಪ್ರಮಾಣವಾದ ೯೫೦.೬೨ (೯೫೫.೭೯ ಗ್ರಾಮೀಣ ಹಾಗೂ ೯೩೨.೮೮ ನಗರ) ಕ್ಕಿಂತ ಕಡಿಮೆ ಇತ್ತು. ಇದು ೧೯೯೧ರಲ್ಲಿ ೯೪೯ ಕ್ಕೂ ೨೦೦೧ರಲ್ಲಿ ೯೬೩ಕ್ಕೂ ಏರಿತು. ಆದರೆ ಜಿಲ್ಲಾ ಪ್ರಮಾಣ (೯೬೪) ಹಾಗೂ ರಾಜ್ಯ ಪ್ರಮಾಣ (೯೬೫)ಗಳಿಗಿಂತ ಕಡಿಮೆ ಇತ್ತು.

**ಗ್ರಾಮೀಣ ಜನಸಂಖ್ಯೆ :** ತಾಲೂಕಿನ ಗ್ರಾಮಾಂತರ ಭಾಗದಲ್ಲಿ ೧೯೬೧ರಲ್ಲಿ ೧,೨೭,೪೬೦ ಮಂದಿ ವಾಸಿಸುತ್ತಿದ್ದು, ೧೯೭೧ರಲ್ಲಿ ೧,೬೩,೮೭೭ ಕ್ಕೇರಿತು. ೧೯೮೧ರಲ್ಲಿ ೧,೯೬,೩೧೮ ಜನರು ಗ್ರಾಮೀಣ ಪ್ರದೇಶದಲ್ಲಿ ನೆಲೆಸಿದ್ದು, ೧೯೯೧ರಲ್ಲಿ ಇದು ೨,೩೦,೪೦೦ ಜನಸಂಖ್ಯೆಯನ್ನು ಹೊಂದಿತ್ತು. ತಾಲೂಕಿನ ಗ್ರಾಮೀಣ ಭಾಗದಲ್ಲಿದ್ದ ೧೩೨ (೧೨೧ ವಸತಿ ಹಾಗೂ ೧೧ ನಿರ್ವಸತಿ)ಗ್ರಾಮಗಳಲ್ಲಿ ೨೦೦೧ರ ಜನಗಣತಿಯಂತೆ ೨,೪೫,೮೩೯ (೧,೨೫,೩೫೩ ಪುರುಷರು ಮತ್ತು ೧,೨೦,೪೮೬ ಮಹಿಳೆಯರು) ಜನರು ವಾಸಿಸುತ್ತಿದ್ದು, ಇದು ತಾಲೂಕಿನ ಒಟ್ಟು ಜನಸಂಖ್ಯೆಯ ಶೇ. ೮೮ ರಷ್ಟಿತ್ತು. ತಾಲೂಕಿನಲ್ಲಿದ್ದ ಗ್ರಾಮೀಣ ಜನಸಂಖ್ಯೆಯ ದಶವಾರ್ಷಿಕ ಬೆಳವಣಿಗೆಯು ೧೯೬೧–೭೧ರಲ್ಲಿ ಶೇ.೨೨ರಷ್ಟಿದ್ದು, ೧೯೭೧ರ–೮೧ರ ದಶಕದಲ್ಲಿ ಸು. ಶೇ. ೨೦ ಹೆಚ್ಚಳಗೊಂಡಿತ್ತು. ಅದೇ ೧೯೮೧–೯೧ರ ದಶಕದಲ್ಲಿ ಶೇ. ೧೭ ರಷ್ಟು ಅಧಿಕಗೊಂಡಿದ್ದು, ೧೯೯೧–೨೦೦೧ರ ದಶಕದಲ್ಲಿ ಶೇ. ೫ರಷ್ಟು ಮಾತ್ರ ಹೆಚ್ಚಳಗೊಂಡಿತ್ತು.

**ಪಟ್ಟಣ ಜನಸಂಖ್ಯೆ :** ತಾಲೂಕಿನಲ್ಲಿ ೧೮೯೧ರ ವೇಳೆಗೆ ಸೋಸಲೆ (೩,೦೩೩ ಜನ) ಹಾಗೂ ತಿ.ನರಸೀಪುರ (೧,೬೫೦ ಜನ) ಪಟ್ಟಣಗಳಿದ್ದು, ತಾಲೂಕಿನ ಒಟ್ಟು ಪಟ್ಟಣ ಜನಸಂಖ್ಯೆಯು ೪೬೮೩ ಇತ್ತು. ಮುಂದೇ ೧೯೩೧ರ ವೇಳೆಗೆ ಬನ್ನೂರು, ಮೂಗೂರು ಹಾಗೂ ತಲಕಾಡುಗಳಲ್ಲೂ ತಾತ್ಕಾಲಿಕ ಪುರಸಭೆಗಳು ಸ್ಥಾಪಿಸಲ್ಪಟ್ಟಿದ್ದವು. ಆದರೆ ೧೯೬೧ರ ವೇಳೆಗೆ ಜನಸಂಖ್ಯಾ ಆಧಾರಿತ ಪುನರ್ ವರ್ಗೀಕರಣದನ್ವಯ ಎರಡು ಪಟ್ಟಣ ಪಂಚಾಯಿತಿ ಹಾಗೂ ಎರಡು ಪುರಸಭೆಗಳು ತಾಲೂಕಿನಲ್ಲಿದ್ದವು. ಅನಂತರ ೧೯೯೧ ರಿಂದೀಚೆಗೆ ತಿ.ನರಸೀಪುರ ಹಾಗೂ ಬನ್ನೂರುಗಳಷ್ಟೇ ಪಟ್ಟಣ ಪ್ರದೇಶಗಳಾಗಿ ಮುಂದುವರಿದು, ಉಳಿದವು ಗ್ರಾಮೀಣ ಪ್ರದೇಶಗಳ ವರ್ಗಕ್ಕೆ ಸೇರಿದವು. ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ ಪಟ್ಟಣ ಜನಸಂಖ್ಯೆಯ ಪ್ರಮಾಣವು ೧೯೦೧ರಲ್ಲಿ ಶೇ. ೮.೫೮ ಇದ್ದರೆ, ೧೯೫೧ರಲ್ಲಿ ಶೇ. ೯.೬೦ಕ್ಕೆ ಏರಿತ್ತು. ೧೯೭೧ರಲ್ಲಿ ಶೇ. ೧೦.೧೩ ಇದ್ದು, ಮುಂದೆ ೧೯೯೧ರಲ್ಲಿ ಶೇ. ೧೦.೦೩ ರಷ್ಟಿತ್ತು. ೨೦೦೧ರ ಗಣತಿಯನ್ವಯ ತಾಲೂಕಿನ ಎರಡು ಪಟ್ಟಣಗಳ ಒಟ್ಟು ಜನಸಂಖ್ಯೆಯು ೩೩,೧೬೬ (೧೬,೮೧೪ ಪುರುಷರು ಹಾಗೂ ೧೬,೩೫೨ ಮಹಿಳೆಯರು) ಆಗಿತ್ತು.



**ಅಂಗವಿಕಲರು :** ಅಂಗವಿಕಲ ಜನರ ಗಣತಿಯನ್ನು ೧೯೩೧ರವರೆಗೆ ನಡೆಸಲಾಯಿತಾದರೂ ೧೯೪೧ರಲ್ಲಿ ಕೈಬಿಡಲಾಯಿತು. ಆದರೆ ಮುಂದೆ ೧೯೮೧ರಿಂದ ಅದನ್ನು ಪುನರಾರಂಭಿಸಲಾಯಿತು. ಆರಂಭದಲ್ಲಿ ಕುರುಡರು – ಕಿವುಡರು – ಕುಂಟರನ್ನು ಗಣಿಸಲಾಗುತ್ತಿದ್ದು, ಅದರಂತೆ ೧೯೮೧ರಲ್ಲಿ ೧೧೫ ಕುರುಡರು, ೧೦೩ ಕಿವುಡರು ಹಾಗೂ ೧೨೦ ಅಂಗವಿಕಲರು ತಾಲೂಕಿನಲ್ಲಿದ್ದರು. ಅಂಗವಿಕಲರಿಗಾಗಿ ಸರ್ಕಾರ ನೀಡುವ ಮಾಸಿಕ ೫೦ ರೂ.ಗಳ ವೇತನವನ್ನು ೧೯೮೭ರ ವೇಳೆಗೆ ತಾಲೂಕಿನ ೧೬೦೨ ಅಂಗವಿಕಲರು ಪಡೆಯುತ್ತಿದ್ದರು. ೨೦೦೧ರ ಜನಗಣತಿಯಂತೆ ತಾಲೂಕಿನಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಅಂಗವಿಹೀನರಿದ್ದರು. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೪೧೪೫ ಮಂದಿ ಅಂಗವಿಕಲರಿಗೆ ಮಾಸಾಶನ ನೀಡಲಾಗಿತ್ತು. ಸಾಮಾನ್ಯ ಸಂದರ್ಭಗಳಲ್ಲಿ ರೂ. ೪೦೦/– ಮಾಸಿಕ ವೇತನ ನೀಡಲಾಗುತ್ತಿದ್ದು, ಅಂಗವಿಕಲತೆಯು ಶೇ. ೭೫ಕ್ಕಿಂತ ಹೆಚ್ಚಿದ್ದಲ್ಲಿ ರೂ. ೧,೦೦೦/– ಮಾಸಿಕ ವೇತನವನ್ನು ೦೧.೦೪.೨೦೦೯ರಿಂದ ನೀಡಲಾಗುತ್ತದೆ.

**ಪರಿಶಿಷ್ಟ ಜಾತಿ:** ಸಂವಿಧಾನದ ೩೪೧ನೆಯ ಪರಿಚ್ಛೇದದನ್ವಯ ಆದಿ ಕರ್ನಾಟಕ, ಆದಿದ್ರಾವಿಡ, ಬೋವಿ, ಮಾದಿಗ, ಮೋಚಿ, ಹೊಲೆಯ ಕೊರಮ, ಲಮಾಣಿ, ಹಂದಿ ಜೋಗಿ, ಜಾಂಬವ, ಚಮ್ಮಾರ, ಮಾದರ, ಮುಂತಾದವನ್ನು ಪರಿಶಿಷ್ಟ ಜಾತಿಯವರೆಂದು ಪಟ್ಟಿ ಮಾಡಲಾಗಿದೆ. ಆ ಪ್ರಕಾರ ೧೯೭೧ರಲ್ಲಿ ತಾಲೂಕಿನಲ್ಲಿ ಪರಿಶಿಷ್ಟ ಜಾತಿಯ ೪೦,೬೦೧ (೩೮,೪೫೪ ಗ್ರಾಮೀಣ ಹಾಗೂ ೨,೧೪೭ ಪಟ್ಟಣ) ಜನರಿದ್ದರು. ಅದೇ ೨೦೦೧ರ ಗಣತಿಯನ್ವಯ ಇವರ ಒಟ್ಟು ಜನಸಂಖ್ಯೆಯು ೭೦,೩೬೯ಕ್ಕೆ (೬೬,೨೭೮ ಗ್ರಾಮೀಣ ಹಾಗೂ ೪,೦೯೧ ಪಟ್ಟಣ) ಏರಿತ್ತು.

**ಪರಿಶಿಷ್ಟ ಪಂಗಡ :** ಸಂವಿಧಾನದ ೩೪೨ನೆಯ ಪರಿಚ್ಛೇದದನ್ವಯ ಹಕ್ಕಿಪಿಕ್ಕಿ, ಇರುಳಿಗ, ಜೇನುಕುರುಬ, ಕಾಡುಕುರುಬ, ಕೊಂಡಕಾಪು, ಗೌಡಲು, ಡೋಲಿಗ, ಕೊರಗ, ಕಣಿಯ, ಕುರುಮ ಮುಂತಾದ ಬುಡಕಟ್ಟಿನ ಜನರನ್ನು ಪರಿಶಿಷ್ಟ ಪಂಗಡದವರೆಂದು

ಪರಿಗಣಿಸಲಾಗಿದೆ. ಆ ಪ್ರಕಾರ ೧೯೭೧ರ ಜನಗಣತಿಯಂತೆ ತಾಲೂಕಿನಲ್ಲಿ ಕೇವಲ ೬೩ (೬೨ ಗ್ರಾಮಾಂತರ ಒಂದು ನಗರ) ಮಂದಿ ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರಿದ್ದರು. ಅದೇ ೨೦೦೧ರ ಗಣತಿಯಂತೆ ಈ ಗುಂಪಿಗೆ ಸೇರಿದ ಒಟ್ಟು ಜನಸಂಖ್ಯೆಯು ೩೭,೪೪೮ (೩೧,೮೪೯ ಗ್ರಾಮಾಂತರ ಹಾಗೂ ೫,೫೯೯ ನಗರ) ಕ್ಕೆ ಹೆಚ್ಚಳಗೊಂಡಿತು.

**ಭಾಷೆಗಳು :** ತಾಲೂಕಿನಲ್ಲಿ ವಿವಿಧ ಭಾಷೆಗಳನ್ನು ಮಾತೃಭಾಷೆಯನ್ನಾಗಿ ಹೊಂದಿರುವ ಜನರಿದ್ದಾರೆ. ೧೯೭೧ರ ಜನಗಣತಿಯಂತೆ ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ (೧,೮೨,೩೪೦) ೧,೭೦,೩೬೫ ಜನ ಕನ್ನಡ ಮಾತೃಭಾಷಿಕರು ೭೮೪೨ ಮಂದಿ ಉರ್ದು ಮಾತೃಭಾಷಿಕರು, ೨೧೫೭ ಜನ ತೆಲುಗು ಮಾತೃಭಾಷಿಕರು, ೩೨೧ ಮಂದಿ ಮರಾಠಿ ಮಾತೃಭಾಷಿಕರು ಹಾಗೂ ೨೨೨ ಜನ ತುಳುಮಾತೃಭಾಷಿಕರು ಇದ್ದರು. ಆಗ ಜಿಲ್ಲೆಯಲ್ಲಿ ಕನ್ನಡ ಮಾತೃಭಾಷಿಕರು ಅಧಿಕ ಸಂಖ್ಯೆಯಲ್ಲಿರುವ ತಾಲೂಕುಗಳಲ್ಲಿ ನರಸೀಪುರ ತಾಲೂಕು ಮೂರನೆಯ ಸ್ಥಾನದಲ್ಲಿತ್ತು. ಅದೇ ೨೦೦೧ರ ಜನಗಣತಿಯ ಪ್ರಕಾರ ೨,೫೯,೫೩೮ ಕನ್ನಡ ಮಾತೃಭಾಷಿಕರು, ೫೨,೬೨೧ ಉರ್ದು ಮಾತೃಭಾಷಿಕರು, ೩,೮೬೮ ತೆಲುಗು ಮಾತೃಭಾಷಿಕರು, ೧,೧೮೩ ತಮಿಳು ಮಾತೃ ಭಾಷಿಕರು, ೬೫೬ ಮಂದಿ ಹಿಂದಿ ಮಾತೃಭಾಷಿಕರು ೪೫೬ ಮರಾಠಿ ಮಾತೃಭಾಷಿಕರು, ೨೫೨ ಮಂದಿ ಕೊಡವ ಮಾತೃಭಾಷಿಕರು, ೧೯೬ ಮಂದಿ ಮಲೆಯಾಳಿ ಭಾಷಿಕರು, ೮೫ ಜನ ಓರಿಯಾ ಭಾಷಿಕರು, ೭೪ ತುಳು ಮಾತೃಭಾಷಿಕರು ಹಾಗೂ ಇತರೆ ಭಾಷೆಗಳನ್ನಾಡುವ ೭೮ ಜನರು ತಾಲೂಕಿನಲ್ಲಿದ್ದರು.

**ಧರ್ಮಗಳು :** ತಾಲೂಕಿನಲ್ಲಿ ಹಿಂದೂ, ಜೈನ, ಇಸ್ಲಾಂ ಹಾಗೂ ಕ್ರೈಸ್ತ ಧರ್ಮಾವಲಂಬಿಗಳು ಬಹು ಹಿಂದಿನಿಂದಲೂ ಸಾಮರಸ್ಯದಿಂದ ಜೀವಿಸುತ್ತಿದ್ದಾರೆ. ಈ ಧರ್ಮಗಳಲ್ಲಿ ಮೊದಲಿನೆರಡು ಅನಾದಿ ಕಾಲದಿಂದಲೂ ಅಸ್ತಿತ್ವದಲ್ಲಿದ್ದರೆ, ಇಸ್ಲಾಂ ಹಾಗೂ ಕ್ರೈಸ್ತ ಧರ್ಮಗಳು ಮಧ್ಯಯುಗದಲ್ಲಿ ತಾಲೂಕನ್ನು ಪ್ರವೇಶಿಸಿದ್ದಾಗಿವೆ. ತಾಲೂಕಿನಲ್ಲಿ ಹಿಂದೂ ಧರ್ಮಾವಲಂಬಿಗಳೇ ಅಧಿಕ ಸಂಖ್ಯೆಯಲ್ಲಿದ್ದು, ನಂತರದ ಸ್ಥಾನ ಇಸ್ಲಾಂ ಧರ್ಮದ್ದಾಗಿದ್ದು, ಮುಸ್ಲೀಮರು ವಿಶೇಷವಾಗಿ ನಗರಪ್ರದೇಶದಲ್ಲಿದ್ದಾರೆ. ಜೈನ ಹಾಗೂ ಕ್ರೈಸ್ತ ಧರ್ಮಾವಲಂಬಿಗಳು ತಾಲೂಕಿನಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿದ್ದಾರೆ. ೧೯೮೧ರ ಜನಗಣತಿಯ ಪ್ರಕಾರ ತಾಲೂಕಿನಲ್ಲಿ ೨,೦೯,೭೦೦ ಜನ ಹಿಂದೂಗಳು ೧೦,೨೩೪ ಮಂದಿ ಮುಸ್ಲಿಮರು, ೩೩೧ ಕ್ರೈಸ್ತರು, ೧೯ ಜೈನರು ೪೨ ಜನ ಇತರ ಧರ್ಮಿಯರು ಹಾಗೂ ಯಾವುದೇ ಧರ್ಮ ವ್ಯಕ್ತಪಡಿಸದ ಮೂರು ಜನರಿದ್ದರು. ಅದೇ ೨೦೦೧ರ ಜನಗಣತಿಯನ್ವಯ ತಾಲೂಕಿನಲ್ಲಿ ೨,೫೪,೨೦೬ ಹಿಂದು, ೧೨,೬೫೧ ಮುಸ್ಲಿಮರು, ೧೧,೦೯೯ ಬೌದ್ಧರು, ೫೮೨ ಕ್ರೈಸ್ತರು ೧೬೫ ಜೈನರು, ೨೩ ಸಿಖ್ಖರು, ೬೧ ಜನ ಇತರೆ ಧರ್ಮಿಯರು ಹಾಗೂ ಯಾವುದೇ ಧರ್ಮ ಸೂಚಿಸದ ೨೧೮ ಜನರಿದ್ದರು.

**ಹಿಂದೂ ಧರ್ಮ :** ಕರ್ನಾಟಕವು ಅನೇಕ ಧರ್ಮಗಳ ನೆಲೆಬೀಡಾಗಿದ್ದರೂ ಬಹುಪಾಲು ಹಿಂದೂ ಧರ್ಮೀಯರಾಗಿದ್ದಾರೆ. ಇವರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯು



ನೆಲೆಸಿದ್ದಾರೆ. 'ಹಿಂದೂ' ಎಂಬ ಪದವು ಸಿಂಧೂ ಪದದ ಮೂಲದಿಂದ ಉಗಮವಾಗಿದ್ದು, ವಿಶ್ವದ ಧರ್ಮಗಳ ಪೈಕಿ ಸನಾತನ ಅಥವಾ ಅತ್ಯಂತ ಪ್ರಾಚೀನ ಧರ್ಮವೆಂದು ಜನಪ್ರಿಯವಾಗಿದೆ. ಪ್ರಸಿದ್ಧ ಇತಿಹಾಸಕಾರ ವಿಲ್‌ಡ್ಯೂರಾಂಟ್ 'ಹಿಂದೂ ಧರ್ಮವು ವಿಶ್ವದ ಎಲ್ಲಾ ಧರ್ಮಗಳಿಗೆ ಮಾತೃಸ್ಥಾನದಲ್ಲಿದೆ' ಎಂದು ಅಭಿಪ್ರಾಯಪಟ್ಟಿದ್ದಾನೆ. ಹಿಂದೂ ಧರ್ಮವು ಕೇವಲ ಏಕೈಕ ಪ್ರವಾದಿಯಿಂದ ಪ್ರತಿಪಾದಿತವಾಗಿರದೇ ಹಲವಾರು ಋಷಿ ಮುನಿಗಳ ಅಧ್ಯಾತ್ಮಿಕ ಅನುಭವದ ಫಲವಾಗಿ ಅನಾದಿಕಾಲದಿಂದಲೂ ಆಚರಣೆಗೆ ಬಂದುದರಿಂದ ಈ ಧರ್ಮಕ್ಕೆ ಸನಾತನ ಧರ್ಮವೆಂದು ಕರೆಯಲಾಗುತ್ತದೆ. ವೇದಗಳನ್ನು ಅಪೌರುಷೇಯವೆಂದು ಪರಿಗಣಿಸಲಾಗಿದ್ದು, ದೇವಾನುದೇವತೆಗಳಿಂದ ಮೌಖಿಕವಾಗಿ ಬಂದಿತೆಂಬ ಅಭಿಪ್ರಾಯವೂ ಹಿಂದೂಗಳಲ್ಲಿದೆ. ಕೆಲವು ವಿದ್ವಾಂಸರ ಪ್ರಕಾರ ಹಿಂದೂ ಧರ್ಮವು ಕೇವಲ ಆಧ್ಯಾತ್ಮಗಳಿಂದ ಕೂಡಿದ ಧರ್ಮವಾಗಿರದೇ ಹೆಚ್ಚಾಗಿ ಮನುಕುಲದ ಉನ್ನತ ಆದರ್ಶಗಳನ್ನೊಳಗೊಂಡ ಜೀವನ ಮಾರ್ಗವಾಗಿದೆ.

ಹಿಂದೂ ಧರ್ಮದ ಪ್ರಮುಖ ಪಂಥಗಳಾದ ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ ಕ್ರಿ.ಶ. ಒಂಭತ್ತನೇ ಶತಮಾನದ ನಂತರ ಪ್ರತಿಪಾದನೆಗೊಂಡವು. ಕ್ರಿ.ಶ. ಒಂಭತ್ತನೇ ಶತಮಾನದಲ್ಲಿ ಕೇರಳದ ಕಾಲಟಿಯಲ್ಲಿ ಆದಿಶಂಕರಾಚಾರ್ಯರು ಅದ್ವೈತ ಮತವನ್ನು ಪ್ರತಿಪಾದಿಸಿದರು. ಇವರು ಪ್ರಥಮ ಬಾರಿಗೆ ಆತ್ಮನಲ್ಲೇ ಪರಮಾತ್ಮನು ಅಸ್ತಿತ್ವದಲ್ಲಿರುವುದರಿಂದ "ಅಹಂ ಬ್ರಹ್ಮಾಸ್ಮಿನ್" ಹಾಗೂ 'ತತ್ವಮಸಿ' ತತ್ವಗಳನ್ವಯ ಅದ್ವೈತವನ್ನು ಬೋಧಿಸಿದರು. ದೇವಾನು ದೇವತೆಗಳ ಐಕ್ಯತೆಯನ್ನು ಸಾಮಾನ್ಯರಿಗೆ ದರ್ಶನ ಮಾಡಿಸಿದರು. ಆಕಾಶದಿಂದ ಭೂಮಿಗೆ ಬಿದ್ದ ಸಹಸ್ರಾರು ಮಳೆಯ ಹನಿಗಳು ಏಕರೂಪವಾಗಿ ಹರಿದು ಸಾಗರಕ್ಕೆ ಸೇರುವ ರೀತಿಯಲ್ಲಿ ಸರ್ವಶಕ್ತನಾದ ಬ್ರಹ್ಮನೊಬ್ಬನೇ ಸತ್ಯ, ಜಗತ್ತು ಮಿಥ್ಯೆ ಹಾಗೂ ಪುನರ್‌ಜನ್ಮವು ಸಹಜವಾದ ಪ್ರಕ್ರಿಯೆಯೆಂದು ಪ್ರತಿಪಾದಿಸಿದ ಕಾರಣ ಈ ಪಂಥಕ್ಕೆ 'ಅದ್ವೈತ'ವೆಂಬ ಹೆಸರು ರೂಢಿಗೆ ಬಂದಿತು. ಎಲ್ಲಾ ಆತ್ಮರೂ ಏಕರೀತಿಯ ಮೋಕ್ಷವನ್ನು ಪಡೆಯುವರು ಎಂಬುದು ಆದಿಶಂಕರಾಚಾರ್ಯರ ದೃಢವಾದ ಅಭಿಪ್ರಾಯವಾಗಿತ್ತು. ಕ್ರಿ.ಶ. ೧೧ನೇ ಶತಮಾನದಲ್ಲಿ ತಮಿಳುನಾಡಿನ ಶ್ರೀಪೆರಂಬುದೂರಿನಲ್ಲಿ ಜನ್ಮತಾಳಿದ ರಾಮಾನುಜಾಚಾರ್ಯರು ಬ್ರಹ್ಮನು 'ಚಿತ್' ಮತ್ತು 'ಸಚಿತ್' ಎಂಬ ವಿಶೇಷವಾದ ಗುಣಗಳನ್ನು ಹೊಂದಿರುವುದರಿಂದ ಆತನ ಸಾಕ್ಷಾತ್ಕಾರವು ಸಾಧ್ಯವೇ ಹೊರತು ಆತನೊಂದಿಗೆ ಮಿಲನ ಸಾಧ್ಯವಿಲ್ಲವೆಂದು ಪ್ರತಿಪಾದಿಸಿದರು. ಈ ಪಂಥಕ್ಕೆ ವಿಶಿಷ್ಟಾದ್ವೈತವೆಂದು ಕರೆದು ಅದರ ಹಿಂಬಾಲಕರನ್ನು ಶ್ರೀವೈಷ್ಣವರೆಂದು ಪರಿಗಣಿಸಲಾಯಿತು. ಶ್ರೀವೈಷ್ಣವರಲ್ಲಿ ಆತ್ಮನು ಸ್ವಯಂ ಸಾಧನೆಯಿಂದ ಬ್ರಹ್ಮಜ್ಞಾನವನ್ನು ಪಡೆಯುವುದರ ಮೂಲಕ ಮೋಕ್ಷವನ್ನು ಗಳಿಸಬಹುದೆಂದು ರಾಮಾನುಜಾಚಾರ್ಯರು ಪ್ರತಿಪಾದಿಸಿದ್ದಾರೆ. ಕರ್ನಾಟಕದ ಉಡುಪಿಯ ಬಳಿಯ ಪಾಜಕ ಅಥವಾ ಬೆಳ್ಳೆಯಲ್ಲಿ ಜನ್ಮ ತಾಳಿದ ಮಧ್ವಾಚಾರ್ಯರು ಆತ್ಮ ಮತ್ತು ಪರಮಾತ್ಮರ ನಡುವೆ ಇರುವ ಪಂಚಬೇಧ ತಾರತಮ್ಯಗಳನ್ನು ಪ್ರತಿಪಾದಿಸಿದರು. ಈ ಕಾರಣದಿಂದಾಗಿ ಈ ಪಂಥಕ್ಕೆ 'ದ್ವೈತಮತ'ವೆಂದು ಕರೆಯಲಾಯಿತು. ಈ ಪಂಥದ ಪ್ರಕಾರ ಆತ್ಮ–ಪರಮಾತ್ಮ ಸಂಬಂಧಗಳು ಸಂಪೂರ್ಣವಾಗಿ

ದಾಸತ್ವದ ಸಂಕೇತವಾಗಿದ್ದು, ಸರ್ವಶಕ್ತನಾದ ವಿಷ್ಣುವಿನ ಹರಿ ಸರ್ವೋತ್ತಮತ್ವವನ್ನು ಮಧ್ವಾಚಾರ್ಯರು ಬೋಧಿಸಿದರು. ಅವರ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯು ಅವನ ಮಟ್ಟಿಗೆ ಜ್ಞಾನ ಪರಿಪೂರ್ಣತೆಯನ್ನು ಹೊಂದಿರುತ್ತಾನೆ. ಯಾವುದೇ ಕಾರಣಕ್ಕೂ ಸರ್ವಗುಣ ಪರಿಪೂರ್ಣನಾದ ಬ್ರಹ್ಮನು (ಭಗವಂತನು) ಆತ್ಮನಿಗೆ ಸಮಾನನಾಗುವುದಿಲ್ಲ. ಆತ್ಮನು ಇಹ ಮತ್ತು ಪರಲೋಕಗಳಲ್ಲಿ ಪರಮಾತ್ಮನ ಅಧೀನನಾಗಿರುತ್ತಾನೆಂಬ ದಾಸತ್ವಭಾವವನ್ನು ಪ್ರಥಮ ಬಾರಿಗೆ ಪ್ರತಿಪಾದಿಸಿದರು. ಅಲ್ಲದೆ, ಆಯಾ ವ್ಯಕ್ತಿಯ ಸಾಧನೆಯ ಮೇರೆಗೆ ಯೋಗ್ಯತಾನುಸಾರ ಮೋಕ್ಷವು ಲಭಿಸುತ್ತದೆಂದೂ ಬೋಧಿಸಿದರು. ದ್ವೈತ ಧರ್ಮವು ದೃಢವಾಗಿ ಹೊಂದಿದ್ದ ದಾಸತ್ವಮನೋಭಾವದ ಫಲವಾಗಿ ಹರಿದಾಸ ಸಾಹಿತ್ಯವು ವಿಫುಲವಾಗಿ ಕರ್ನಾಟಕದಲ್ಲಿ ಬೆಳೆದು ಬರಲು ಸಾಧ್ಯವಾಯಿತು. ಈ ಮೂರು (ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ) ಪಂಥಗಳು ಸಂಪೂರ್ಣವಾಗಿ ಪ್ರಾಚೀನ ಧಾರ್ಮಿಕ ಗ್ರಂಥಗಳಾದ ವೇದ, ಉಪನಿಷತ್ತು, ಅರಣ್ಯಕ, ಬ್ರಾಹ್ಮಣ, ರಾಮಾಯಣ, ಮಹಾಭಾರತ (ಭಗವದ್ಗೀತೆ) ಮುಂತಾದವುಗಳ ಅಧ್ಯಾತ್ಮಿಕ ಅಧ್ಯಯನದ ಪ್ರತಿರೂಪಗಳೇ ಆಗಿ ಪ್ರತಿಪಾದಿತವಾಗಿದ್ದು ಹಿಂದೂ ಧರ್ಮದ ಅಧ್ಯಾತ್ಮಿಕ ಬೆಳವಣಿಗೆಗೆ ದಾರಿದೀಪಗಳಾಗಿವೆ.

ಕರ್ನಾಟಕದಲ್ಲಿ ಕ್ರಿ.ಶ. ೧೨ನೇ ಶತಮಾನದಲ್ಲಿ ಜಗಜ್ಯೋತಿ ಬಸವಣ್ಣನವರು ಪ್ರತಿಪಾದಿಸಿದ ವೀರಶೈವ (ಶಕ್ತಿ ವಿಶಿಷ್ಟಾದ್ವೈತ) ಧರ್ಮವು ಹಿಂದೂ ಧರ್ಮದಲ್ಲಿ ಅಡಕವಾಗಿದ್ದ ಸತ್ವಸಾರಗಳನ್ನು ಸ್ಥಳೀಯ ಹಾಗೂ ಸರಳವಾದ ಕನ್ನಡ ಭಾಷೆಯಲ್ಲಿ ಬೋಧಿಸಿದ ಕಾರಣ ಜನಪ್ರಿಯವಾಯಿತು. ವೀರಶೈವ ಧರ್ಮವು ಸಾಮಾಜಿಕ ಜೀವನಕ್ಕೆ ಅವಶ್ಯಕವಾದ ನೀತಿ ಬೋಧನೆಗಳಿಂದ ಕೂಡಿದ್ದು, ಆಧ್ಯಾತ್ಮಿಕ ವಿಚಾರಗಳು ಸಂಸ್ಕೃತ ಭಾಷೆಗೆ ಬದಲಾಗಿ ಸರಳ ಕನ್ನಡ ಭಾಷೆಯಲ್ಲಿದ್ದು, ಕರ್ನಾಟಕದಲ್ಲಿ ಮಾತ್ರವಲ್ಲದೇ ಭಾರತದ ಇತರೆ ಪ್ರದೇಶಗಳಿಗೂ ಪಸರಿಸಿತು. ಈ ಧರ್ಮದಲ್ಲಿ ಬೆಳೆದು ಬಂದ ವಚನ ಸಾಹಿತ್ಯವು ಕನ್ನಡ ಭಾಷೆ ಮತ್ತು ಸಾಹಿತ್ಯದ ಧೀರೋದಾತ್ತ ಅಭಿವೃದ್ಧಿಗೆ ಕಾರಣವಾಯಿತೆಂಬುದು ಹಲವಾರು ವಿದ್ವಾಂಸರ ಅಭಿಪ್ರಾಯವಾಗಿದೆ.

**ಶಕ್ತಿಪಂಥ :** ಮಾತೃದೇವತಾ ಆರಾಧನೆ ಕರ್ನಾಟಕದಲ್ಲಿ ಬಹಳ ಪ್ರಾಚೀನ ಧಾರ್ಮಿಕ ಪದ್ಧತಿಯಾಗಿದ್ದು, ಗ್ರಾಮದೇವತೆಯನ್ನು ಶಿಲೆ, ಶಿಲ್ಪ ಇಲ್ಲವೇ ಚಿಹ್ನೆಯ ರೂಪದಲ್ಲಿ ಬಯಲಲ್ಲಿ ಇಲ್ಲವೇ ಗುಡಿಯಲ್ಲಿ ಆರಾಧಿಸಲಾಗುತ್ತದೆ. ಜಿಲ್ಲೆಯಲ್ಲಿ ಸಪ್ತಮಾತೃಕಾ (ಏಳು ತಾಯಂದಿರು) ಆರಾಧನೆಯು ಬಹಳ ಪುರಾತನವಾಗಿದ್ದು, ತಾಲೂಕಿನ ಕಲಿಯೂರು, ತಡಿಮಾಲಂಗಿ, ಆಲ್ಗೋಡು, ತಲಕಾಡು, ಮೂಗೂರು, ಸೋಸಲೆ, ಮುಂತಾದೆಡೆಗಳಲ್ಲಿ ಗಂಗರ ಕಾಲದ ಸಪ್ತಮಾತೃಕಾ ಶಿಲ್ಪ ಹಾಗೂ ಗುಡಿಗಳಿವೆ. ಅದರಲ್ಲೂ ಕಲಿಯೂರಿನ ಪಾಳುಗುಡಿಯಲ್ಲಿರುವ ಗಂಗರ ಕಾಲದ ಸಪ್ತಮಾತೃಕಾ ಶಿಲ್ಪಗಳು ಉಲ್ಲೇಖಾರ್ಹ. ಮೂಗೂರಿನ ತಿಬ್ಬಾದೇವಿಯು ಹೊಯ್ಸಳ ಶಾಸನದಲ್ಲಿ ಉಲ್ಲೇಖಿತಗೊಂಡಿದ್ದರೆ, ತಲಕಾಡಿನ ಬಂಡರಸಮ್ಮ, ಬನ್ನೂರಿನ ಹೇಮಾದ್ರಮ್ಮ, ಅಲ್ಗೋಡಿನ ಚಿಕ್ಕಮ್ಮ, ಸೋಸಲೆಯ ಹೊನ್ನಾದೇವಿ, ಮುಡುಕುತೊರೆಯ ಪಾರ್ವತಿ, ಮುಂತಾದವರು ತಾಲೂಕಿನ ಇತರೇ ಪ್ರಮುಖ ಶಕ್ತಿದೇವತೆಯರಾಗಿದ್ದು, ವಾರ್ಷಿಕ ಜಾತ್ರೆಯು ನಡೆಯುತ್ತವೆ. ಮೂಗೂರಿನಲ್ಲಿರುವ ತಿಬ್ಬಾದೇವಿಯು ಸಪ್ತಮಾತೃಕೆಯರಲ್ಲಿ ಕಿರಿಯಳಿದ್ದು, ಲಕ್ಷ್ಮಿಯ ಸ್ವರೂಪದ ವೈಷ್ಣವಿ ಎಂಬ ಅಭಿಪ್ರಾಯವಿದ್ದು, ಉಳಿದವರು ಸೋಸಲೆಯ ಹೊನ್ನಾದೇವಿ, ಕಳಲೆಯ (ನಂಜನಗೂಡು ತಾ.)ಯ ಕೆಲ್ಲಾದೇವಿ, ಬಾಗಳಿ (ಚಾಮರಾಜನಗರ ತಾ.)ಯ ಅರಸಮ್ಮ, ಬನ್ನೂರಿನ ಹೇಮಾದ್ರಮ್ಮ, ತಲಕಾಡಿನ ಬಂಡರಸಮ್ಮ ಹಾಗೂ ಆಲ್ಗೋಡಿನ ಚಿಕ್ಕಮ್ಮತಾಯಿಯರೆಂಬ ಅಭಿಪ್ರಾಯವಿದೆ. ತಾಲೂಕಿನಾದ್ಯಂತ ದೊಡ್ಡತಾಯಮ್ಮ, ಚಿಕ್ಕತಾಯಮ್ಮ, ಮಾರಮ್ಮ ಮುಂತಾದ ಗ್ರಾಮದೇವತೆಯರಿದ್ದು, ಜಾತ್ರೆ ಸಂದರ್ಭದಲ್ಲಿ ಕೆಂಡ ಹಾಯುವುದು ಸರ್ವೇಸಾಮಾನ್ಯವಾಗಿದ್ದು, ಪ್ರಾಣಿಬಲಿಯನ್ನು ಕಾನೂನುರೀತ್ಯಾ ನಿರ್ಬಂಧಿಸಲಾಗಿದೆ.



**ಶೈವಪಂಥ :** ಶಿವನನ್ನು ನಾನಾರೂಪದಲ್ಲಿ ಆರಾಧಿಸಲಾಗುತ್ತಾದರೂ, ಶಿವಲಿಂಗಾರಾಧನೆ ಅತ್ಯಂತ ಪ್ರಾಚೀನ ಪದ್ಧತಿಯಾಗಿದ್ದು ಸಿಂಧೂ ನಾಗರಿಕತೆಯಲ್ಲಿ ಹಲವು ಪುರಾವೆಗಳಿವೆ. ತಾಲೂಕಿನ ತಲಕಾಡು, (ಪಂಚಲಿಂಗೇಶ್ವರ), ಬನ್ನೂರು (ಕೈಲಾಸೇಶ್ವರ) ಮುಡುಕುತೊರೆ (ಮಲ್ಲಿಕಾರ್ಜುನ) ತಿರುಮಕೂಡಲು (ಅಗಸ್ತೇಶ್ವರ) ಮೂಗೂರು (ದೇಶೇಶ್ವರ) ತಡಿಮಾಲಂಗಿ (ಸೋಮೇಶ್ವರ), ಗರ್ಗೇಶ್ವರಿ (ಗಾರ್ಗೇಶ್ವರ), ಮುಂತಾದವು ಪುರಾತನ ಶೈವಕೇಂದ್ರಗಳಾಗಿದ್ದ ಅಂಶ ಶಾಸನಗಳಿಂದ ವೇದ್ಯವಾಗುತ್ತದೆ. ಅದರಲ್ಲೂ ತಲಕಾಡಿನ ಪಂಚಲಿಂಗದರ್ಶನ, ತಿರುಮಕೂಡಲಿನ ಕುಂಭಮೇಳಗಳು ಪ್ರಸಿದ್ಧವಾಗಿವೆ. ಹರದನಹಳ್ಳಿಯ ದಿವ್ಯಲಿಂಗೇಶ್ವರದಲ್ಲಿ ಇತ್ತೀಚಿನವರೆಗೂ ನ್ಯಾಯತೀರ್ಮಾನದಲ್ಲಿ ಅಗ್ನಿದಿವ್ಯ ನಡೆಸುವುದು ರೂಢಿಯಲ್ಲಿತ್ತು. ಮಹದೇಶ್ವರಬೆಟ್ಟದ ಮಹದೇಶ್ವರ ಮತ್ತು ಮುಡುಕುತೊರೆ ಪಾರ್ವತಿ ಒಕ್ಕಲಿಗೆ ಸೇರಿದ ದೇವರಗುಡ್ಡರು, ಗೊರವರು; ಮಂಟೇಸ್ವಾಮಿ ಸಂಪ್ರದಾಯದ ನೀಲಗಾರರು ತಾಲೂಕಿನಲ್ಲಿ ಕಂಡುಬರುತ್ತಿದ್ದು, ಜಾತ್ರೆ ಸಂದರ್ಭದಲ್ಲಿ ಮುಡುಕುತೊರೆಯಲ್ಲಿ ಕಾಣಸಿಗುವ ಇವರು ತಮ್ಮ ಕುಣಿತ ಗುಗ್ಗರಗಳಿಂದ ಗಮನ ಸೆಳೆಯುತ್ತಾರೆ. ವೀರಶೈವ ಪಂಥಿಯರೂ ತಾಲೂಕಿನಲ್ಲಿದ್ದು, ತಲಕಾಡು, ಚಿದರಳ್ಳಿ, ಮುಡುಕುತೊರೆ, ಮೂಗೂರು, ಸೋಸಲೆ, ವಾಟಾಳು, ಮಾದಾಪುರ ಮುಂತಾದೆಡೆಗಳಲ್ಲಿರುವ ವೀರಶೈವಮಠಗಳ ಉಲ್ಲೇಖ ಮಧ್ಯಕಾಲೀನ ಶಾಸನಗಳಲ್ಲಿದೆ.

**ವೈಷ್ಣವ ಪಂಥ :** ವಿಷ್ಣುವನ್ನು ರಾಮ, ಕೃಷ್ಣ, ನರಸಿಂಹ, ಜನಾರ್ಧನ, ಚನ್ನಕೇಶವ, ನಾರಾಯಣ, ವೇಣುಗೋಪಾಲ ಮುಂತಾದ ರೂಪಾವತಾರಗಳಲ್ಲಿ ಬಹುಹಿಂದಿನಿಂದಲೂ ಆರಾಧಿಸಲಾಗುತ್ತಿದೆ. ತಾಲೂಕಿನ ತಡಿಮಾಲಂಗಿ ಹಾಗೂ ಬನ್ನೂರುಗಳಲ್ಲಿರುವ ಚೋಳರ ಕಾಲದ ಜನಾರ್ಧನ ; ಹೊಯ್ಸಳರ ಕಾಲದ ಸೋಮನಾಥಪುರದ ಕೇಶವ, ತಲಕಾಡಿನ ಕೀರ್ತಿನಾರಾಯಣ, ಮೂಗೂರಿನ ಚನ್ನಕೇಶವ, ಆಲ್ಗೋಡಿನ ನಾರಾಯಣ, ನರಸೀಪುರದ ಗುಂಜಾನರಸಿಂಹ, ಸೋಸಲೆ ಹಾಗೂ ಕೃಷ್ಣಾಪುರಗಳ ಗೋಪಾಲಕೃಷ್ಣ, ತುಂಬಲದ ಕಂಬದರಾಯ, ಒಡ್ಡಗಲ್ ರಂಗನಾಥ ಮುಂತಾದ ದೇವಾಲಯಗಳು ವೈಷ್ಣವ ಧರ್ಮದ ಪ್ರಭಾವಕ್ಕೆ ಈ ತಾಲೂಕು ಕೂಡ ಒಳಗಾಗಿದ್ದ ಅಂಶವನ್ನು ಸ್ಪಷ್ಟಪಡಿಸುತ್ತವೆ. ಶನಿವಾರ, ಶ್ರಾವಣ ಶನಿವಾರಗಳಂದು ವಿಷ್ಣು ಭಕ್ತರು, ವಿಶೇಷವಾಗಿ ವಿಷ್ಣುವನ್ನು ಆರಾಧಿಸುತ್ತಾರೆ.

ಮಧ್ವ, ವೈಷ್ಣವ, ಹಾಗೂ ಶ್ರೀವೈಷ್ಣವ (ರಾಮಾನುಜ) ಪಂಥಗಳನ್ನು ಅನುಸರಿಸುವವರು ತಾಲೂಕಿನಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಸೋಸಲೆಯ ವ್ಯಾಸರಾಜಮಠ ಮಧ್ವ ಸಂಪ್ರದಾಯಕ್ಕೆ ಸೇರಿದ್ದು, ತಿರುಮಕೂಡಲಿನಲ್ಲಿ ವ್ಯಾಸರಾಜ ಮಠದ ಪರಂಪರೆಯ ಶೇಷಚಂದ್ರಿಕಾಚಾರ್ಯರ ಮೂಲ ಬೃಂದಾವನ ಹಾಗೂ ಶಾಖೆ ಮಠಗಳಿದ್ದು, ಬಳಿಯಲ್ಲೇ ಅಶ್ವತ್ಥನಾರಾಯಣ ದೇವಾಲಯವಿದೆ.

**ಇತರೆ ಪಂಥಗಳು :** ಸತ್ಯಸಾಯಿ ಪಂಥ ಹಾಗೂ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಶಾಖೆಗಳು ತಾಲೂಕಿನಲ್ಲಿ ಕಾರ್ಯೋನ್ಮುಖವಾಗಿದ್ದು, ಅಯ್ಯಪ್ಪನನ್ನು ವಿಧಿಬದ್ಧವಾಗಿ ಆರಾಧಿಸುವ ಭಕ್ತವರ್ಗವೊಂದು ಇತ್ತೀಚೆಗೆ ವೃದ್ಧಿಸಲಾರಂಭಿಸಿದ್ದು, ನರಸೀಪುರದಲ್ಲಿ ಅಯ್ಯಪ್ಪಸ್ವಾಮಿಯ ದೇವಾಲಯವೂ ಇದೆ.

**ಬೌದ್ಧಧರ್ಮ :** ಪ್ರಾಚೀನ ಕಾಲಕ್ಕೆ ಸೇರಿದ ಬೌದ್ಧ ಕುರುಹುಗಳು ಈ ತಾಲೂಕಿನಲ್ಲಿ ಅಷ್ಟಾಗಿ ಕಂಡುಬಂದಿಲ್ಲ. ಆದರೂ ತಾಲೂಕಿನಲ್ಲಿ, ೧೧,೦೯ ಮಂದಿ ಬೌದ್ಧ ಧರ್ಮೀಯರಿರುವ ೨೦೦೧ರ ಗಣತಿಯ ಅಂಶ ಉಲ್ಲೇಖಾರ್ಹವಾಗಿದೆ.

**ಜೈನ ಧರ್ಮ :** ನಾಡಿನ ಪ್ರಾಚೀನ ಧರ್ಮಗಳಲ್ಲಿ ಒಂದಾದ ಜೈನಧರ್ಮದ ಪುರಾತನ ಕುರುಹುಗಳು ತಾಲೂಕಿನ ತಲಕಾಡು, ಮೂಗೂರು, ನರಸೀಪುರ ಮುಂತಾದೆಡೆಗಳಲ್ಲಿ ಈಗಲೂ ಕಾಣಸಿಗುತ್ತವೆ. ತಲಕಾಡು ಶ್ರೀಪುರುಷನ ಕಾಲದಲ್ಲೂ, ಮೂಗೂರು ಹತ್ತನೆಯ ಶತಮಾನದಲ್ಲೂ, ನರಸೀಪುರ, ಚಿದರಳ್ಳಿ, ನಿಲಸೋಗೆ, ಆಲ್ಗೋಡು ಮುಂತಾದವು ಹನ್ನೆರಡನೆಯ ಶತಮಾನದಲ್ಲೂ ಪ್ರಮುಖ ಜೈನಕೇಂದ್ರಗಳಾಗಿದ್ದ ಅಂಶ, ಆಯಾ ಊರಲ್ಲಿ ಲಭಿಸಿರುವ ಶಾಸನ, ಮೂರ್ತಿಶಿಲ್ಪಗಳಿಂದ ಸ್ಪಷ್ಟವಾಗುತ್ತದೆ. ತಾಲೂಕಿನಲ್ಲಿ ರೂಢಿಯಲ್ಲಿದ್ದ ಜೈನಧರ್ಮವು ಇಂಗಳೇಶ್ವರ ಮೂಲ ದ್ರಾವಿಡ ಸಂಘಕ್ಕೆ ಸೇರಿದ್ದ ಅಂಶವೂ ಅದೇ ಶಾಸನಗಳಿಂದ ವೇದ್ಯವಾಗುತ್ತದೆ. ಆದರಿಂದು ತಾಲೂಕಿನಲ್ಲಿ ಜೈನಧರ್ಮಾವಲಂಬಿಗಳು ಕಡಿಮೆ ಪ್ರಮಾಣದಲ್ಲಿದ್ದಾರೆ. ಮೂಗೂರಿನ ಆದಿನಾಥ ತೀರ್ಥಂಕರ ಸ್ವಾಮಿಯ ಬಸದಿಯನ್ನು ಇತ್ತೀಚೆಗೆ ದುರಸ್ತಿಗೊಳಿಸಿ ಪೂಜಾವ್ಯವಸ್ಥೆಯನ್ನು ಮಾಡಲಾಗಿದ್ದು, ತಾಲೂಕು ಕೇಂದ್ರ ನರಸೀಪುರದಲ್ಲಿ ಕೆಲವು ಜೈನ ಕುಟುಂಬಗಳಿವೆ.

**ಇಸ್ಲಾಂ :** ಮಹಮದ್ ಪೈಗಂಬರ್‌ನಿಂದ ಸ್ಥಾಪಿಸಲ್ಪಟ್ಟ ಇಸ್ಲಾಂ ಧರ್ಮವು ಅರೇಬಿಯಾದಲ್ಲಿ ಉದಯಿಸಿದ ತರುವಾಯ ಕರ್ನಾಟಕವನ್ನು ಕಡಲತೀರದ ಮೂಲಕ ಪ್ರವೇಶಿಸಿ ಕಾಲಕ್ರಮೇಣ ರಾಜ್ಯದ ಇತರೆ ಭಾಗಗಳಿಗೆ ವ್ಯಾಪಿಸಿತು. ಮೈಸೂರು ಜಿಲ್ಲೆಯಲ್ಲಿ ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನರ ಆಳ್ವಿಕೆಗೂ ಮೊದಲಿನಿಂದಲೇ ಮುಸಲ್ಮಾನರು ಚದುರಿದಂತೆ ನೆಲೆಸಿದ್ದರು. ಹೈದರ್ ಮತ್ತು ಟಿಪ್ಪು ಸುಲ್ತಾನ್ ಆಡಳಿತಾವಧಿಯಲ್ಲಿ ಜಿಲ್ಲೆಯಲ್ಲಿ ರೇಷ್ಮೆ ಉದ್ಯಮವು ಸಕ್ರಿಯವಾಗಿ ಬೆಳೆದುಬಂದು ಮೈಸೂರು, ರೇಷ್ಮೆ ಸೀರೆಗಳಿಗೆ ತವರೂರಾಗಿದೆ. ಈ ಕ್ಷೇತ್ರದಲ್ಲಿ ಟಿಪ್ಪುಸುಲ್ತಾನನು ವಿಶೇಷ ಆಸ್ಥೆ ವಹಿಸಿದ ಕಾರಣ ಆರ್ಥಿಕ ಅಭಿವೃದ್ಧಿಯ ಜೊತೆಗೆ ಕೈಗಾರಿಕಾ ಬೆಳವಣಿಗೆಗೂ ನಾಂದಿಯಾಯಿತು. ಹೈದರ್–ಟಿಪ್ಪು ಕಾಲದಿಂದ ತಾಲೂಕಿನ ನರೀಪುರ, ಗರ್ಗೇಶ್ವರಿ, ಬನ್ನೂರು, ತಲಕಾಡು



ಮುಂತಾದೆಡೆಗಳಲ್ಲಿ ಸುನ್ನಿ ಪಂಥಕ್ಕೆ ಸೇರಿದ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಮೆಹದಿಯ ಡೈರೆ ಎಂಬ ವಿಶಿಷ್ಟ ಪಂಥಕ್ಕೆ ಸೇರಿದ ಮುಸ್ಲಿಮರು ಬನ್ನೂರು ಹಾಗೂ ಕಿರಗಾವಲು (ಮಳವಳ್ಳಿ ತಾ.) ಗಳಲ್ಲಿದ್ದಾರೆಂದು ತಿಳಿದುಬರುತ್ತದೆ. ಗರ್ಗೇಶ್ವರಿಯಲ್ಲಿರುವ ಲಬ್ಬೆ ಮುಸ್ಲಿಮರ ಮಾತೃಭಾಷೆ ತಮಿಳಾಗಿದ್ದು, ಇವರು ತಮಿಳುನಾಡಿನಿಂದ ಬಂದ ವಲಸಿಗರಾಗಿದ್ದು, ವ್ಯಾಪಾರದಲ್ಲಿ ತೊಡಗಿಸಿಕೊಂಡಿದ್ದಾರಾದರೂ, ಹೆಚ್ಚಿನವರು ಕೃಷಿಕರಾಗಿದ್ದಾರೆ. ಆದರೆ ತಾಲೂಕಿನಲ್ಲಿರುವ ದಖ್ಖಿನಿ ಮುಸ್ಲಿಮರ ಮನೆಮಾತು ಉರ್ದು ಆಗಿದೆ. ತಾಲೂಕಿನ ಗರ್ಗೇಶ್ವರಿ, ಬನ್ನೂರು, ಮುಂತಾದೆಡೆಗಳಲ್ಲಿ ಮಸೀದಿ, ದರ್ಗಾ ಹಾಗೂ ಮದರಸಾಗಳಿದ್ದು, ದರ್ಗಾಗಳಲ್ಲಿ ವಾರ್ಷಿಕ ಉರುಸನ್ನು ಆಚರಿಸಲಾಗುತ್ತದೆ.

**ಕ್ರೈಸ್ತಧರ್ಮ :** ಪೋರ್ಚುಗೀಸರ ಆಗಮನದೊಂದಿಗೆ ಕ್ರೈಸ್ತಧರ್ಮವು ಕರ್ನಾಟಕವನ್ನು ೧೬ನೇ ಶತಮಾನದಲ್ಲಿ ಪ್ರವೇಶಿಸಿತು. ಕ್ರೈಸ್ತಧರ್ಮದಲ್ಲಿ ರೋಮನ್ ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟಂಟ್ ಎಂಬ ಎರಡು ಪಂಥಗಳಿವೆ. ಪೋರ್ಚುಗೀಸರಿಂದಾಗಿ ಕ್ಯಾಥೋಲಿಕ್ ಪಂಥವು ಹೆಚ್ಚು ಜನಪ್ರಿಯವಾಯಿತು. ಕರಾವಳಿಯ ಮಂಗಳೂರು, ಉಡುಪಿ, ಕುಂದಾಪುರ ಹಾಗೂ ಇತರೆ ಪ್ರದೇಶಗಳಿಗೆ ಕ್ರೈಸ್ತ ಧರ್ಮವು ಮೊದಲು ಪ್ರವೇಶಮಾಡಿದ ಕಾರಣ ಆ ಭಾಗದಲ್ಲಿ ಅವರ ಮಿಶನರಿ ಚಟುವಟಿಕೆಗಳು ತೀವ್ರಗತಿಯಿಂದ ನಡೆದು ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಕಾರಣವಾದುವು. ಬ್ಯಾಸೆಲ್ ಮಿಷನ್ ಸಂಸ್ಥೆಯು ನಡೆಸಿದ ಕಾರ್ಯಗಳ ಪರಿಣಾಮವಾಗಿ ಕರಾವಳಿಯು ಶಿಕ್ಷಣ ಅಭಿವೃದ್ಧಿಗೆ ಪ್ರಮುಖ ಕೊಡುಗೆಯನ್ನು ನೀಡಿತು. ಕಾಲಕ್ರಮೇಣ ಕ್ರೈಸ್ತ ಧರ್ಮವು ರಾಜ್ಯದ ಇತರೆ ಭಾಗಗಳಿಗೆ ಪ್ರಸರಿಸಿ ನಂತರ ಮೈಸೂರು ಜಿಲ್ಲೆಯಲ್ಲಿಯೂ ಜನಪ್ರಿಯವಾಯಿತು. ಈ ಜಿಲ್ಲೆಯಲ್ಲಿಯೂ ಬಾಸೆಲ್ ಮಿಷನ್, ಲಂಡನ್ ಮಿಷನ್ ಮತ್ತು ವೆಸ್ಲಿಯನ್ ಮಿಷನ್ ಪ್ರಾಟೆಸ್ಟಂಟ್ ಸಂಸ್ಥೆಗಳು ಕ್ರಿ.ಶ. ೧೯ನೇ ಶತಮಾನದಲ್ಲಿ ಚಟುವಟಿಕೆಯನ್ನು ಪ್ರಾರಂಭಿಸಿ ವಿವಿಧ ತಾಲೂಕುಗಳಲ್ಲಿ ಧರ್ಮಪ್ರಚಾರ ಹಾಗೂ ಶೈಕ್ಷಣಿಕ ಅಭಿವೃದ್ಧಿಗೆ ಕಾರಣವಾದುವು. ಹಳೆಯ ಮೈಸೂರು ರಾಜ್ಯದಲ್ಲಿ ಕ್ರಿ.ಶ. ೧೮೧೦ರಲ್ಲಿ ಲಂಡನ್ ಮಿಷನ್ ಸಂಸ್ಥೆಯು ಬೆಂಗಳೂರಿನಲ್ಲಿ ತನ್ನ ಶಾಖೆಗಳನ್ನು ಸ್ಥಾಪಿಸಿ ನಂತರ ಮೈಸೂರಿಗೂ ವಿಸ್ತರಿಸಿತು. ತಿರುಮಕೂಡಲು ನರಸೀಪುರ ತಾಲೂಕಿನಲ್ಲಿ ಕ್ರೈಸ್ತರು ವಿರಳವಾಗಿ ನೆಲೆಸಿದ್ದು ತಾಲೂಕು ಕೇಂದ್ರವಾದ ನರಸೀಪುರದಲ್ಲಿ ಇಗರ್ಜಿಯನ್ನು ನಿರ್ಮಿಸಿಕೊಂಡು ಧರ್ಮಪ್ರಚಾರ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ಇತ್ತೀಚೆಗೆ ಆರಂಭಿಸಿದ್ದಾರೆ.

**ಮಠಗಳು :** ತಾಲೂಕಿನ ಮಠಗಳ ಇತಿಹಾಸವನ್ನು ಸುಮಾರು ೧೦–೧೧ನೆಯ ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಭಕ್ತವರ್ಗದವರು ಸನ್ಮಾರ್ಗದಲ್ಲಿ ಸಾಗಲು ಸ್ಫೂರ್ತಿ, ಪ್ರೇರಣೆ, ಮಾರ್ಗದರ್ಶನ ನೀಡುವುದು ಮಠಗಳ ಮೂಲಭೂತ ಕರ್ತವ್ಯವಾಗಿದೆ. ತಾಲೂಕಿನಲ್ಲಿ ಲಭಿಸಿರುವ ಚೋಳ, ಹೊಯ್ಸಳ, ವಿಜಯನಗರ ಹಾಗೂ ಮೈಸೂರು ಅರಸರ ಶಾಸನಗಳಿಂದ ಅವರು ಮಠಗಳಿಗೆ ನೀಡಿದ್ದ ಆಶ್ರಯ ಪ್ರೋತ್ಸಾಹಗಳು ಮನವರಿಕೆಯಾಗುತ್ತದೆ. ತಾಲೂಕಿನ ಶಾಸನಗಳಲ್ಲಿ ಬನ್ನೂರು, ಮೂಗೂರು, ತಲಕಾಡು, ಸೋಸಲೆ, ಮುಡುಕುತೊರೆ, ಮುಂತಾದೆಡೆ ಇದ್ದ ಮಠಗಳ ಪ್ರಸ್ತಾಪವಿದೆ.

ತಲಕಾಡಿನ ಬಾಲಕೃಷ್ಣಾನಂದ ಮಠವನ್ನು ಆದಿಶಂಕರರ ಶಿಷ್ಯರಾದ ಪದ್ಮಪಾದತೀರ್ಥರು ಸ್ಥಾಪಿಸಿ, ತಮ್ಮ ಶಿಷ್ಯರಾದ ಬಾಲಕೃಷ್ಣಾನಂದರನ್ನು ನೇಮಿಸಿದರೆಂಬ ಅಭಿಪ್ರಾಯವಿದೆ. ನಂತರದಲ್ಲಿ ಇದಕ್ಕೆ ಭಾಗವತ ಜಗದ್ಗುರು ಪೀಠ ಎಂಬ ಹೆಸರು ಬಂದಿದೆ.

ತಾಲೂಕಿನ ತಲಕಾಡು, ಮಾದಾಪುರ, ಮುಡುಕುತೊರೆ, ಚಿದರಳ್ಳಿ, ಮುಂತಾದೆಡೆ ಇರುವ ನಾಲ್ಕಾರು ಶಾಸನಗಳು ಮಹತ್ತಿನ ವೀರಶೈವ ಮಠಗಳನ್ನು ಉಲ್ಲೇಖಿಸುತ್ತವೆ. ತಾಲೂಕಿನಲ್ಲಿ ಬಿದರಚೌಕಿಮಠ, ಬೆನಕನಹಳ್ಳಿಮಠ, ಬೆಟ್ಟದ ಮಠ, ಗವೀಮಠ, ಹಸ್ತಿಕೇರಿಮಠ, ಕಲ್ಲಳ್ಳಿಮಠ, ಕಳ್ಳಿಪುರದ ಮಠ, ಕನಕಗಿರಿಮಠ, ಕರೋಟಿ ವಿರಕ್ತಮಠ, ಕುರುಬೂರು ಮಠ, ಮುಡುಕುತೊರೆ ತೋಪಿನ ಮಠ, ಮೇದಿನಿ ಮಠ, ನಾಗತನಹಳ್ಳಿ ಮಠ, ಮಾದ್ರಳ್ಳಿ ಮಠ, ರಾಮೇಗೌಡನಪುರದ ಮಠ, ಸರಗೂರು ಮಠ, ತೋಪಿನ ಮಠ (ಸೋಸಲೆ), ವಾಟಾಳ್ ಮಠ ವೀರಪ್ಪೊಡೆಯರ ಹುಂಡಿ ಮಠ, ಮುಂತಾದ ಪ್ರಮುಖ ವೀರಶೈವ ಮಠಗಳಿವೆ. ಸೋಸಲೆಯ ವ್ಯಾಸರಾಜಮಠವನ್ನು ೧೯ನೆಯ ಶತಮಾನದಲ್ಲಿದ್ದ ಶ್ರೀವಿದ್ಯಾಕಾಂತತೀರ್ಥರು ಸ್ಥಾಪಿಸಿದರೆಂದು ಹೇಳಲಾಗುತ್ತದೆ. ವಿಜಯನಗರದ ಅರಸ ಕೃಷ್ಣದೇವರಾಯನ ಸಮಕಾಲೀನರಾಗಿದ್ದ ಬನ್ನೂರು ಮೂಲದವರಾದ ವ್ಯಾಸರಾಜರ ಸೋಸಲೆ ಮಠದಲ್ಲಿರುವ ವಿವಿಧ ಕಾಲಕ್ಕೆ ಸೇರಿದ ೧೫ ತಾಮ್ರ ಶಾಸನಗಳಿಂದ ಮೂಲ ವ್ಯಾಸರಾಜ ಮಠದ ಏಳುಬೀಳುಗಳನ್ನು ಅರಿಯಬಹುದಾಗಿದ್ದು, ತಿರಮಕೂಡಲಿನ ಶಾಖಾ ಮಠದಲ್ಲೂ ಶೇಷಚಂದ್ರಿಕಾಚಾರ್ಯರ ಹಾಗೂ ಸೋಸಲೆ ವ್ಯಾಸರಾಜ ಮಠಕ್ಕೆ ಸೇರಿದ ಯತಿಗಳ ವೃಂದಾವನಗಳಿವೆ. ಸೋಸಲೆ ಮಠದಲ್ಲೂ ಹಿಂದಿನ ಸ್ವಾಮಿಗಳ ವೃಂದಾವನಗಳಿವೆ.

## ಜಾತಿ ಹಾಗೂ ಬುಡಕಟ್ಟು ಪಂಗಡಗಳು

ಜಾತಿವಾರು ಜನಗಣತಿಯನ್ನು ೧೯೩೧ರವರೆಗೆ ನಡೆಸಲಾಗುತ್ತಿದ್ದುದ್ದರಿಂದ ಆವರೆಗಿನ ಜಾತಿವಾರು ಜನಸಂಖ್ಯಾ ವಿವರ ಲಭಿಸುತ್ತದೆ. ಆದರೆ ಅಲ್ಲಿಂದೀಚೆಗೆ ಜಾತಿವಾರು ಜನಸಂಖ್ಯಾ ವಿವರ ಲಭಿಸುವುದಿಲ್ಲ. ಆದರೂ ೧೯೭೨, ೧೯೮೩ ಹಾಗೂ ೧೯೯೨ರಲ್ಲಿ ರಚಿತಗೊಂಡಿದ್ದ ಹಿಂದುಳಿದ ವರ್ಗಗಳ ಆಯೋಗಗಳು ಸಮೀಕ್ಷೆ ನಡೆಸಿ ಜಾತಿವಾರು ಜನಸಂಖ್ಯಾ ವಿವರವನ್ನು ಒದಗಿಸಿವೆ. ತಾಲೂಕಿನಲ್ಲಿ ವಾಸಿಸುತ್ತಿರುವ ವಿವಿಧ ಜಾತಿ ಹಾಗೂ ಬುಡಕಟ್ಟುಗಳಿಗೆ ಸೇರಿದ ಜನರ ರೀತಿ, ನೀತಿ, ಜೀವನಕ್ರಮ, ಸಂಪ್ರದಾಯ ಹಾಗೂ ಆಯಾ ಜಾತಿಗಳವರು ಅನುಸರಿಸುವ ವಿವಿಧ ಸಂಸ್ಕಾರಗಳ ಬಗ್ಗೆ ಮಾಹಿತಿಯನ್ನಿಲ್ಲಿ ನೀಡಲಾಗಿದೆ.

**ಅಗಸ** : ಮಡಿವಾಳ, ಧೋಬಿ, ಎಂದೆಲ್ಲಾ ಕರೆಯಲ್ಪಡುವ ಇವರು ಸಮಾಜದ ವಿವಿಧ ವರ್ಗದವರಿಗೆ ಬಟ್ಟೆ ಒಗೆದು ಮಡಿ ಮಾಡಿಕೊಡುವ ಸಾಂಪ್ರದಾಯಕ ವೃತ್ತಿಯವರು. ಊರಹಬ್ಬ, ಗ್ರಾಮದೇವತೆಯ ಜಾತ್ರೆ ಸಂದರ್ಭದಲ್ಲಿ ನಡೆಮುಡಿ ಸೇವೆ ಹಾಗೂ ಪಂಜು ಸೇವೆಗಳನ್ನೂ ಮಾಡುತ್ತಾರೆ. ಇವರಲ್ಲಿ ಬೆಳ್ಳಿಕುಲ, ನಾಗರಕುಲ,



ಸಿದ್ಧೇಶ್ವರಕುಲ ಹಬ್ಬೆಕುಲ ಮುಂತಾದ ಒಳಪಂಗಡಗಳಿದ್ದು, ಹೆಚ್ಚಿನವರು ಕನ್ನಡ ಮಾತನಾಡುತ್ತಾರೆ. ಮಾಂಸಾಹಾರಿಗಳಾದ ಇವರಲ್ಲಿ ವಧುದೆರೆ (ತೆರ) ರೂಢಿಯಲ್ಲಿದ್ದು, ಜಂಗಮರು ಇವರ ಜನಾಂಗದ ವಿವಾಹಗಳನ್ನು ನಡೆಸಿಕೊಡುತ್ತಾರೆ. ಹನುಮಂತ, ಹಿರಿಯಮ್ಮ ಹಾಗೂ ಹುಣಸಮ್ಮನನ್ನು ಆರಾಧಿಸುವ ಇವರು ಗೌರಿ ಹಬ್ಬದ ಸಂದರ್ಭದಲ್ಲಿ ಭೂಮಿದೇವರ ಹೆಸರಲ್ಲಿ ತಮ್ಮ ವೃತ್ತಿಗೆ ಸಂಬಂಧಿಸಿದ ಸಲಕರಣೆಗಳನ್ನು ಪೂಜಿಸುತ್ತಾರೆ. ಶರಣ ಮಡಿವಾಳ ಮಾಚಿದೇವ ಹಾಗೂ ಮಲ್ಲಿಗೆ ಮಾದೇವಿಯರನ್ನು ಪೂಜ್ಯಭಾವದಿಂದ ಸ್ಮರಿಸುವ ಇವರಲ್ಲಿ ಸತ್ತವರನ್ನು ಹೂಳುವ ಸಂಪ್ರದಾಯವಿದ್ದು, ಪೂರ್ವಿಕರಿಗೆ ಮಹಾಲಯ ಅಮಾವಾಸ್ಯೆ ಸಂದರ್ಭದಲ್ಲಿ ಎಡೆ ಇಟ್ಟು ಪೂಜಿಸಲಾಗುತ್ತದೆ. ಇವರು ತಮ್ಮೊಳಗಿನ ವ್ಯಾಜ್ಯವನ್ನು ಜಾತಿ ಮುಖಂಡರ ಮುಂದಾಳತ್ವದಲ್ಲೇ ಬಗೆಹರಿಸಿಕೊಳ್ಳುತ್ತಿದ್ದರು. ಆದರೆ ಇಂದು ಇವರೂ ಸಾಮಾಜಿಕ ಪರಿವರ್ತನೆಗೆ ಒಳಗಾಗುವ ಮೂಲಕ ಸಾಕಷ್ಟು ಪರಿವರ್ತಿತರಾಗಿ ಕುಲಕಸುಬಿನ ಜೊತೆಗೆ ಇತರೇ ವೃತ್ತಿಗಳನ್ನೂ ಅವಲಂಭಿಸಿದ್ದಾರೆ.

**ಅರಸು** : ಜಿಲ್ಲೆಯ ವಿವಿಧ ಭಾಗಗಳೂ ಸೇರಿದಂತೆ ಈ ತಾಲೂಕಿನಲ್ಲೂ ಸಾಕಷ್ಟು ಸಂಖ್ಯೆಯಲ್ಲಿರುವ ಅರಸು ಜಾತಿಯವರು ಕ್ಷತ್ರಿಯ ಕುಲದ ರಾಜಪಿಂಡೆ ಶಾಖೆಗೆ ಸೇರಿದವರಾಗಿದ್ದು, ಮೈಸೂರು ಒಡೆಯರ್ ರಾಜಮನೆತನವೂ ಇದೇ ಮೂಲದ್ದಾಗಿದೆ. ಆತ್ರೇಯ, ವಶಿಷ್ಟ, ವಿಶ್ವಾಮಿತ್ರ ಮುಂತಾದ ಗೋತ್ರಗಳನ್ನುಳ್ಳ ಇವರು ತಮ್ಮನ್ನು ಬ್ರಹ್ಮಕ್ಷತ್ರಿಯರೆಂದು ಗುರುತಿಸಿಕೊಳ್ಳುತ್ತಿದ್ದು, ಕನ್ನಡ ಇವರ ಮಾತೃಭಾಷೆ. ಬಾಲ್ಯದಲ್ಲೇ ಉಪನಯನಾನಂತರ ಜನಿವಾರ ಧರಿಸುವ ಇವರಲ್ಲಿ ಶೈವ, ವೈಷ್ಣವ, ಜೈನ ಧರ್ಮೀಯರಿದ್ದರೂ ವಿವಾಹ ಸಂಬಂಧದಲ್ಲಿ ಇದು ಅಡ್ಡಿಯಾಗುವುದಿಲ್ಲ. ಆದರೂ ವಿವಾಹದಲ್ಲಿ ಸಾಮಾನ್ಯವಾಗಿ ವೈದಿಕ ವಿಧಾನವನ್ನೇ ಇವರು ಅನುಸರಿಸುತ್ತಾರೆ. ಉಪನಯನದ ಸಮಯದಲ್ಲಿ ಬಿಲ್ಲಿನ ತುದಿಗೆ ಮೌರ್ವಿ (ರೇಷ್ಮೆಯ ವಸ್ತ್ರ)ಯನ್ನು ಬಿಗಿದು ಮಾಡುವ ಅಂಬಿನಕಡ್ಡಿ (ಬಾಣ) ಆಚರಣೆಯು ವಿಶಿಷ್ಟವಾಗಿರುತ್ತದೆ. ಬ್ರಾಹ್ಮಣರ ಪೌರೋಹಿತ್ಯದಲ್ಲಿ ನಡೆಯುವ ಮದುವೆಯಲ್ಲಿ ವರನು ಮದುವೆ ಮುಗಿಯುವವರೆಗೂ ಖಡ್ಗ ಇಲ್ಲವೇ ಚಾಕುವನ್ನು ಜೊತೆಯಲ್ಲಿಟ್ಟುಕೊಂಡಿರುವ ಸಂಪ್ರದಾಯವಿದೆ. ವಿಧವೆಯರಿಗೆ ಮರುವಿವಾಹಕ್ಕೆ ಆಸ್ಪದವಿರುವುದಿಲ್ಲ. ಹಬ್ಬ–ಹರಿದಿನಗಳನ್ನು ಧಾರ್ಮಿಕ ಶ್ರದ್ಧೆಯಿಂದ ಆಚರಿಸುವ ಇವರಿಗೆ ದಸರೆ ದೊಡ್ಡ ಹಬ್ಬವಾಗಿದ್ದು, ಆ ಸಂದರ್ಭದಲ್ಲಿ ಕಾಳಿ, ಲಕ್ಷ್ಮಿ ಹಾಗೂ ಸರಸ್ವತಿಯರನ್ನು ವಿಧಿಬದ್ಧವಾಗಿ ಪೂಜಿಸುತ್ತಾರೆ. ಮಾವತ್ತೂರು ಮಾಸ್ತಮ್ಮ ಹಾಗೂ ಮೂಗೂರು ತಿಬ್ಬಾದೇವಿಯರ ಜಾತ್ರೆಗಳಿಗೆ ವಿಶೇಷ ಮಹತ್ವ ನೀಡುವ ಇವರು ಮಂಟೇಸ್ವಾಮಿ ಶಿಷ್ಯರಾದ ರಾಚಪ್ಪಾಜಿ, ಸಿದ್ದಪ್ಪಾಜಿ ಗದ್ದುಗೆಗಳಿಗೂ ನಡೆದುಕೊಳ್ಳುತ್ತಿದ್ದು, ಬೊಪ್ಪಗೌಡನಪುರದಲ್ಲಿರುವ ಮಂಟೇಸ್ವಾಮಿ ಮಠವು ಅರಸು ಜನಾಂಗದವರ ಸುಬರ್ದಿನಲ್ಲಿದೆ. ಇವರಲ್ಲಿ ಸತ್ತವರನ್ನು ಚಿತೆಗೆ ಅರ್ಪಿಸುವ ಸಂಪ್ರದಾಯವಿದ್ದು, ಹತ್ತು ದಿನಗಳ ಸೂತಕದ ನಂತರ ೧೨ನೇ ದಿನ ಶ್ರಾದ್ಧವನ್ನು ಆಚರಿಸಲಾಗುತ್ತದೆ.

**ಈಡಿಗ :** ಹಳೇಪೈಕಾ ಎಂದೂ ಕರೆಯಲ್ಪಡುವ ಇವರು ಸೇಂದಿ ಇಳಿಸುವ ಕಾಯಕದವರಾಗಿದ್ದು, ಇವರಲ್ಲಿ ಮಡಿ (ಸಾಚಾ) ಈಡಿಗ, ಬೆಲ್ಲದ ಈಡಿಗ, ಏಣಿ ಈಡಿಗ, ದಂಡು ಈಡಿಗ ಮುಂತಾದ ಪಂಗಡಗಳಿದ್ದು, ನಾಲ್ಕು ಗೋತ್ರಗಳಲ್ಲಿ ಕಾರಣ್ಯ ಮತ್ತು ವಾತ್ಸಲ್ಯ ಗೋತ್ರದವರನ್ನು ಸಾಸಿವೆಯವರೆಂದೂ ಕೌಂಡಿಣ್ಯ ಹಾಗೂ ಕಮಂಡಲ ಗೋತ್ರದವರನ್ನು ಬೊಡ್ಡೆಯವರೆಂದೂ ಕರೆಯಲಾಗುತ್ತದೆ. ಸಾಸಿವೆಯವರು ವಿಷ್ಣು ಆರಾಧಕರಾದರೆ, ಬೊಡ್ಡೆಯವರು ಶಿವಾರಾಧಕರು. ಇವರಲ್ಲಿ ವಧುದೆರೆ (ತೆರ)ಯಾಗಿ ೧೮ ರೂ.ಗಳನ್ನು ಪಾವತಿಸುವುದು ರೂಢಿಯಲ್ಲಿತ್ತು. ಇವರು ಕಾಟಮೇಶ್ವರ, ಎಲ್ಲಮ್ಮ ಮಾತಂಗಿ ಹಾಗೂ ಸುರಭಂಡೇಶ್ವರಿ ಮುಂತಾದ ದೇವರುಗಳನ್ನು ವಿಶೇಷವಾಗಿ ಪೂಜಿಸುತ್ತಾರೆ. ಇವರಲ್ಲಿ ಸತ್ತವರನ್ನು ತಲೆಯು ದಕ್ಷಿಣಕ್ಕಿರುವಂತೆ ಮಲಗಿಸಿ, ಹೂಳುವ ಸಂಪ್ರದಾಯವಿದ್ದು, ೧೦ ದಿನಗಳ ಸೂತಕವನ್ನು ಆಚರಿಸಲಾಗುತ್ತದೆ.

**ಉಪ್ಪಾರ :** ಉಪ್ಪಲಿಗ ಎಂದೂ ಕರೆಯಲ್ಪಡುವ ಇವರು ತಾಲೂಕಿನಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದು, ಇವರನ್ನು ಮೇಲು ಸಕ್ಕರೆಯವರು, ಸಗರ, ಭಗೀರಥ ವಂಶಜ, ಕರೆಬಂಡಿಯವರು ಎಂದೂ ಕರೆಯುವುದುಂಟು. ಕನ್ನಡ ಮಾತನಾಡುವ ಇವರ ಹೆಸರು, ಶೆಟ್ಟು ಹಾಗೂ ಗೌಡ ಎಂದು ಅಂತ್ಯಗೊಳ್ಳುತ್ತದೆ. ಹಿಂದೆ ಉಪ್ಪು ತಯಾರಿಕೆ ಇವರ ಕುಲಕಸುಬಾಗಿದ್ದು, ನಂತರದಲ್ಲಿ ಇಟ್ಟಿಗೆ, ಸುಣ್ಣದ ತಯಾರಿಕೆ, ಕೃಷಿ ಮುಂತಾದ ವೃತ್ತಿಗಳಿಗೆ ತೊಡಗಿಸಿಕೊಂಡಿದ್ದಾರೆ. ಇವರಲ್ಲಿ ಗಾರೆಉಪ್ಪಾರ, ಸಾದಉಪ್ಪಾರ, ಸುಣ್ಣಉಪ್ಪಾರ ಮುಂತಾದ ಪಂಗಡಗಳಿವೆ. ಅಲ್ಲದೇ ಕಲ್ಲುಕುಟ್ಟಿಗ/ಜನಿವಾರ ಉಪ್ಪಾರ ಎಂಬ ಪಂಗಡವೂ ಇದ್ದು, ಅವರು ಜನಿವಾರ ಧರಿಸುತ್ತಾರೆ. ಅಗಿಲ, ಆಲೆ, ಆನೆ, ಅರಸು, ಕೆಂಡ ಮುಂತಾದ ಬೆಡಗುಗಳು ಇವರಲ್ಲಿದ್ದು, ನೇರಿಲಫಾರಿನವರು ಗೋಪಾಲದೇವರೊಕ್ಕಲು, ಮಾರಿವೊಕ್ಕಲು, ಸಿದ್ದಪ್ಪಾಜಿಒಕ್ಕಲು, ಮಾದೇಶ್ವರನೊಕ್ಕಲು, ಮುಂತಾದ ಗುಂಪುಗಳೂ ಇವೆ. ಇವರಲ್ಲಿ ಧರ್ಮಾಚರಣೆಗಳನ್ನು ಜಾತಿಯ ದೇವರಗುಡ್ಡರೇ ನೆರವೇರಿಸಿದರೂ, ವಿವಾಹ ಸಂದರ್ಭದಲ್ಲಿ ಬ್ರಾಹ್ಮಣರನ್ನು ಪೌರೋಹಿತ್ಯಕ್ಕೆಂದು ಕರೆಸಲಾಗುತ್ತದೆ. ತೆರನೀಡುವ ಪದ್ಧತಿ ಇವರಲ್ಲಿದ್ದು, ಚನ್ನಕೇಶವ, ನಂಜುಂಡೇಶ್ವರ, ಹುರಕಟ್ಟೇಶ್ವರ, ವೆಂಕಟರಮಣ, ಅಂಕಮ್ಮ, ಸಿದ್ದಪ್ಪಾಜಿ, ಬಿಳಿಗಿರಿರಂಗ, ಮಹದೇಶ್ವರ ಮುಂತಾದ ದೇವರುಗಳನ್ನು ಆರಾಧಿಸುತ್ತಾರೆ. ಜಾತಿವ್ಯಾಜ್ಯ, ತೀರ್ಮಾನಿಸಲು ಕಟ್ಟೇಮಠ ಇದ್ದು, ಶೆಟ್ಟಿ ಅಥವಾ ಯಜಮಾನ ಅದರ ಮುಖ್ಯಸ್ಥನಾಗಿರುತ್ತಾನೆ. ಇವರಲ್ಲಿ ಸತ್ತವರನ್ನು ಹೂಳುವ ಪದ್ಧತಿಯಿದ್ದು, ಮಹದೇಶ್ವರ ಹಾಗೂ ಸಿದ್ಧಪ್ಪಾಜಿಯ ಹೆಸರಲ್ಲಿ ಬಾಲಕರನ್ನು ದೇವರಗುಡ್ಡರಾಗಿ ಬಿಡುವ ಸಂಪ್ರದಾಯವಿದೆ.

**ಒಕ್ಕಲಿಗ :** ಗೌಡರು ಎಂದೂ ಕರೆಯಲ್ಪಡುವ ಇವರು ಮೂಲತಃ ಕೃಷಿಕರು. ಇವರಲ್ಲಿ ಗಂಗಡಿಕಾರ, ಮೊರಸು, ನಾಮಧಾರಿ, ಕುಂಚಿಟಿಗ, ರೆಡ್ಡಿ ಮುಂತಾದ ಪ್ರಭೇಧಗಳಿದ್ದರೂ, ತಾಲೂಕಿನಲ್ಲಿ ವಿಶೇಷವಾಗಿ ಗಂಗಡಿಕಾರ ಒಕ್ಕಲಿಗರು ಕಂಡುಬರುತ್ತಾರೆ. ಅಲ್ಲಲ್ಲಿ ತಮಿಳುನಾಡು ಮೂಲದ ವೆಲ್ಲಾಳಗೌಂಡರೂ ಕಾಣಸಿಗುತ್ತಾರೆ. ಗಂಗಡಿಕಾರ ಒಕ್ಕಲಿಗರ ಮಾತೃಭಾಷೆ ಕನ್ನಡವಾಗಿದ್ದು, ಇವರಲ್ಲಿ ಪೆಟ್ಟಿಗೆಯವರು ಹಾಗೂ ಬುಜ್ಜಣಿಗೆಯವರು



ಎಂಬ ಎರಡು ಉಪಪಂಗಡಗಳಿದ್ದು, ವಿವಾಹ ಸಂದರ್ಭದಲ್ಲಿ ಇವರು ಕ್ರಮವಾಗಿ ಬಿದಿರಿನ ಪೆಟ್ಟಿಗೆ ಹಾಗೂ ಬಿದಿರಿನ ಬುಟ್ಟಿಯನ್ನು ಉಪಯೋಗಿಸುವುದರಿಂದ, ಆ ಹೆಸರುಗಳು ಬಂದಿವೆ. ಪೆಟ್ಟಿಗೆಯವರನ್ನು ವೀಳ್ಯದ ಗುಂಪೆಂದೂ, ಬುಜ್ಜಣಿಗೆಯವರನ್ನು ಧಾರೆಗುಂಪೆಂದೂ ಕರೆಯಲಾಗುತ್ತಿತ್ತು. ಬ್ರಾಹ್ಮಣರ ಪೌರೋಹಿತ್ಯದಲ್ಲಿ ಗಂಡಿನ ಮನೆ ಮುಂದೆ ಇವರ ವಿವಾಹ ಜರುಗುತಿದ್ದು, ಸಾಮಾನ್ಯವಾಗಿ ಸತ್ತವರನ್ನು ಹೂಳಲಾಗುತ್ತಾದರೂ, ಸುಡುವುದೂ ಉಂಟು. ಧಾರ್ಮಿಕ ಆಚರಣೆಯ ಹಿನ್ನೆಲೆಯಲ್ಲಿ ಮುಳ್ಳುಜನ (ಶೈವ ಭಕ್ತರು) ಹಾಗೂ ದಾಸಜನ (ವಿಷ್ಣುಜನ), ನಾಮಧಾರಿ ಒಕ್ಕಲಿಗರೂ ಕಂಡುಬರುತ್ತಾರೆ. ಚೇಳೂರು ಒಕ್ಕಲಿಗರೆಂಬ ಇನ್ನೊಂದು ಪ್ರಬೇಧವೂ ಇದ್ದು ಅವರು ಸಂಪೂರ್ಣ ಸಸ್ಯಹಾರಿಗಳಾಗಿದ್ದಾರೆ.

**ಕುರುಬ :** ಈ ತಾಲೂಕೂ ಸೇರಿದಂತೆ ಜಿಲ್ಲೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡು ಬರುವ ಇವರನ್ನು ಕುರುಬರು, ಹಾಲುಮತಸ್ಥರು ಮುಂತಾಗಿ ಕರೆಯಲಾಗುತ್ತದೆ. ಕುರಿಸಾಕಣೆಯನ್ನು ಕುಲಕಸುಬನ್ನಾಗಿಸಿಕೊಂಡಿದ್ದ ಇವರಿಗೆ ಅದು ಇಂದು ಉಪಕಸುಬಾಗಿದೆ. ಕುರುಬರೇ ಅಧಿಕ ಸಂಖ್ಯೆಯಲ್ಲಿರುವ ಕುರುಬೂರು, ಮೂಗೂರು, ಕರೋಟಿ, ಕನ್ನಾಯನಕನಹಳ್ಳಿ, ಕೊಪ್ಪಲು, ಪಟ್ಟೆಹುಂಡಿ, ಬನ್ನೂರು ಮುಂತಾದ ಗ್ರಾಮ ಹಾಗೂ ಪಟ್ಟಣಗಳು ತಾಲೂಕಿನಲ್ಲಿವೆ. ಇವರಲ್ಲಿ ಹಾಲು–ಹಂಡೆ–ಕಂಬಳಿ–ಹಳೇ–ಸಾದ–ಕುಂಚಿ–ಮುಳ್ಳು ಕುರುಬ ಮುಂತಾದ ಒಳಪಂಗಡಗಳಿದ್ದು, ಅವರು ಕುಲದೇವರಿಗೆ ನಡೆದುಕೊಳ್ಳುವ ಪೂಜಾದಿನವನ್ನು ಆಧರಿಸಿದ ಅದಿತ್ಯವಾರದವರು, ಬೇಸ್ತವಾರದವರು ಹಾಗೂ ಸೋಮವಾರದವರು ಎಂದೂ, ಕಂಕಣವನ್ನಾಧರಿಸಿ ಹತ್ತಿಕಂಕಣದವರು, ಉಣ್ಣೆಕಂಕಣದವರು, ಎಂದೂ ವರ್ಗೀಕರಿಸುವುದುಂಟು. ಕುರುಬರಲ್ಲಿ ದೊಡ್ಡವ್ವನ ಮಕ್ಕಳು ಹಾಗೂ ಚಿಕ್ಕವ್ವನ ಮಕ್ಕಳು ಎಂಬ ಎರಡು ಸಾಲುಗಳಿದ್ದು, ಅಸಂಖ್ಯಾತ ಬೆಡಗುಗಳಿವೆ. 'ವಿವಾಹ' ಸಂದರ್ಭದಲ್ಲಿ ವಧುವಿಗೆ ೩೨ ರೂಪಾಯಿಗಳ ತೆರ ನೀಡುವ ಸಂಪ್ರದಾಯ ಇವರಲ್ಲಿತ್ತು. ಅವರ ಜಾತಿಯವರೇ ಆದ ಒಡೆಯರು ಧಾರ್ಮಿಕ ಆಚರಣೆಗಳಲ್ಲಿ ಪೌರೋಹಿತ್ಯ ವಹಿಸುತ್ತಾರೆ. ತಮ್ಮೊಳಗಿನ ವ್ಯಾಜ್ಯವನ್ನು ಇವರು ಯಜಮಾನನ (ಬುದ್ಧಿವಂತ) ಮೂಲಕ ಬಗೆಹರಿಸಿಕೊಳ್ಳುತ್ತಾರೆ. ಎಲ್ಲಾ ಹಿಂದೂ ದೇವಾನುದೇವತೆಗಳನ್ನು ಪೂಜಿಸುವ ಇವರು ಮೈಲಾರ, ಬ್ಯಾಟರಾಯ, ಬೀರದೇವರು, ಎಲ್ಲಮ್ಮ ಹಾಗೂ ಲಕ್ಷ್ಮೀದೇವಿಯರನ್ನು ವಿಶೇಷವಾಗಿ ಪೂಜಿಸುತ್ತಾರೆ. ತಮ್ಮ ದೇವರುಗಳಿಗೆಂದು ನಿಗಧಿತ ಸಮಯದಲ್ಲಿ ಜಾತ್ರೆ/ಪರಿಷೆಗಳನ್ನು ಸಂಘಟಿಸುತ್ತಾರೆ. ಆ ಸಂದರ್ಭದಲ್ಲಿ ಕವಡೆಗಳಿಂದ ಕೂಡಿದ ಕರಿಯ ಕಂಬಳಿ ಹೊದ್ದು, ತಲೆಗೆ ಕರಡಿ ಚರ್ಮದ ಟೊಪ್ಪಿಗೆ ಧರಿಸಿದ, ಮೈಲಾರ ಒಕ್ಕಲಿಗೆ ಸೇರಿದ ಗೊರವರು ಕೈಯಲ್ಲಿರುವ ವಾದ್ಯ ನುಡಿಸುತ್ತಾ ಒಗ್ಗಡಿಸುತ್ತಾ ಕುಣಿದು, ಭಕ್ತಾದಿಗಳಿಂದ ಕಾಣಿಕೆ ಪಡೆಯುತ್ತಾರೆ. ನೆರೆಯ ಹೆಮ್ಮರಗಾಲದಲ್ಲಿ (ನಂಜನಗೂಡು ತಾ.) ಜರುಗುವ ಬೀರದೇವರ ಜಾತ್ರೆ ಈ ಜನಾಂಗದ ಪ್ರಮುಖ ಜಾತ್ರೆಯಾಗಿದ್ದು, ಇಲ್ಲಿಯ ಕುರುಬರೂ ಹೋಗುತ್ತಾರೆ. ಇವರಲ್ಲಿ ದೇವರಗುಡ್ಡರನ್ನು ಬಿಡುವ ಸಂಪ್ರದಾಯವಿದ್ದು, ಸತ್ತವರನ್ನು ದಕ್ಷಿಣದೆಡೆ

ತಲೆ ಇಟ್ಟು ಹೂಳುವ ಸಂಪ್ರದಾಯವಿದೆ. ಆದರೆ ಕುರುಬ ಒಡೆಯನನ್ನು ಲಿಂಗಾಯಿತ ಪದ್ಧತಿಯಂತೆ ಶವಸಂಸ್ಕಾರ ಮಾಡಲಾಗುತ್ತದೆ. ಬೀರದೇವರ ಸಮ್ಮುಖದಲ್ಲಿ ಇವರು ಮಾಡುವ ಡೊಳ್ಳಿನ ಕುಣಿತ, ನಾಡಿನ ಪ್ರಧಾನ ಜಾನಪದ ಕಲೆಗಳಲ್ಲೊಂದಾಗಿದೆ.

**ಕುಂಬಾರ :** ಗ್ರಾಮೀಣ ಸಮುದಾಯದಲ್ಲಿ ಪ್ರಮುಖ ಜನಾಂಗವಾಗಿದ್ದ ಇವರು ಮಡಕೆ–ಕುಡಿಕೆ ಹೆಂಚು ಮುಂತಾದ ಮಣ್ಣಿನ ಸಾಮಗ್ರಿಗಳನ್ನು ಮಾಡುವ ಕಾಯಕದವರಾಗಿದ್ದು, ತಾಲೂಕಿನಲ್ಲೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಆದರೆ, ಸ್ಟೀಲ್, ಅಲ್ಯೂಮೀನಿಯಂ ಹಾಗೂ ಇಂಡ್ಯಾಲಿಯಂ ಪಾತ್ರೆಗಳ ಆಗಮನದಿಂದಾಗಿ ಕುಂಬಾರಿಕೆ ವೃತ್ತಿಯಿಂದು ಕ್ಷೀಣಿಸಿದೆ. ಗುಂಡಯ್ಯ ಅಥವಾ ಗುಂಡಬ್ರಹ್ಮಯ್ಯನನ್ನು ಇವರು ತಮ್ಮ ಮೂಲಪುರುಷನೆಂದು ಭಾವಿಸಿದ್ದು, ಅವರಲ್ಲಿ ಗುಂಡಬ್ರಹ್ಮ ಹಾಗೂ ಶಾಲಿವಾಹನ ಎಂಬ ಎರಡು ವರ್ಗಗಳಿವೆ. ಕನ್ನಡ ಮಾತನಾಡುವ ಇವರಲ್ಲಿ ಕಸ್ತೂರಿ, ನಾಗರ, ಸಂಪಿಗೆ, ಮುಂತಾದ ಬೆಡಗುಗಳಿದ್ದು, ವಧುವಿಗೆ ತೆರ ನೀಡುವ ಸಂಪ್ರದಾಯವಿದೆ. ಹುಟ್ಟು–ಸಾವಿನ ಸಂದರ್ಭದಲ್ಲಿ ಹತ್ತು ದಿನಗಳ ಸೂತಕವನ್ನು ಆಚರಿಸಲಾಗುತ್ತದೆ. ಇವರಲ್ಲಿ ಶಿವ ಹಾಗೂ ವಿಷ್ಣು ಆರಾಧಕರಿದ್ದು, ಕುಂಬೇಶ್ವರ (ಕಳಸ) ಕುಲದೈವವಾಗಿದ್ದು, ಸತ್ತವರನ್ನು ಮಲಗಿಸಿದ ಭಂಗಿಯಲ್ಲಿ ಹೂಳುವ ಸಂಪ್ರದಾಯವಿದ್ದು, ಪ್ರತಿ ವರ್ಷ ಮಹಾಲಯ ಅಮಾವಾಸ್ಯೆಯಂದು ಪೂರ್ವಿಕರಿಗೆ ಎಡೆ ಇಡುವ ಸಂಪ್ರದಾಯವಿದೆ. ಗೌರಿ–ಗಣೇಶ ಹಬ್ಬದ ಸಂದರ್ಭದಲ್ಲಿ ಗೌರಿ–ಗಣೇಶ ಮೂರ್ತಿಗಳನ್ನು ಸಿದ್ಧಪಡಿಸಿ ಮಾರುವುದರಿಂದ ಇವರಿಗೆ ಹೆಚ್ಚಿನ ಆದಾಯ ಇತ್ತೀಚಿನವರೆಗೆ ಲಭಿಸುತ್ತಿತ್ತು. ತಮ್ಮೊಳಗಿನ ವ್ಯಾಜ್ಯಗಳನ್ನು ಕುಲದ ಯಜಮಾನನ ಸಮ್ಮುಖದಲ್ಲಿ ಬಗೆಹರಿಸಿಕೊಳ್ಳುವ ಸಂಪ್ರದಾಯವಿಂದು ಕಡಿಮೆಯಾಗಿದೆ.

**ಕ್ಷೌರಿಕ :** ನಾಪಿತ, ಕೆಲಸಿ, ಹಜಾಮ, ನಾಯಿಂದ, ನಯನ ಕ್ಷತ್ರಿಯ ಎಂದೂ ಕರೆಯಲ್ಪಡುವ ಇವರು ಕ್ಷೌರಿಕ ಕಾಯಕದವರಾಗಿದ್ದು, ಜೊತೆಗೆ ಡೋಲು, ಭಜಂತ್ರಿ, ನಾಗಸ್ವರ, ಮುಂತಾದ ವಾದ್ಯಗಳನ್ನು ಧಾರ್ಮಿಕ ಉತ್ಸವ, ವಿವಾಹ ಸಂದರ್ಭಗಳಲ್ಲಿ ನುಡಿಸುತ್ತಿದ್ದು, ಕನ್ನಡ–ತೆಲುಗು ಮಾತನಾಡುವವರೂ ಇವರಲ್ಲಿದ್ದಾರೆ. ತೆಲುಗು ಮಾತನಾಡುವವರಲ್ಲಿ ನಾಡಿಗರು, ರೆಡ್ಡಿ, ಭೂಮಿ, ಗುಂಡ್ಲ–ಜಾಟ ಹಾಗೂ ಕೂಡಿಪಾಟಿಯಾ ಎಂಬ ಉಪಪಂಗಡಗಳಿವೆ. ಇವರಲ್ಲಿ ಚಿಟ್ಲು, ಗುರ್ರಂ, ಜಾಂಬ, ಕಣಗಿಲ ಮುಂತಾದ ಬೆಡಗುಗಳಿವೆ. ಅದೇ ಕನ್ನಡ ಮಾತನಾಡುವವರಲ್ಲಿ ಮರಸು, ಉಪ್ಪಿನ ಹಾಗೂ ಶೀಲವಂತ ಎಂಬ ಉಪಪಂಗಡಗಳಿದ್ದು, ಐದೈದು ಗೋತ್ರದ ಐದು ಗುಂಪುಗಳಿವೆ. ಸಗೋತ್ರ ವಿವಾಹಕ್ಕೆ ಆಸ್ಪದವಿಲ್ಲ. ವಧುವಿಗೆ ತೆರ ನೀಡುವ ಪದ್ಧತಿ ಇದ್ದು, ಶಿವ–ವಿಷ್ಣು ಉಪಾಸಕರಾದ ಇವರ ಧರ್ಮಾಚರಣೆಗಳಲ್ಲಿ ಬ್ರಾಹ್ಮಣರು ಪೌರೋಹಿತ್ಯ ವಹಿಸುತ್ತಾರೆ. ತಮ್ಮೊಳಗಿನ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳಲು ಅವರದೇ ಆದ ಕಟ್ಟೆಮನೆ ಇರುತ್ತದೆ. ನಮ್ಮಾಳ್ವರು ಇವರ ಮೂಲಗುರುಗಳಾಗಿದ್ದು, ಮೇಲುಕೋಟೆ, ತಿರುಪತಿ ಹಾಗೂ ಶ್ರೀರಂಗಮ್‌ನ ಗುರುಗಳಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಇವರಲ್ಲಿ ಸತ್ತವರನ್ನು ಸಾಮಾನ್ಯವಾಗಿ ಹೂಳಲಾಗುತ್ತಿದ್ದು, ಹನ್ನೊಂದು ದಿನಗಳ ಸೂತಕ, ಶ್ರಾದ್ಧ ಆಚರಿಸುವುದರ ಜೊತೆಗೆ ಮಹಾಲಯ ಅಮಾವಾಸ್ಯೆ ಸಂದರ್ಭದಲ್ಲಿ ಪೂರ್ವಿಕರಿಗೆ ಎಡೆ ಇಡುವ ಸಂಪ್ರದಾಯವಿದೆ.



**ಗಾಣಿಗ :** ಗಾಣದಿಂದ ಎಣ್ಣೆಯನ್ನು ಉತ್ಪಾದಿಸುವುದು ಇವರ ಸಾಂಪ್ರದಾಯಕ ವೃತ್ತಿಯಾದರೂ ಬೇಸಾಯವನ್ನೂ ಮಾಡುತ್ತಿದ್ದು, ತಾಲೂಕಿನಲ್ಲಿ ವಿರಳವಾಗಿ ನೆಲೆಸಿದ್ದಾರೆ. ಇವರಲ್ಲಿ ಜ್ಯೋತಿನಗರ, ಸಜ್ಜನ ಹಾಗೂ ಜ್ಯೋತಿಪಾದ ಎಂಬ ಮೂರು ಪ್ರಮುಖ ವರ್ಗಗಳಿದ್ದು, ಗಾಣಕ್ಕೆ ಜೋಡೆತ್ತು ಬಳಸುವವರನ್ನು ಹೆಗ್ಗಾಣಿಗರೆಂದೂ, ಒಂಟಿಎತ್ತು ಬಳಸುವವರನ್ನು ಕಿರುಗಾಣಿಗರೆಂದೂ ಕರೆಯಲಾಗುತ್ತಿತ್ತು. ಆದರೆ ಎಣ್ಣೆಮಿಲ್‌ಗಳಿಂದಾಗಿ ಇಂದು ಗಾಣಗಳು ಕಣ್ಮರೆಯಾಗಿವೆ. ಗಾಣಿಗಸೆಟ್ಟರೆಂದೂ ಕರೆಯಲ್ಪಡುವ ಇವರಲ್ಲಿ ಲಿಂಗಧಾರಿ ಸಜ್ಜನರು ಸಸ್ಯಹಾರಿಗಳು. ಉಳಿದವರು ವಿಷ್ಣುಭಕ್ತರಾಗಿದ್ದು, ವಿಶೇಷ ಸಂದರ್ಭಗಳಲ್ಲಿ ದಾಸಯ್ಯನನ್ನು ಮನೆಗೆ ಆಹ್ವಾನಿಸುವುದುಂಟು. ಇವರಲ್ಲಿ ಸತ್ತವರನ್ನು ಸಾಮಾನ್ಯವಾಗಿ ಹೂಳಲಾಗುತ್ತದೆ.

**ತಮ್ಮಡಿ :** ಶಿವಾರಾಧಕರಾದ ಇವರು ವಿರಳವಾಗಿ ತಾಲೂಕಿನ ಮುಡುಕುತೊರೆ, ಮೂಗೂರು, ತಲಕಾಡು, ಮುಂತಾದೆಡೆಗಳಲ್ಲಿ ವಾಸಿಸುತ್ತಿದ್ದು, ಗುಡಿಯ ಶಿವಾರ್ಚನೆ ಹಾಗೂ ಹೂಒದಗಿಸುವ ಕಾಯಕದವರಾಗಿದ್ದಾರೆ. ಕನ್ನಡ ಮಾತನಾಡುವ ಇವರಲ್ಲಿ ಕಾಶ್ಯಪ, ಕೌಶಿಕ, ಅಗಸ್ತ್ಯ ಮುಂತಾದ ಗೋತ್ರಗಳಿದ್ದು, ಬಾಲಕರಿಗೆ ಲಿಂಗದೀಕ್ಷೆ ನೀಡಿ ಜನಿವಾರ–ಶಿವಲಿಂಗಗಳನ್ನು ಧರಿಸಲಾಗುತ್ತದೆ. ಅದರಿಂದಾಗಿ ಇವರನ್ನು ಶಿವದ್ವಿಜರೆಂದೂ ಕರೆಯಲಾಗುತ್ತದೆ. ಹಿಂದೂ ಹಬ್ಬ ಹರಿದಿನಗಳನ್ನೆಲ್ಲ ಆಚರಿಸುವ ಇವರಿಗೆ ಅವರದೇ ಪುರೋಹಿತವರ್ಗವಿದೆ. ಸತ್ತವರನ್ನು ಅವರ ಆರ್ಥಿಕ ಸ್ಥಾನಮಾನದನ್ವಯ ಹೂಳುವುದೋ ಇಲ್ಲವೇ ಸುಡುವುದೋ ರೂಢಿಯಲ್ಲಿದ್ದು, ಆಗ ೧೦ ದಿನಗಳ ಸೂತಕವನ್ನು ಆಚರಿಸಲಾಗುತ್ತದೆ. ಇವರಲ್ಲಿ ಮಾಸಿಕ ಹಾಗೂ ವಾರ್ಷಿಕ ಶ್ರಾದ್ಧಾಚರಣೆ ರೂಢಿಯಲ್ಲಿದ್ದು, ಮಹಾಲಯ ಅಮಾವಾಸ್ಯೆಯ ಸಮಯದಲ್ಲಿ ಪೂರ್ವಿಕರನ್ನು ಆರಾಧಿಸಲಾಗುತ್ತದೆ. ಇದೇ ರೀತಿ ಸತ್ತ ಮಹಿಳಾ ಪೂರ್ವಿಕರನ್ನು ಶ್ರಾವಣ ಶುಕ್ರವಾರದಂದು ಆರಾಧಿಸುವ ವಿಶಿಷ್ಟ ಸಂಪ್ರದಾಯ ಇವರಲ್ಲಿದೆ.

**ದೇವಾಂಗ (ನೇಕಾರ):** ನೇಕಾರಿಕೆ ಇವರ ಸಾಂಪ್ರದಾಯಕ ವೃತ್ತಿಯಾಗಿದ್ದು, ಕನ್ನಡ ಹಾಗೂ ತೆಲುಗು ಮಾತೃಭಾಷಿಕರಿದ್ದಾರೆ. ಇವರಲ್ಲಿ ಅನೇಕ ಬೆಡಗು, ಒಳಪಂಗಡಗಳಿದ್ದು, ವಧುತೆರೆ ತೀರಾ ಇತ್ತೀಚಿನವರೆಗೆ ತೆಲುಗು ದೇವಾಂಗ ಜನಾಂಗದಲ್ಲಿತ್ತು. ಉಪನಯನ, ಜನಿವಾರ ಧಾರಣೆಗಳನ್ನು ಅನುಸರಿಸುವ ಇವರು ಹುಟ್ಟು–ಸಾವಿನ ಸಂದರ್ಭಗಳಲ್ಲಿ ಹತ್ತು ದಿನಗಳ ಸೂತಕವನ್ನು ಆಚರಿಸುತ್ತಾರೆ. ಇವರಲ್ಲಿ ಕೆಲವರು ಲಿಂಗಧಾರಿಗಳೂ ಹೌದು. ತೆಲುಗು ದೇವಾಂಗರು ಸಸ್ಯಹಾರಿಗಳು. ರಾಮಲಿಂಗ, ಚೌಡೇಶ್ವರಿ ಹಾಗೂ ಬನಶಂಕರಿ ಇವರ ಕುಲದೇವರುಗಳಾಗಿದ್ದು, ಜಾತಿ ಪುರೋಹಿತರೇ ಇವರಿಗಿದ್ದಾರೆ. ಇವರಲ್ಲಿ ಸತ್ತವರನ್ನು ಸಾಮಾನ್ಯವಾಗಿ ಹೂಳಲಾಗುತ್ತದೆ. ೧೧ನೇ ದಿವಸ, ಮಾಸಿಕ ಹಾಗೂ ವಾರ್ಷಿಕ ಶ್ರಾದ್ಧಗಳನ್ನು ಆಚರಿಸಲಾಗುತ್ತದೆ. ಸೆಟ್ಟು ಆಥವಾ ಯಜಮಾನನ ನೇತೃತ್ವದಲ್ಲಿ ಜಾತಿಯ ಒಳಜಗಳಗಳನ್ನು ಕಟ್ಟೆಮನೆಯಲ್ಲೇ ಹಿಂದೆ ತೀರ್ಮಾನಿಸಲಾಗುತ್ತಿತ್ತು.

**ಬ್ರಾಹ್ಮಣ :** ತಾಲೂಕಿನಲ್ಲಿ ಬಹು ಹಿಂದಿನಿಂದಲೂ ಬ್ರಾಹ್ಮಣರು ವಾಸಿಸುತ್ತಿದ್ದು, ಇವರ ನೆಲೆಗಳು ಗಂಗರ ಕಾಲದಲ್ಲಿ ತಲಕಾಡು, ಬನ್ನೂರು, ಚೋಳರ ಕಾಲದಲ್ಲಿ ಬನ್ನೂರು, ತಡಿಮಾಲಂಗಿ, ಆಲ್ಗೋಡು ಮುಂತಾದವು; ಹೊಯ್ಸಳರ ಕಾಲದಲ್ಲಿ ಸೋಮನಾಥಪುರ, ಭೈರಾಪುರ, ಹುಣಸೂರು, ಮುಂತಾದವು; ವಿಜಯನಗರದರಸರ ಕಾಲದಲ್ಲಿ ಕಲಿಯೂರು ನರಸೀಪುರ ಮುಂತಾದವಾಗಿದ್ದು, ಮೈಸೂರು ಅರಸರ ಕಾಲದಲ್ಲಿ ದಳವಾಯಿ ಅಗ್ರಹಾರ ಮುಂತಾದ ಅಗ್ರಹಾರಗಳನ್ನು ಬ್ರಾಹ್ಮಣರಿಗೆ ದತ್ತಿ ನೀಡಿದ್ದ ಅಂಶ ಆಯಾ ಕಾಲದ ಶಾಸನಗಳಿಂದ ವೇದ್ಯವಾಗುತ್ತದೆ. ಆದರೆ ಇಂದು ತಾಲೂಕಿನಲ್ಲಿ ಬ್ರಾಹ್ಮಣರು ಅತ್ಯಲ್ಪ ಸಂಖ್ಯೆಯಲ್ಲಿದ್ದಾರೆ. ಸ್ಮಾರ್ತ, ವೈಷ್ಣವ ಹಾಗೂ ಶ್ರೀವೈಷ್ಣವ ಪಂಥಕ್ಕೆ ಸೇರಿದ ಇವರಲ್ಲಿ ಕನ್ನಡ, ತಮಿಳು ಹಾಗೂ ತೆಲುಗು ಮಾತನಾಡುವವರಿದ್ದಾರೆ. ಈ ಪಂಥಗಳಲ್ಲಿ ಅನೇಕ ಒಳಪಂಗಡಗಳಿವೆ. ಆದಿಶಂಕರರ ಅನುಯಾಯಿಗಳಾದ ಸ್ಮಾರ್ತರಲ್ಲಿರುವ ಉಪಪಂಗಡಗಳಲ್ಲಿ ಮೂಗೂರು ಕರ್ನಾಟರು ಅಥವಾ ಹಳೇ ಕರ್ನಾಟಕ ಬ್ರಾಹ್ಮಣರು ನರಸೀಪುರ ತಾಲೂಕು ಸೇರಿದಂತೆ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಅಧಿಕ ಸಂಖ್ಯೆಯಲ್ಲಿದ್ದಾರೆ. ಈಶ್ವರನನ್ನು ಪೂಜಿಸುವ ಆಗಮಿಕರು, ತಾಲೂಕಿನಲ್ಲಿ ಅಲ್ಪಸಂಖ್ಯೆಯಲ್ಲಿದ್ದು, ಇವರ ಮನೆಮಾತು ಕನ್ನಡ–ತಮಿಳು ಆಗಿದೆ. ಉಪನಯನದ ನಂತರ ಶಿವದೀಕ್ಷೆಯನ್ನು ಸ್ವೀಕರಿಸುವ ಇವರು ವೈದಿಕ ಆಚರಣೆಯನ್ನು ಅನುಸರಿಸುತ್ತಾರೆ. ವೈಷ್ಣವ ಪಂಥಕ್ಕೆ ಸೇರಿದ ವ್ಯಾಸರಾಜ ಮಠವು ಸೋಸಲೆಯಲ್ಲಿದ್ದು, ವೈಷ್ಣವ ಧರ್ಮೀಯರೂ ತಾಲೂಕಿನಲ್ಲಿದ್ದಾರೆ. ರಾಮಾನುಜ ಸಿದ್ಧಾಂತದ ಅನುಯಾಯಿಗಳಾದ ಶ್ರೀವೈಷ್ಣವರ ಮಾತೃಭಾಷೆ ತಮಿಳಾಗಿದ್ದು, ಇವರಲ್ಲೂ ಅನೇಕ ಉಪಪಂಗಡಗಳಿವೆ.

ಎಲ್ಲಾ ಗುಂಪಿನ ಬ್ರಾಹ್ಮಣರಲ್ಲಿ ಅನೇಕ ಗೋತ್ರ–ಪ್ರವರಗಳಿದ್ದು, ಸಗೋತ್ರಿಯರ ನಡುವೆ ವಿವಾಹಕ್ಕೆ ಆಸ್ಪದವಿರುವುದಿಲ್ಲ. ಎಲ್ಲಾ ಪಂಥದ ಬ್ರಾಹ್ಮಣರೂ ೧೬ ನಿತ್ಯ ಸಂಸ್ಕಾರ ಹಾಗೂ ೨೪ ನೈಮಿತ್ತಿಕ ಸಂಸ್ಕಾರಗಳನ್ನು ಅನುಸರಿಸುವುದು ಹಿಂದೆ ಕಡ್ಡಾಯವಾಗಿತ್ತು. ವಿಧವೆಯರಿಗೆ ಹಿಂದೆ ಇದ್ದ ನಿಷಿದ್ಧಗಳು ಇಂದು ಕಣ್ಮರೆಯಾಗಿವೆ. ಆಹಾರ ತರಕಾರಿ ಸೇವನೆಯಲ್ಲಿ ಅನೇಕ ಕಟ್ಟುಪಾಡುಗಳಿದ್ದವಾದರೂ ಇಂದು ಸಡಿಲಗೊಂಡಿವೆ. ಇವರ ವಿವಾಹಾಚರಣೆಗಳು ವೈದಿಕ ಮಾದರಿಯಲ್ಲೇ ಜರುಗುತ್ತವೆ. ವಿವಾಹ ವಿಚ್ಛೇದನ ಹಾಗೂ ವಿಧವಾ ವಿವಾಹಗಳಿಗೆ ಸಾಂಪ್ರದಾಯಿಕ ನಿಷೇಧವಿದ್ದು, ಹಿಂದೆ ಬಳಕೆಯಲ್ಲಿದ್ದ ವರದಕ್ಷಿಣೆಯನ್ನು ಈಗ ಸಾರ್ವತ್ರಿಕವಾಗಿ ಕಾನೂನುಬಾಹಿರವೆಂದು ಘೋಷಿಸಲಾಗಿದೆ. ಆದರೆ, ಇತ್ತೀಚೆಗೆ ಈ ಆಚರಣೆಗಳು ಪರಿವರ್ತಿತ ಪರಿಸರಕ್ಕನುಗುಣವಾಗಿ ಸಡಿಲಗೊಂಡಿರುವುದು ಗಮನಾರ್ಹವಾಗಿದೆ. ಇವರಲ್ಲಿ ಸತ್ತವರನ್ನು ಚಿತೆಗೇರಿಸಿ ಹತ್ತುದಿನಗಳ ಸೂತಕವನ್ನೂ ೧೩ ದಿನಗಳ ಪರ್ಯಂತ ವಿಧಿವತ್ತಾದ ಶ್ರಾದ್ಧವನ್ನೂ ಆಚರಿಸಲಾಗುತ್ತದೆ. ಅಲ್ಲದೇ ಸತ್ತವರ್ಷ ಮಾಸಿಕ ತಿಥಿಯನ್ನೂ ನಂತರ ವಾರ್ಷಿಕ ತಿಥಿಯನ್ನೂ ಆಚರಿಸಲಾಗುತ್ತದೆ. ಬಹುತೇಕ ವೇದಾಧ್ಯಯನ, ಬೋಧನಾ, ಯಜ್ಞಯಾಗಾದಿಗಳನ್ನು ನಡೆಸುವುದನ್ನೇ ಸಾಂಪ್ರದಾಯಕ ವೃತ್ತಿಯನ್ನಾಗಿ ಹಿಂದೆ ಹೊಂದಿದ್ದ ಇವರು ಪ್ರಸ್ತುತ, ಇತರೆ ಜಾತಿಗಳಂತೆ ಸಾಮಾಜಿಕ ಪರಿವರ್ತನೆಗೆ ಒಳಗಾಗಿ ವಿವಿಧ ರಂಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.



**ಮರಾಠರು :** ಮೂಲತಃ ಮಹಾರಾಷ್ಟ್ರ ಕಡೆಯಿಂದ ಷಹಾಜಿ–ಶಿವಾಜಿ ಕಾಲದಲ್ಲಿ ಈ ಭಾಗಕ್ಕೆ ವಲಸೆ ಬಂದವರಾಗಿದ್ದು, ಬೇಸಾಯ, ದರ್ಜಿಕಾಯಕ, ವ್ಯಾಪಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರಲ್ಲಿ ಸೂರ್ಯವಂಶ, ಸೋಮವಂಶ, ಯದುವಂಶ ಹಾಗೂ ಶೇಷವಂಶಗಳೆಂಬ ನಾಲ್ಕು ವಂಶಗಳಿದ್ದು, ಪವಾರ್, ಭೋಸ್ಲೆ, ರಾಹುತ್ ಮುಂತಾದ ೯೬ ದೇವಕ (ಕುಲ)ಗಳಿವೆ. ಅರೇರ್ ಎಂದೂ ಕರೆಯಲ್ಪಡುವ ಇವರ ಮಾತೃಭಾಷೆ ಮರಾಠಿಯಾಗಿದ್ದು, ಬಾಲಕರಿಗೆ ಉಪನಯನ ಮಾಡಿ ಜನಿವಾರ ಧರಿಸುವ ಸಂಪ್ರದಾಯವಿದೆ. ಇವರ ಧಾರ್ಮಿಕ ಆಚರಣೆಗಳಲ್ಲಿ ಬ್ರಾಹ್ಮಣರು ಪೌರೋಹಿತ್ಯ ವಹಿಸುತ್ತಿದ್ದು, ವಿಧವಾ ವಿವಾಹ ಹಾಗೂ ವಿಚ್ಛೇದನಗಳಿಗೆ ಇವರಲ್ಲಿ ಅವಕಾಶವಿಲ್ಲ. ಶಿವನನ್ನು ಖಂಡೋಬ ಹಾಗೂ ಬೈರೋಬ ರೂಪದಲ್ಲಿ ಆರಾಧಿಸುವ ಇವರು ವಿಠೋಬ, ಅಂಬಾಭವಾನಿ, ತುಳಜಾಭವಾನಿ ಮುಂತಾದ ದೇವರುಗಳನ್ನು ಪೂಜಿಸುತ್ತಾರೆ. ಸತ್ತವರನ್ನು ಸುಡುವ ಸಂಪ್ರದಾಯವಿದ್ದು, ಹತ್ತು ದಿನಗಳ ಸೂತಕವನ್ನು ಆಚರಿಸಲಾಗುತ್ತದೆ. ಮಹಾಲಯ ಅಮಾವಾಸ್ಯೆ ಸಮಯದಲ್ಲಿ ಪೂರ್ವಿಕರ ಹೆಸರಲ್ಲಿ ಎಡೆ ಇಟ್ಟು ಪೂಜಿಸಲಾಗುತ್ತದೆ.

**ಮಾದಿಗ :** ತಾಲೂಕಿನ ಎಲ್ಲಾ ಭಾಗಗಳಲ್ಲೂ ಹರಡಿಕೊಂಡಿರುವ ಇವರನ್ನು ಪದ್ಮಜಾತಿ, ಜಾಂಬವ, ಮಾತಂಗ, ಬೆಂಗಾರ ಹಾಗೂ ಎಡಗೈನವರೆಂದೂ ಕರೆಯಲಾಗುತ್ತಿದ್ದು, ಮಾತಂಗಿ ಹಾಗೂ ಮಾರಮ್ಮ ಇವರ ಕುಲದೇವತೆಯರು. ಇವರಲ್ಲಿ ತಣಿಗೆ ಬುವ್ವದವರು ಹೆಡಿಗೆ ಬುವ್ವದವರು, ಮೊರದ ಬುವ್ವದವರು ಹಾಗೂ ಡಕ್ಕಲಿಗರು ಎಂಬ ಉಪಪಂಗಡಗಳಿವೆ. ಜಾಂಬವರು ಇವರ ಪುರೋಹಿತವರ್ಗವಾಗಿದ್ದು, ಮಠವನ್ನೂ ಹೊಂದಿದ್ದಾರೆ. ಇವರಲ್ಲಿ ಬೆಳ್ಳಿ, ಕಸಬ, ಬೇಲ, ಹನುಮಂತ, ಮುಂತಾದ ಅನೇಕ ಬೆಡಗುಗಳಿವೆ. ತೆರಪದ್ಧತಿಯೂ ಇದ್ದು, ನೀಲಗಾರರು ಹಾಗೂ ಜೋಗಿಗಳನ್ನು ದೇವರ ಹೆಸರಲ್ಲಿ ಬಿಡುವ ಸಂಪ್ರದಾಯವಿದೆ. ಶರಣ ಹರಳಯ್ಯನನ್ನು ವಿಶೇಷ ಭಕ್ತಿಭಾವದಿಂದ ಕಾಣುವ ಇವರಲ್ಲಿ ಸತ್ತವರನ್ನು ಹೂಳುವ ಪದ್ಧತಿ ಇದ್ದು, ಮೂರು ಇಲ್ಲವೇ ಹತ್ತು ದಿನಗಳ ಸೂತಕವನ್ನು ಆಚರಿಸಲಾಗುತ್ತದೆ. ಯುಗಾದಿ, ವಿನಾಯಕಚೌತಿ ಹಾಗೂ ಮಹಾಲಯ ಅಮಾವಾಸ್ಯೆಗಳಂದು ಸ್ಮಶಾನಕ್ಕೆ ಹೋಗಿ ಸಮಾಧಿಗೆ ಪೂಜೆ–ಎಡೆ ಸಲ್ಲಿಸಿ, ಮನೆಗೆ ಬಂದು ಕಳಸ ಪೂಜಿಸುವುದು ಅಲ್ಲಲ್ಲಿ ಕಂಡುಬರುತ್ತದೆ. ಚರ್ಮದ ಕಾಯಕ ಇವರ ಕುಲಕಸುಬಾಗಿದ್ದು, ಕೃಷಿ ಕಾರ್ಮಿಕರಾಗಿ ಕೂಡ ಹೊಲದಲ್ಲಿ ದುಡಿಯುತ್ತಾರೆ. ಇವರು ತಮಟೆ ರಾಮಡೋಲುಗಳನ್ನು ಲಯಬದ್ಧವಾಗಿ ಬಾರಿಸುವಲ್ಲಿ ನಿಷ್ಣಾತರು.

**ಮೇದ :** ಗವರಿಗ, ಗೌರಿಮಕ್ಕಳು ಎಂದೂ ಕರೆಯಲ್ಪಡುವ ಇವರು ಬೊಂಬು ಬಿದಿರಿನಿಂದ ವಿವಿಧ ಗೃಹೋಪಯೋಗಿ ವಸ್ತುಗಳನ್ನು ತಯಾರಿಸುವ ಕಾಯಕದವರಾಗಿದ್ದು, ಸಾಮಾನ್ಯವಾಗಿ ನಗರಪ್ರದೇಶಗಳಲ್ಲಿ ವಾಸಿಸುತ್ತಾರೆ. ಕನ್ನಡ–ತೆಲುಗು ಭಾಷೆಗಳನ್ನಾಡುವ ಇವರಲ್ಲಿ ಹಲವಾರು ಪಂಗಡಗಳಿದ್ದರೂ, ತಾಲೂಕಿನಲ್ಲಿ ಗವರಿಗರು ಮಾತ್ರ ಇದ್ದಾರೆ. ಇವರಲ್ಲಿ ಬೆಳ್ಳಿಕುಲ ಹಾಗೂ ನಾಗರಕುಲ ಎಂಬ ಪಂಗಡಗಳಿದ್ದು, ಬ್ರಾಹ್ಮಣ ಪುರೋಹಿತರು ವಿವಾಹ ನಡೆಸಿಕೊಡುತ್ತಿದ್ದು, ವಧುವಿಗೆ ತೆರ ನೀಡುವ ಪದ್ಧತಿ ಇದೆ. ಇವರಲ್ಲಿ

ದೀಪಾವಳಿಯ ಮಾರನೆಯ ದಿನ ಕಾಡಿಗೆ ಹೋಗಿ ಬೊಂಬು ಬಿದಿರಿನ ಮೇಳೆಯನ್ನು ಪೂಜಿಸಿ ಬರುವ ಸಂಪ್ರದಾಯ ಹಿಂದೆ ಇತ್ತು. ಆದರೆ ಈಗ ಮಹಾನವಮಿಯ ಸಂದರ್ಭದಲ್ಲಿ ಆಯುಧಪೂಜೆಯಂದು ತಮ್ಮ ಕಸುಬಿಗೆ ಸಂಬಂಧಿಸಿದ ಉಪಕರಣಗಳನ್ನು ಪೂಜಿಸುವುದು ಸಾಮಾನ್ಯವಾಗಿದೆ. ಹಿರಿಯಮ್ಮ ಹಾಗೂ ಲಕ್ಷ್ಮೀದೇವಿಯರನ್ನು ಪೂಜಿಸುವ ಇವರು ಕಾಡಿಗೆ ಹೋದಾಗ ಹುಲಿ ಹಾಗೂ ಇತರ ಕ್ರೂರ ಪ್ರಾಣಿಗಳಿಂದ ತಮಗೆ ತೊಂದರೆಯಾಗದಿರಲೆಂಬ ಉದ್ದೇಶದಿಂದ ಗಿಡದ ಮುತ್ತರಾಯನನ್ನು ಕಾಲಕಾಲಕ್ಕೆ ಪೂಜಿಸುವ ಪದ್ಧತಿ ಇತ್ತು. ಅಲ್ಲದೆ ಈ(ವೀ)ರಗಾರರನ್ನು ವರ್ಷದಲ್ಲೊಮ್ಮೆ ಪೂಜಿಸುವ ಇವರಲ್ಲಿ ಸತ್ತವರನ್ನು ಹೂಳುವ ಸಂಪ್ರದಾಯವಿದೆ. ಇವರಲ್ಲೂ ಬಾಲಕರನ್ನು ದೇವರಗುಡ್ಡರನ್ನಾಗಿ ಮೀಸಲು ಬಿಡುವ ಪದ್ದತಿ ಇದ್ದು, ತಮ್ಮೊಳಗಿನ ವ್ಯಾಜ್ಯಗಳನ್ನು ಜಾತಿ ಕಟ್ಟೆಮನೆಗಳಲ್ಲಿ ಯಜಮಾನನ ಸಮ್ಮುಖದಲ್ಲಿ ಬಗೆಹರಿಸಿಕೊಳ್ಳುವ ಸಂಪ್ರದಾಯವಿದೆ.

**ಮೊದಲಿಯಾರ್ :** ತಮಿಳುನಾಡು ಮೂಲದ ಇವರು ವಲಸೆ ಬಂದಿರುವ ಕೃಷಿಕವರ್ಗದವರಾಗಿದ್ದು, ವೆಲ್ಲಾಳ ಜಾತಿಗೆ ಸೇರಿದವರಾಗಿದ್ದು, ಧರ್ಮಾಚರಣೆಗಳಲ್ಲಿ ಬ್ರಾಹ್ಮಣರು ಪೌರೋಹಿತ್ಯ ವಹಿಸುತ್ತಾರೆ. ಇವರಲ್ಲಿ ಶೈವ–ವೈಷ್ಣವ ಧರ್ಮೀಯರಿದ್ದು, ಆಂತರಿಕ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಲು, ಜಾತಿ ಪಂಚಾಯಿತಿ ಇದ್ದು, ಸತ್ತವರನ್ನು ಸುಡಲಾಗುತ್ತಾದರೂ, ಕೆಲವೊಮ್ಮ ಆಸೀನ ಭಂಗಿಯಲ್ಲಿ ಹೂಳಲಾಗುತ್ತದೆ. ಇವರಲ್ಲೂ ಹನ್ನೊಂದನೇ ದಿನ ಹಾಗೂ ವಾರ್ಷಿಕ ಶ್ರಾದ್ಧಗಳನ್ನು ಆಚರಿಸಲಾಗುತ್ತದೆ. ತಲಕಾಡಿನ ಸುತ್ತಮುತ್ತ ವಾಸಿಸುವ ವೆಲ್ಲಾಳಗೌಂಡರು ತಮಿಳು ಮೂಲದವರಾದರೂ, ಕನ್ನಡ ಬಲ್ಲವರಾಗಿದ್ದು, ಬೇಸಾಯ ಮಾಡುತ್ತಾರೆ. ಅವರು ಆರಾಧಿಸುವ ಪ್ರಧಾನ ದೇವತೆಯನ್ನು ಆಧರಿಸಿದ ಕೋರ, ಕೂಟ, ಪಿರನ್‌ಕೂಟ, ಪೆರಲನ್ ಕೂಟ, ಕೊಡೆಕೂಟ, ಕೊಣ್ಣನು ಕೂಟ ಮುಂತಾದ ಉಪಪಂಗಡಗಳು ಇವರಲ್ಲಿವೆ. ಆಡಿಹಬ್ಬ ಹಾಗೂ ತಮಿಳು ಹೊಸವರ್ಷ ಇವರ ವಿಶೇಷ ಹಬ್ಬಗಳಾಗಿದ್ದು, ೧೭ ರಿಂದ ೨೫ ರೂ.ಗಳನ್ನು ತೆರ ನೀಡುವ ಸಂಪ್ರದಾಯ ಇವರಲ್ಲಿದ್ದು, ಸತ್ತವರನ್ನು ಅಗ್ನಿಸಂಸ್ಕಾರ ಮಾಡಲಾಗುತ್ತಿದ್ದು, ಅವಿವಾಹಿತರಾದಲ್ಲಿ ಹೂಳುವ ಸಂಪ್ರದಾಯವಿದೆ. ಒಳಜಗಳವನ್ನು ತೀರ್ಮಾನಿಸಲು ಇವರಲ್ಲಿ ಜಾತಿ ಪಂಚಾಯಿತಿ ಇದೆ.

**ಯಾದವ :** ಗೊಲ್ಲ, ಕೃಷ್ಣ ಗೊಲ್ಲ ಎಂದೂ ಕರೆಯಲ್ಪಡುವ ಇವರು ಒಂದು ಕಾಲದಲ್ಲಿ ಅಲೆಮಾರಿಗಳಾಗಿದ್ದು, ಪಶುಸಂಗೋಪನೆಯಲ್ಲಿ ನಿರತರಾಗಿದ್ದವರು. ಇವರಲ್ಲಿ ಯರ ಅಥವಾ ಕಿತ್ತಾರಿ, ಪುನುಗು ಅಥವಾ ಕುಡಿ, ಪೈತಾಳಿ, ಕರ್ನೇ, ಪುನಿ ಅಥವಾ ಪುಜೆ, ಬೀಗಮುದ್ರೆ ಅಥವಾ ಬೊಕ್ಕಸ, ಕಂಚು, ರಾಚ, ಮುಷ್ಟಿ ಮುಂತಾದ ಉಪಪಂಗಡಗಳಿದ್ದು, ಒಂಟಿ ಚಪ್ಪರದವರು ಹಾಗೂ ರೆಂಡು ಚಪ್ಪರದವರು ಎಂಬ ಎರಡು ಮುಖ್ಯ ಪ್ರಬೇಧಗಳಿವೆ. ಇವರಲ್ಲಿ ಹಲವಾರು ಬೆಡಗುಗಳಿದ್ದು, ಕೃಷ್ಣ, ಮಾರಮ್ಮ, ಎಲ್ಲಮ್ಮ, ಗಂಗಮ್ಮ, ಮುಂತಾದ ದೇವಾನುದೇವತೆಗಳನ್ನು ಆರಾಧಿಸುತ್ತಾರೆ. ತೆರ ನೀಡುವ ಪದ್ಧತಿ ಇವರಲ್ಲಿದೆ. ಸತ್ತ ಬ್ರಹ್ಮಚಾರಿಗಳನ್ನು ಈರಗಾರರೆಂದು ಪರಿಗಣಿಸಿ, ಕುದುರೆಸವಾರರಂತೆ ಕೆತ್ತಿದ ವೀರಗಲ್ಲು ನಿಲ್ಲಿಸಿ, ವಿಶೇಷ ದಿನಗಳಲ್ಲಿ ಪೂಜಿಸಲಾಗುತ್ತದೆ.



ಸಂಕ್ರಾಂತಿ ಹಬ್ಬದಂದು ಕಾಟಮರಾಯನನ್ನು ಪೂಜಿಸುವ ಇವರಲ್ಲಿ ದೇವರಿಗೆ ದಾಸಯ್ಯಗಳನ್ನು ಬಿಡುವ ಸಂಪ್ರದಾಯವಿದೆ. ಇವರಲ್ಲಿ ಒಳಜಗಳ ತೀರ್ಮಾನಿಸಲು ಕಟ್ಟೇಮನೆಗಳಿದ್ದು, ಸತ್ತವರನ್ನು ಸಾಮಾನ್ಯವಾಗಿ ಹೂಳಲಾಗುತ್ತದೆ.

**ಲಿಂಗಾಯತ :** ಶಿವಲಿಂಗಧಾರಿಗಳಾದ ಇವರಲ್ಲಿ ಜಂಗಮ, ಆರಾಧ್ಯ, ಬಣಜಿಗ (ಶೆಟ್ಟಿ) ಶಿವಾಚಾರಿ, ಗೌಡ, ನೊಣಬ, ಸಾದರು ಮುಂತಾದ ಒಳಪಂಗಡಗಳಿದ್ದು, ತಾಲೂಕಿನಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಕನ್ನಡ ಮಾತನಾಡುವ ಇವರು ಕೃಷಿ, ವ್ಯಾಪಾರ ಸೇರಿದಂತೆ, ವಿವಿಧ ವೃತ್ತಿಗಳಲ್ಲಿ ತೊಡಗಿದ್ದಾರೆ. ತಾವು ಪೂಜಿಸುವ ಇಷ್ಟಲಿಂಗವನ್ನು ಕೊರಳಲ್ಲಿ ಧರಿಸುವ ಇವರು ಪಂಚಾಚಾರ–ಅಷ್ಟಾವರಣ ಹಾಗೂ ಷಟ್‌ಸ್ಥಳ ಆಚರಣೆಯಲ್ಲಿ ನಿಷ್ಠೆಯುಳ್ಳವರಾಗಿದ್ದು, ಯಾಗ–ಯಜ್ಞ, ಉಪವಾಸ, ತಪಸ್ಸು ಮುಂತಾದವನ್ನು ಸಾಂಪ್ರದಾಯಿಕವಾಗಿ ಇವರು ನಂಬುವುದಿಲ್ಲ. ಹುಟ್ಟು, ಮುಟ್ಟು, ಮರಣ ಸಂದರ್ಭಗಳಲ್ಲಿ ಸೂತಕ ಆಚರಣೆ ಅಗತ್ಯವಿಲ್ಲವೆಂದು ಹೇಳಲಾಗುತ್ತಾದರೂ ರೂಢಿಯಲ್ಲಿದೆ. ಮರಣಾನಂತರ ಜೀವಾತ್ಮವು ವಿಶ್ವಾತ್ಮದಲ್ಲಿ ಒಂದಾಗುವುದರಿಂದ ಮರಣೋತ್ತರ ಕ್ರಿಯಾವಿಧಿಗಳ ಅಗತ್ಯವಿಲ್ಲವೆಂಬ ನಂಬಿಕೆಯೂ ಇವರಲ್ಲಿದೆ. ವೈದಿಕ ವಿಧಾನಕ್ಕಿಂತ ಸ್ವಲ್ಪ ಭಿನ್ನವಾದ ವಿವಾಹ ಪದ್ಧತಿಯನ್ನು ಅನುಸರಿಸುವ ಇವರು ಅಗ್ನಿಗೆ ಬದಲು ಪಂಚಕಳಸ ಪೂಜಿಸುತ್ತಿದ್ದು, ವೀರಭದ್ರನ ಒಕ್ಕಲಿನವರು ಗುಗ್ಗಲ ಸೇವೆಯನ್ನು ಮಾಡುತ್ತಾರೆ. ಲಿಂಗದವೀರ ಎಂಬ ಧಾರ್ಮಿಕ ವಿಧಿಯು ಲಿಂಗಾಯತ ಹಾಗೂ ಕುರುಬರಿಬ್ಬರಲ್ಲೂ ರೂಢಿಯಲ್ಲಿದೆ. ಜಂಗಮರನ್ನು ಗುರುಗಳನ್ನಾಗಿ ಹೊಂದಿರುವ ವೀರಶೈವರಲ್ಲಿ ಸತ್ತವರನ್ನು ಸಾಮಾನ್ಯವಾಗಿ ಉತ್ತರಮುಖವಾಗಿ ಕೂರಿಸಿ ಸಮಾಧಿ ಮಾಡಲಾಗುತ್ತದೆ. ಹನ್ನೊಂದನೆಯ ದಿನ ಶಿವಗಣಾರಾಧನೆಯನ್ನು ಆಚರಿಸಲಾಗುತ್ತದೆ. ಇವರಲ್ಲಿ ಆರಾಧ್ಯರು ವೇದ ಹಾಗೂ ಪಂಚಾಚಾರ್ಯರಲ್ಲಿ ನಿಷ್ಠೆಯುಳ್ಳವರಾಗಿದ್ದು, ಪಂಚಾಚಾರ್ಯರ ಜಯಂತಿಯನ್ನೂ, ಉಳಿದವರು ಬಸವೇಶ್ವರ ಜಯಂತಿ, ಶಿವರಾತ್ರಿ ಹಬ್ಬಗಳನ್ನೂ ಸಂಭ್ರಮದಿಂದ ಆಚರಿಸುತ್ತಾರೆ.

**ವಡ್ಡ :** ಕೆರೆ, ಬಾವಿ, ರಸ್ತೆ, ಮುಂತಾದ ಕಾಮಗಾರಿಗಳಲ್ಲಿ ದುಡಿಯುವ ಇವರು ತೆಲುಗು ಭಾಷಿಕರಿದ್ದು, ಕಲ್ಲು/ಊರು, ಮಣ್ಣು/ಬೈಲು/ದೇಶ ಹಾಗೂ ಉಪ್ಪುವಡ್ಡ ಎಂಬ ಪ್ರಬೇಧಗಳಿವೆ. ಅಲ್ಲದೇ ಬಂಡಿವಡ್ಡ, ಹಂಡಿವಡ್ಡ, ಉಳುವಡ್ಡ, ಪುಟ್ಗೋಸಿವಡ್ಡ, ಕಟ್ಟೆವಡ್ಡ ಎಂಬ ಉಪಪಂಗಡಗಳಿವೆ. ಆಂಧ್ರ ಮೂಲದವರಾದ ಇವರಲ್ಲಿ ಹಲವಾರು ಬೆಡಗುಗಳಿದ್ದು, ಏಳು ರೂ.ಗಳಿಂದ ೫೦ ರೂ.ವರೆಗೆ ತೆರ ನೀಡುವ ಪದ್ಧತಿ ಇದ್ದು, ಮಹಿಳೆಯರು ಸೆರಗು ಬಿಗಿಯುವ ವಿಧಾನಕ್ಕೆ ಗೊಬ್ಬೆ ಸೆರಗು ಎಂದು ಕರೆಯಲಾಗುತ್ತದೆ. ಇವರಲ್ಲಿ ವಿವಾಹ ಸಂದರ್ಭದಲ್ಲಿ ಬಾಸಿಂಗ ಧರಿಸುವ ಸಂಪ್ರದಾಯವಿಲ್ಲ. ಗರ್ಭಿಣಿ ಹೆಂಗಸಿನ ಪತಿಯಾದವನು ಕೆರೆವೊಡ್ಡು ಕೀಳುವಂತಿಲ್ಲ. ಶವಹೊರುವಂತಿಲ್ಲ. ಸಿದ್ಧರಾಮದೇವರು ಹಾಗೂ ಶಿರಾ (ತುಮಕೂರು ಜಿಲ್ಲೆ)ದ ಕರಿಯಮ್ಮ ದೇವರನ್ನು ಪೂಜಿಸುವ ಇವರಲ್ಲಿ ಒಳವ್ಯಾಜ್ಯಗಳನ್ನು ಬಗೆಹರಿಸಲು ಜಾತಿಪಂಚಾಯಿತಿಗಳಿದ್ದು, ಸತ್ತವರನ್ನು ಹೂಳಲಾಗುತ್ತದೆ.

**ವಿಶ್ವಕರ್ಮ :** ಪಂಚಾಳರೆಂದೂ ಕರೆಯಲ್ಪಡುವ ಇವರಲ್ಲಿ ಬಡಗಿ, ಕಮ್ಮಾರ, ಕುಂಬಾರ, ಅಕ್ಕಸಾಲಿ ಹಾಗೂ ಕಂಚುಗಾರ ಎಂಬ ಪಂಚಕರ್ಮದವರಿದ್ದು, ವಿಶ್ವಕರ್ಮ ಅಥವಾ ವಿಶ್ವಬ್ರಹ್ಮನ ಪಂಚಮುಖಗಳಿಂದ ಮನು, ಮಯ, ತ್ವಷ್ಟ, ಶಿಲ್ಪ ಹಾಗೂ ವಿಶ್ವಜ್ಞ (ದೈವಜ್ಞ)ರು ಜನಿಸಿದರೆಂಬ ಅಭಿಪ್ರಾಯವಿದ್ದು, ಅವರ ವಂಶಸ್ಥರೇ ಈ ಪಂಚಾಳರೆಂದು ನಂಬಲಾಗಿದೆ. ಈ ಐದು ಗೋತ್ರಗಳನ್ನು ೧೨೫ ಗೋತ್ರಗಳಾಗಿ ಪುನರ್ ವಿಭಜಿಸಲಾಗಿದ್ದು, ಇವರಲ್ಲಿ ಕನ್ನಡ, ತೆಲುಗು, ತಮಿಳು ಮಾತನಾಡುವವರಿದ್ದಾರೆ. ಕಮ್ಮಟೇಶ್ವರ–ಕಾಳಿಕಾದೇವಿಯರು ಇವರ ಕುಲದೇವರುಗಳಾಗಿದ್ದು, ಬಾಲಕರಿಗೆ ಉಪನಯನ ಮಾಡಿ ಜನಿವಾರಧಾರಣೆ ಮಾಡಲಾಗುತ್ತದೆ. ವೈದಿಕ ಪದ್ಧತಿಯಂತೆ ಇವರಲ್ಲಿ ವಿವಾಹ ವಿಧಿಯನ್ನು ಸ್ವಜಾತಿಯ ಪುರೋಹಿತರೇ ನಡೆಸುತ್ತಾರೆ. ಹುಟ್ಟು–ಸಾವುಗಳಲ್ಲಿ ಸೂತಕವನ್ನು ಆಚರಿಸಲಾಗುತ್ತಿದ್ದು, ಇವರಲ್ಲಿ ಸತ್ತವರಿಗೆ ಅಗ್ನಿಸಂಸ್ಕಾರ ಮಾಡಲಾಗುತ್ತದೆ. ತಮ್ಮ ವೃತ್ತಿಗೆ ಸಂಬಂಧಿಸಿದ ಸಲಕರಣೆಗಳನ್ನು ಅಮಾವಾಸ್ಯೆಯಂದು ಪೂಜಿಸುವ ಇವರಲ್ಲಿ ಹೆಸರಾಂತ ಶಿಲ್ಪಿಗಳು ಕಲಾವಿದರೂ ಆಗಿಹೋಗಿದ್ದಾರೆ. ಇವರು ತಾಲೂಕಿನಲ್ಲಿ ವಿರಳವಾಗಿ ಕಂಡುಬರುತ್ತಾರೆ.

**ವೈಶ್ಯ :** ಕೊಮ್ಮಟಿ, ಶ್ರೇಷ್ಠಿ, ಶೆಟ್ಟರು ಎಂದೂ ಕರೆಯಲ್ಪಡುವ ಇವರು ಪ್ರಧಾನವಾಗಿ ವರ್ತಕ ಜನಾಂಗದವರಾಗಿದ್ದು, ತಾಲೂಕು ಕೇಂದ್ರ ನರಸೀಪುರ ಸೇರಿದಂತೆ ಬನ್ನೂರು, ಮೂಗೂರು, ತಲಕಾಡು ಮುಂತಾದೆಡೆಗಳಲ್ಲಿ ನೆಲೆಸಿದ್ದಾರೆ. ತೆಲುಗು ಇವರ ಮಾತೃಭಾಷೆಯಾದರೂ, ಕನ್ನಡದಲ್ಲೇ ವ್ಯವಹರಿಸುತ್ತಾರೆ. ಇವರಲ್ಲಿ ಗವರೆ, ತುಪ್ಪದ ಹಾಗೂ ತ್ರೈವರ್ಣಿಕ್ ಎಂಬ ಪಂಗಡಗಳಿದ್ದರೂ, ತಾಲೂಕಿನಲ್ಲಿರುವವರು ಗವರೆಗಳಾಗಿದ್ದಾರೆ. ವೈದಿಕ ಪದ್ಧತಿಯನ್ನು ಅನುಸರಿಸುವ ಇವರಲ್ಲಿ ೧೦೨ ಗೋತ್ರಗಳಿದ್ದು, ಧರ್ಮಾಚರಣೆಗಳಿಗೆ ಬ್ರಾಹ್ಮಣರನ್ನು ಕರೆಸುತ್ತಾರೆ. ಇವರಲ್ಲಿ ಸತ್ತವರನ್ನು ವೈದಿಕ ಪದ್ಧತಿಯಲ್ಲಿ ಅಗ್ನಿಸಂಸ್ಕಾರ ಮಾಡಲಾಗುತ್ತದೆ. ಕುಲದೇವತೆಯು ಕನ್ನಿಕಾಪರಮೇಶ್ವರಿಯಾಗಿದ್ದು, ಜಾತಿಪಂಚಾಯಿತಿ ಇವರಲ್ಲೂ ರೂಢಿಯಲ್ಲಿವೆ.

**ಹೊಲೆಯ :** ಈಗ ಆದಿಕರ್ನಾಟಕರೆಂದೂ ಕರೆಯಲ್ಪಡುವ ಇವರು ೧೮ ಪಣಕ್ಕೆ ಸೇರಿದ್ದು, ಬಲಗೈನವರೆಂದೂ ಕರೆಯಲಾಗುತ್ತದೆ. ಮನೆಯಲ್ಲಿ ಕನ್ನಡ ಮಾತನಾಡುವ ಇವರು ಹಿಂದೆ ಗ್ರಾಮದ ಹೊರಭಾಗದಲ್ಲಿ ವಾಸಿಸುತ್ತಿದ್ದರು. ಇವರಲ್ಲಿ ಅತ್ತಿಕುಲ, ಆನೆಕುಲ, ಆಲೆಕುಲ ಮುಂತಾದ ಬೆಡಗುಗಳೂ ಇವೆ. ಹನ್ನೆರಡೂವರೆ ರೂಪಾಯಿಗಳ 'ವಧುತೆರ'ವು ಇವರಲ್ಲಿ ರೂಢಿಯಲ್ಲಿದ್ದು, ಕನ್ಯೆಯನ್ನು ಮದುವೆಯಾಗುವ ವಿಧುರನು 'ಸವತಿಹಣ' ಎಂದು ಹೆಚ್ಚಿನ ವಧುತೆರ ನೀಡಬೇಕಾಗಿತ್ತು. ಇವರಲ್ಲಿ ಶಿವಾರಾಧಕರು ನಂಜುಂಡೇಶ್ವರ, ಚೌಡೇಶ್ವರಿ, ಮಾಸ್ತಮ್ಮ, ಸಿದ್ದಪ್ಪಾಜಿಯನ್ನು ಪೂಜಿಸುತ್ತಿದ್ದು, ತಮ್ಮಡಿಗಳು ಅವರ ಗುರುಗಳಾದರೆ, ವೈಷ್ಣವಾರಾಧಕರಿಗೆ ಸಾತಾನಿಗಳು ಗುರುಗಳಾಗಿರುತ್ತಾರೆ. ಸಾಮಾನ್ಯವಾಗಿ ಇವರಲ್ಲಿ ಸತ್ತವರ ತಲೆಯನ್ನು ದಕ್ಷಿಣಕ್ಕಿರುವಂತೆ ಮಲಗಿಸಿ ಹೂಳಲಾಗುತ್ತದೆ. ಆದರೆ ಕೆಲವೊಮ್ಮೆ ವಯಸ್ಸಾದವರನ್ನು ಸುಡುವುದೂ ಉಂಟು.



ಸಾಂಪ್ರದಾಯಿಕವಾಗಿ ಕೃಷಿ ಕಾರ್ಮಿಕರಾಗಿರುವ ಇವರಲ್ಲಿ ಒಳಜಗಳಗಳನ್ನು ಹಿರಿಯರನ್ನೊಳಗೊಂಡ ಜಾತಿ ಪಂಚಾಯತಿಯಲ್ಲಿ ಗೊತ್ತುಗಾರನ ಸಮ್ಮುಖದಲ್ಲಿ ಬಗೆಹರಿಸಲಾಗುತ್ತದೆ.

## ಸಾಮಾಜಿಕ ಜೀವನ

ತಾಲೂಕಿನ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಸಾಮಾಜಿಕ ಬದುಕಿನಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ನಗರಪ್ರದೇಶದ ದೈನಂದಿನ ಜೀವನದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಗ್ರಾಮೀಣ ಬದುಕಿನಲ್ಲೂ ಗಣನಿಯ ಪ್ರಮಾಣದಲ್ಲಿ ಸುಧಾರಣೆಯಾಗಿದೆ. ಇದಕ್ಕೆ ಸಾರಿಗೆ–ಸಂಪರ್ಕದಲ್ಲಾಗಿರುವ ಪ್ರಗತಿಯೂ ಕಾರಣ. ಅದರಲ್ಲೂ ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯಿಂದಾಗಿ, ವಿಶ್ವಗ್ರಾಮ ಕಲ್ಪನೆ ನನಸಾಗುತ್ತಿದ್ದು, ದೂರವಾಣಿ, ದೂರದರ್ಶನ, ಗಣಕಯಂತ್ರ ಹಾಗೂ ಅಂತರ್ಜಾಲ ಸೌಲಭ್ಯಗಳು ಇದನ್ನು ಮತ್ತಷ್ಟು ಸರಳಗೊಳಿಸಿವೆ. ಕೃಷಿಯಲ್ಲಿ ಸುಧಾರಣೆ, ನೀರಾವರಿಯಲ್ಲಿ ಪ್ರಗತಿ, ಶಿಕ್ಷಣ ಸೌಕರ್ಯ, ಆರೋಗ್ಯ ಸೌಲಭ್ಯ, ಬ್ಯಾಂಕಿಂಗ್, ಸಹಕಾರ ವ್ಯವಸ್ಥೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಸಾಮಾಜಿಕ ಸೇವಾ ಸೌಲಭ್ಯಗಳೇ ಮುಂತಾದ ರಂಗಗಳಲ್ಲಿನ ಪ್ರಗತಿಗೆ ಸರ್ಕಾರ ಕೈಗೊಂಡ ಪ್ರಗತಿಶೀಲ ಕಾರ್ಯಕ್ರಮಗಳೇ ಕಾರಣವಾಗಿದ್ದು, ಅದನ್ನಿಂದು ತಾಲೂಕಿನ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಗಮನಿಸಬಹುದಾಗಿದೆ.

ಗ್ರಾಮೀಣ ಭಾಗದಲ್ಲಿ ಕೃಷಿರಂಗಕ್ಕೆ ಸಂಬಂಧಿಸಿದಂತೆ, ಸುಧಾರಿತ ಕೃಷಿಪದ್ಧತಿ, ಕೃಷಿ ಉಪಕರಣಗಳಲ್ಲಿ ಪ್ರಗತಿಯನ್ನು ಸಾಧಿಸಲಾಗಿದ್ದು, ತಂತ್ರಜ್ಞಾನ ಆಧಾರಿತ ಕೃಷಿಯತ್ತ ಪರಿವರ್ತನೆ ಕಂಡುಬರುತ್ತಿದ್ದು, ಉಳುಮೆಯಿಂದ ಕಟಾವಿನವರೆಗೆ ಯಂತ್ರಗಳ ಬಳಕೆ ಹೆಚ್ಚಾಗುತ್ತಿದೆ. ರಸಗೊಬ್ಬರಗಳ ಬಳಕೆ ಕೃಷಿ ಉತ್ಪನ್ನದಲ್ಲಿ ಅಧಿಕ ಇಳುವರಿಯನ್ನು ತಂದಿದೆಯಾದರೂ, ಸಾವಯವ ಕೃಷಿಯ ಪ್ರಾಮುಖ್ಯತೆಯಿಂದು ಮನವರಿಕೆಯಾಗುತ್ತಿದೆ. ವಿದ್ಯುತ್ ಬಳಕೆಯಿಂದಾಗಿ, ಅಂತರ್ಜಲವನ್ನು ವರ್ಷವಿಡೀ ಅಗತ್ಯಕ್ಕನುಗುಣವಾಗಿ ಬಳಸಿಕೊಂಡು ಕೃಷಿ ಉತ್ಪನ್ನವನ್ನು ಪಡೆಯುವ ಸೌಕರ್ಯ ರೈತರಿಗೆ ಲಭಿಸಿದೆಯಾದರೂ, ಅಂತರ್ಜಲ ಮಟ್ಟದ ಕುಸಿತದಿಂದಾಗಿ ಪ್ರಾಕೃತಿಕ ಅಸಮತೋಲನವುಂಟಾಗಿ ನಾನಾ ಸಮಸ್ಯೆಗಳಿಗೆ ಕಾರಣವಾಗಿದೆ. ಕೌಟುಂಬಿಕ ಜೀವನದಲ್ಲಿ ಅವಿಭಕ್ತ ಕುಟುಂಬಗಳು ಅವಸಾನದ ಅಂಚನ್ನು ತಲುಪಿದ್ದು, ವಿಭಕ್ತ ಕುಟುಂಬಗಳು ಸಾಮಾನ್ಯವಾಗುತ್ತಿದ್ದು, ಸಾಮಾಜಿಕ ಸಂಬಂಧಗಳು ಸಡಿಲಗೊಳ್ಳುತ್ತಿರುವುದು ಆತಂಕದ ಬೆಳವಣಿಗೆಯಾಗಿದೆ.

ಒಂದು ಕಾಲದಲ್ಲಿ ಗ್ರಾಮೀಣ ಬದುಕಿನ ಜೀವಾಳವಾಗಿದ್ದ ಕುಂಬಾರ, ಗಾಣಿಗ, ಬಡಗಿ, ಕಮ್ಮಾರ, ಅಕ್ಕಸಾಲಿ ಮುಂತಾದ ಕುಲಕಸುಬುಗಳಿಂದು ಕೈಗಾರಿಕಾಭಿವೃದ್ಧಿಯಿಂದಾಗಿ ಹಿನ್ನಡೆ ಕಂಡಿದ್ದು, ಅವುಗಳ ಸ್ಥಳವನ್ನು ಯಂತ್ರೋಪಕರಣ ಆಧಾರಿತ ಉತ್ಪಾದನೆಗಳು ಆಕ್ರಮಿಸಿವೆ. ತಾಂತ್ರಿಕ ಪ್ರಗತಿ ಸಮಾಜದ ಎಲ್ಲಾ ಸ್ತರದ ಜನರ ಜೀವನಕ್ರಮದ

ಮೇಲೆ ಸಾಕಷ್ಟು ಪ್ರಭಾವ ಬೀರಿದೆ. ಇದರಿಂದಾಗಿ ಸಾಂಪ್ರದಾಯಕ ವೃತ್ತಿಗಳು ಕ್ಷೀಣಿಸಲಾರಂಭಿಸಿ, ಸಂಬಂಧಿತ ಕಸುಬುದಾರರು ಪಟ್ಟಣ ಸೇರಿ ಪರ್ಯಾಯ ಮಾರ್ಗ ಕಂಡುಕೊಳ್ಳುತ್ತಿದ್ದಾರೆ. ರಾಗಿ ಬೀಸುವುದು, ಬತ್ತ ಕುಟ್ಟುವುದು, ಮುಂತಾದವು ಕಣ್ಮರೆಯಾಗಿ ರಾಗಿ–ಅಕ್ಕಿ ಗಿರಣಿಗಳು ತಲೆ ಎತ್ತಿ ಮೆರೆದಿವೆ. ಸಾಂಸ್ಕೃತಿಕ ಬದುಕು ಮರೆಯಾಗುತ್ತಿದೆ.

ವಾಣಿಜ್ಯ ವ್ಯಾಪಾರ ವಹಿವಾಟಿನಲ್ಲಿ ಗಣನೀಯ ಪ್ರಗತಿಯಾಗಿದ್ದರೂ ತಾಲೂಕು ಕೇಂದ್ರ ನರಸೀಪುರ ಸೇರಿದಂತೆ ಗ್ರಾಮೀಣ ಪ್ರದೇಶದಲ್ಲಿರುವ ವಾರದ ಸಂತೆಗಳಿಂದಿಗೂ ನಡೆಯುತ್ತಿವೆ. ಕೃಷಿ ಉತ್ಪನ್ನ ಮಾರುಕಟ್ಟೆ ಹಾಗೂ ರೇಷ್ಮೆ ಮಾರುಕಟ್ಟೆಗಳು ಕೃಷಿ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಹಾಗೂ ಯೋಗ್ಯಬೆಲೆಯನ್ನು ಒದಗಿಸುವ ಮೂಲಕ ರೈತರ ಬದುಕನ್ನು ಹಸನಾಗಿಸುವಲ್ಲಿ ನೆರವಾಗಿವೆ. ನಗರಜೀವನದಲ್ಲಿ ಜಾತಿವ್ಯವಸ್ಥೆಯ ಹಿಡಿತವನ್ನು ಸಡಿಲಗೊಳಿಸುವಲ್ಲಿ ಹೋಟೆಲು ವ್ಯವಸ್ಥೆಯಂತಹ ಅನೇಕ ಅಂಶಗಳು ಕೈಜೋಡಿಸಿವೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಅದು ಮುಂದುವರಿದಿದೆಯಾದರೂ ಸಾಕಷ್ಟು ಪರಿವರ್ತನೆಯಾಗಿದೆ. ಅಸ್ಪೃಶ್ಯತೆಯಂತಹ ಸಾಮಾಜಿಕ ಪಿಡುಗು ಕಾನೂನುಬಾಹಿರವಾಗಿದ್ದು, ಸಾರ್ವಜನಿಕವಾಗಿ ಪರಿಶಿಷ್ಟಜಾತಿ, ಪಂಗಡಗಳಿಗೆ ಸೇರಿದ ಜನರ ಹಿತಾಸಕ್ತಿಯನ್ನು ಸಂರಕ್ಷಿಸುವ ಉದ್ದೇಶದಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೂಪಿಸಿದ ಹಲವಾರು ಕಾಯ್ದೆ ಹಾಗೂ ಯೋಜನೆಗಳಿಂದಾಗಿ ಕೆಳವರ್ಗದ ಜನರಿಗೆ ಸಮಾನ ಸೌಕರ್ಯ ಲಭಿಸಿ, ಎಲ್ಲಾ ರಂಗಗಳಲ್ಲೂ ಅವರಿಗೆ ಪ್ರವೇಶ ದೊರೆಯುವಂತಾಗಿದೆ. ಈ ಎಲ್ಲಾ ಕಾರಣಗಳಿಂದಾಗಿ ತಾಲೂಕಿನ ಜನರ ಸಾಮಾಜಿಕ ಜೀವನದಲ್ಲಿ ಸಾಕಷ್ಟು ಬದಲಾವಣೆಯುಂಟಾಗಿದ್ದರೂ ಆಹಾರ, ವಸತಿ, ಮೂಲಭೂತ ಸೌಕರ್ಯ, ಆರ್ಥಿಕ ಸ್ವಾವಲಂಬನೆ ಹಾಗೂ ಸ್ಥಿರತೆ, ಉಡುಗೆ–ತೊಡುಗೆಗಳನ್ನೊಳಗೊಂಡ ಭೌತಿಕ ಸ್ಥಿತಿಗತಿಯಲ್ಲಿ ಪ್ರಗತಿ ಕಂಡುಬಂದಿದೆಯಾದರೂ ಸಾಂಪ್ರದಾಯಕ ಜೀವನಕ್ರಮ ಇನ್ನೂ ಉಳಿದುಕೊಂಡು ಬಂದಿದೆ.

**ಧಾರ್ಮಿಕ ಆಚರಣೆ :** ವಿವಾಹಿತ ಹಿಂದೂ ಮಹಿಳೆಯು ಗರ್ಭಿಣಿಯಾದಾಗಿನಿಂದ ಹೆರಿಗೆಯಾಗುವವರೆಗೆ ಹಲವಾರು ಧಾರ್ಮಿಕ ವಿಧಿಕಟ್ಟಳೆಗಳನ್ನು ಆಚರಿಸಲಾಗುತ್ತದೆ. ಮೊದಲ ಹೆರಿಗೆ ಸಾಮಾನ್ಯವಾಗಿ ತವರುಮನೆಯಲ್ಲಿ ಜರುಗುತ್ತಿದ್ದು, ಗರ್ಭಿಣಿಯ ಬಯಕೆಗಳನ್ನು ಈಡೇರಿಸಲು ಮನೆಮಂದಿಯೆಲ್ಲ ಗಮನ ನೀಡುತ್ತಿದ್ದು, ಪೌಷ್ಟಿಕ ಆಹಾರ ನೀಡುವುದರ ಜೊತೆಗೆ ಒಳ್ಳೆಯ ವಿಚಾರಗಳನ್ನೇ ಅವಳಿಗೆ ತಿಳಿಸಲಾಗುತ್ತದೆ. ಶ್ರಮದಾಯಕ ಕೆಲಸಗಳನ್ನು ಮಾಡಲು ಅವಳಿಗೆ ಅವಕಾಶ ನೀಡದೆ ಎಚ್ಚರಿಕೆಯಿಂದ ನೋಡಿಕೊಳ್ಳಲಾಗುತ್ತದೆ. ಅಶುಭ ಸಂಗತಿ, ದೃಶ್ಯಗಳಿಂದ ಅವಳನ್ನು ದೂರವಿಟ್ಟು, ಅಮಾವಾಸ್ಯೆ, ಚಂದ್ರ–ಸೂರ್ಯಗ್ರಹಣಗಳಂದು ಹೊರಗೆ ಹೋಗಲು ಬಿಡುವುದಿಲ್ಲ. ಗರ್ಭಿಣಿಗೆ ಐದು ಇಲ್ಲವೇ ಎಂಟನೆಯ ತಿಂಗಳಲ್ಲಿ ಗಂಡನ ಮನೆಯಲ್ಲಿ ಹಸಿರು ಸೀರೆ ಉಡಿಸಿ ಸೀಮಂತ ಮಾಡಿ, ಮಡಿಲು ತುಂಬಿ ಹೆರಿಗೆಗೆಂದು ತವರು ಮನೆಗೆ ಕಳುಹಿಸಿ ಕೊಡಲಾಗುತ್ತದೆ. ಹಿಂದೆ ಮನೆಯಲ್ಲೇ ಸೂಲಗಿತ್ತಿಯರ ನೆರವಿನೊಂದಿಗೆ ಹೆರಿಗೆ ಮಾಡಿಸಲಾಗುತ್ತಿತ್ತು. ಆದರಿಂದು ಗ್ರಾಮೀಣ ಪ್ರದೇಶದಲ್ಲಿರುವ ಪ್ರಾಥಮಿಕ



ಆರೋಗ್ಯ ಕೇಂದ್ರ, ಆಸ್ಪತ್ರೆಗಳಲ್ಲಿ ವೈದ್ಯರ ನೆರವಿನೊಂದಿಗೆ ಹೆರಿಗೆ ಮಾಡಿಸುವುದು ಅಧಿಕವಾಗುತ್ತಿದೆ. ಹೆರಿಗೆಗೆಂದು ತವರಿಗೆ ಹೋದ ಹೆಂಡತಿಗೆ ಹೆರಿಗೆಯಾಗಿ ಸೂತಕ ಕಳೆಯುವವರೆಗೂ ಗಂಡನಾದವ ಮುಖ ಕ್ಷೌರ ಮಾಡದೇ ಇರುವ ಸಂಪ್ರದಾಯವಿದೆ. ಹೆರಿಗೆಯಾದ ಸಮಯದಲ್ಲಿ ಎಂಟರಿಂದ ಹದಿನೈದನೆಯ ದಿನದವರೆಗೆ ಸೂತಕವನ್ನು ಆಚರಿಸಲಾಗುತ್ತದೆ. ೧೧ ಅಥವಾ ೧೨ನೆಯ ದಿನದಂದು ನಾಮಕರಣ ಮಾಡಲಾಗುತ್ತದೆ. ಕೆಲವರಲ್ಲಿ ಜಾತಕ ಬರೆಸುವ ಸಂಪ್ರದಾಯವಿದೆ. ಹೆರಿಗೆಯಾದ ಮೊದಲ ೧೧ ದಿನ ಬಾಣಂತಿಗೆ ಆಹಾರದೊಂದಿಗೆ ಬಾಣಂತಿಖಾರ ನೀಡಲಾಗುತ್ತದೆ. ಹೆರಿಗೆಯಾದ ಮೂರು–ಐದು–ಒಂಭತ್ತು ತಿಂಗಳ ನಂತರ, ಮಗುವಿನೊಂದಿಗೆ ತಾಯಿಯು ಗಂಡನ ಮನೆಗೆ ಹಿಂತಿರುಗುವ ಸಂಪ್ರದಾಯವಿದೆ. ಮಕ್ಕಳಾಗದಿದ್ದಲ್ಲಿ ನಾಗರಪ್ರತಿಷ್ಠೆ, ಅಶ್ವತ್ಥವೃಕ್ಷ ಪೂಜೆ, ಯಾತ್ರೆ ಕೈಗೊಳ್ಳುವ ಸಂಪ್ರದಾಯವಿದ್ದರೂ, ವೈದ್ಯಕೀಯ ನೆರವು ಪಡೆಯುವುದು ಇಂದು ಹೆಚ್ಚಾಗುತ್ತಿದೆ. ಮಗುವಿನ ತಲೆಗೂದಲನ್ನು ಒಂದು ಅಥವಾ ಮೂರು ವರ್ಷದೊಳಗೆ ಮನೆದೇವರಿಗೆ ಮುಡಿ ಕೊಡುವ ಸಂಪ್ರದಾಯವಿದೆ. ಬ್ರಾಹ್ಮಣರಾದಲ್ಲಿ ಬಾಲ್ಯದಲ್ಲೇ ಬಾಲಕರಿಗೆ ಉಪನಯನವನ್ನು ಮಾಡಿ ಜನಿವಾರ ಧರಿಸಲಾಗುತ್ತಿದ್ದು, ವೈಶ್ಯ, ಕಮ್ಮಾರ, ಅಕ್ಕಸಾಲಿಗ, ನೇಕಾರ ಬಣಜಿಗ ಮುಂತಾದ ವೈಷ್ಣವ ಅನುಯಾಯಿಗಳಲ್ಲೂ ಜನಿವಾರ ಧಾರಣೆ ಆಚರಣೆಯಲ್ಲಿದೆ. ವೀರಶೈವರಲ್ಲಿ ಇಷ್ಟಲಿಂಗ ಧಾರಣೆಯನ್ನು ಮಗುವಿನ ನಾಮಕರಣದಂದೇ ಮಾಡಿಸುವ ಸಂಪ್ರದಾಯವಿದೆ.

ಮುಸ್ಲಿಮರಲ್ಲಿ ಮಗುವಿನ ಜನನದ ಸುದ್ದಿಯನ್ನು ತರುವ ವ್ಯಕ್ತಿಗೆ ಉಡುಗೊರೆ ನೀಡುವ ಸಂಪ್ರದಾಯವಿದ್ದು, ಮಗುವನ್ನು ದುಷ್ಟಶಕ್ತಿಗಳು ಕಾಡದಿರಲೆಂಬ ಉದ್ದೇಶದಿಂದ ಹಲವಾರು ಧಾರ್ಮಿಕ ವಿಧಿಗಳನ್ನು ಆಚರಿಸಲಾಗುತ್ತದೆ. ಹುಟ್ಟಿದ ಆರನೆಯ ದಿನ ಸತ್ತ ಹಿರಿಯರ ಹೆಸರನ್ನು ಮಗುವಿಗೆ ನಾಮಕರಣ ಮಾಡಲಾಗುತ್ತದೆ. ಅಡಿಕ ಸಮಾರಂಭವನ್ನು ೭–೧೪ ಹಾಗೂ ೨೧ನೇ ದಿನದಂದು ಆಚರಿಸಲಾಗುತ್ತದೆ. ಮಗುವಿಗೆ ನಾಲ್ಕೂವರೆ ತಿಂಗಳಾದಾಗ ಉಪ್ಪು (ನಮಕ್ ಚಾಸಿ) ಮಾಂಸಗಳನ್ನು ಚೀಪಿಸಲಾಗುತ್ತದೆ. ಮಗುವಿಗೆ ನಾಲ್ಕು ವರ್ಷ ನಾಲ್ಕು ತಿಂಗಳು ನಾಲ್ಕು ದಿನಗಳಾಗಿದ್ದಾಗ ಬಿಸ್ಮಿಲ್ಲಾವನ್ನೂ ಏಳನೆಯ ವರ್ಷದಲ್ಲಿ ಸನ್ನತ್ತನ್ನು ಮಾಡಿಸಲಾಗುತ್ತದೆ. ಕ್ರೈಸ್ತರಲ್ಲಿ ಮಗು ಹುಟ್ಟಿದ ಒಂದು ತಿಂಗಳಿನೊಳಗೆ ಚರ್ಚಿನಲ್ಲಿ ನಾಮಕರಣ ಮಾಡುವ ಸಮಾರಂಭವನ್ನು ಆಚರಿಸುತ್ತಾರೆ.

ಹೆಣ್ಣುಮಕ್ಕಳು ಮೈನೆರೆದಾಗ ಸಾಮಾನ್ಯವಾಗಿ ಎಲ್ಲಾ ಜಾತಿಯವರಲ್ಲೂ ಮೂರರಿಂದ ಹದಿನೈದು ದಿನಗಳ ಸೂತಕವನ್ನು ಆಚರಿಸಲಾಗುತ್ತದೆ. ಆಗ ಅವಳನ್ನು ಕೊಠಡಿಯೊಂದರಲ್ಲಿ ಏಕಾಂತದಲ್ಲಿರಿಸಲಾಗುತ್ತಿತ್ತು. ಕೆಲವು ಜಾತಿಯವರಲ್ಲಿ ಸೋದರಮಾವ ಗುಡಿಸಲು ಹಾಕಿ ಸೋದರಸೊಸೆಯನ್ನು ಇರಿಸುವ ಸಂಪ್ರದಾಯ ಹಿಂದೆ ಇತ್ತು. ಸಾಯಂಕಾಲದ ವೇಳೆ ಹುಡುಗಿಗೆ ಮುತ್ತೈದೆಯರು ಅರಿಶಿನ ಕುಂಕುಮ ಹಚ್ಚಿ ಆರತಿ ಬೆಳಗುತ್ತಾರೆ. ಉಡಿ ತುಂಬುವ ಸಂಪ್ರದಾಯವೂ ಇದೆ. ಸೂತಕ ಕಳೆಯುತ್ತಿದ್ದಂತೆ, ಹೊಸ ಬಟ್ಟೆಯುಡಿಸಿ ಮನೆಯಲ್ಲೆಲ್ಲ ಓಡಾಡಬಹುದಾಗಿದೆ.

**ವಿವಾಹ :** ಹಿಂದೂಗಳಲ್ಲಿ ಮದುವೆಯನ್ನು ಹಿಂದೆ ಸಂಪ್ರದಾಯಬದ್ಧವಾಗಿ ಐದು ದಿನ ಆಚರಿಸಲಾಗುತ್ತಿದ್ದು, ಕ್ರಮೇಣ ಮೂರು ದಿನಗಳಿಗೆ ಇಳಿದ ಅದಿಂದು ೨೪ ಗಂಟೆಗೆ ಸೀಮಿತಗೊಂಡಿದೆ. ಬಾಲ್ಯವಿವಾಹವಿಂದು ಕಣ್ಮರೆಯಾಗಿದ್ದು, ಹುಡುಗಿ ಪ್ರಾಪ್ತ ವಯಸ್ಕಳಾದ ಮೇಲೆ ವಿವಾಹ ಮಾಡಲಾಗುತ್ತದೆ. ಹೆಣ್ಣಿನ ಮನೆ ಮುಂದೆ ಮದುವೆ ನಡೆಯುವುದು ಸಾಮಾನ್ಯವಾಗಿದ್ದು, ಹುಡುಗಿಯ ಊರಲ್ಲಿನ ಗುಡಿ ಇಲ್ಲವೇ ಛತ್ರದಲ್ಲಿ ವಿವಾಹ ಮಾಡಿಕೊಡಲಾಗುತ್ತದೆ.

ಸಗೋತ್ರ ವಿವಾಹಕ್ಕೆ ಅವಕಾಶವಿರದಿದ್ದರೂ, ಒಳಪಂಗಡ, ಉಪಪಂಗಡಗಳ ನಡುವೆ ವಿವಾಹಗಳಿಂದು ಜರುಗುವಷ್ಟು ಸಾಮಾಜಿಕ ಕಟ್ಟುಪಾಡುಗಳು ಸಡಿಲಗೊಳ್ಳುತ್ತಿವೆ. ಆದರೂ ಇನ್ನೂ ಪೂರ್ಣ ಹೋಗಿಲ್ಲ. ವಿವಾಹ ನಿಶ್ಚಯಿಸುವ ಮೊದಲು ಸಾಮಾನ್ಯವಾಗಿ ವಧು–ವರರ ಜಾತಕಗಳನ್ನು ನೋಡಿ, ಅದು ಕೂಡಿ ಬಂದರೆ ಮಾತ್ರ ವಿವಾಹ ಮಾಡಲಾಗುತ್ತದೆ. ವಿವಾಹಕ್ಕೆ ಐದು ದಿನ ಅಥವಾ ಮೂರು ದಿನಕ್ಕೆ ಮೊದಲೇ ವಧುವರರಿಗೆ ಅವರವರ ಮನೆಯಲ್ಲಿ ಮುತ್ತೈದೆಯರು ಸೇರಿ ಎಣ್ಣೆ ನೀರು ಹಾಕಿ, ಮನೆ ಮುಂದೆ ಚಪ್ಪರ ಹಾಕುವುದರೊಂದಿಗೆ ವಿವಾಹ ಸಂಭ್ರಮ ಆರಂಭವಾಗುತ್ತದೆ. ಸೋದರಮಾವ ಕಳ್ಳಿಗಿಡದ ಕೊಂಬೆಯನ್ನು ಹಾಲುಕಂಬವಾಗಿ ತಂದು ನೆಡುತ್ತಾನೆ. ವಿವಾಹದ ಹಿಂದಿನ ದಿನವಾದ ಚಪ್ಪರದಂದು ಸಣ್ಣವಿಳ್ಳೆಶಾಸ್ತ್ರ (ನಿಶ್ಚಿತಾರ್ಥ) ಹಾಗೂ ದೇವತಾಕಾರ್ಯಗಳನ್ನು ಮಾಡಲಾಗುತ್ತದೆ. ಧಾರೆಯ ದಿನದಂದು ವಧುವಿನ ತಂದೆ–ತಾಯಿ–ಬಂಧು–ಬಳಗದವರು ವರನಿಗೆ ಕನ್ಯೆಯನ್ನು ಧಾರೆಯೆರೆದ ನಂತರ ಅವಳಿಗೆ ವರನು ತಾಳಿ ಕಟ್ಟುವುದರೊಂದಿಗೆ ವಧುವರರು ದಂಪತಿಯಾಗಿ ಗುರುಹಿರಿಯರಿಂದ ಅಕ್ಷತಾಶೀರ್ವಾದಗಳನ್ನು ಪಡೆಯುತ್ತಾರೆ. ಮುಂದೆ ನಾಗವಳ್ಳಿಶಾಸ್ತ್ರ, ಮನೆದೇವರ ದರ್ಶನ, ಮನೆತುಂಬಿಸಿ ಕೊಳ್ಳುವುದು ಪ್ರಸ್ಥಮಾಡುವುದು ಪೂರ್ಣಗೊಳ್ಳುತ್ತಿದ್ದಂತೆ ವಧು ಗಂಡಿನ ಮನೆಯಲ್ಲಿ ಸಂಸಾರ ಮಾಡಲಾರಂಭಿಸುತ್ತಾಳೆ. ಹಿಂದೂಗಳ ವಿವಾಹದಲ್ಲಿ ಮದುವೆಯುದ್ದಕ್ಕೂ ಸೋದರಮಾವನು ಮಹತ್ವದ ಪಾತ್ರ ವಹಿಸುತ್ತಾನೆ. ಇದು ಹಿಂದೆ ಇದ್ದ ಮಾತೃಪ್ರಧಾನ ಕುಟುಂಬವ್ಯವಸ್ಥೆಯ ಪಳಿಯುಳಿಕೆಯಾಗಿದೆ. ಆದರೆ ಇಂದು ಅಂತರಜಾತಿ ವಿವಾಹಗಳು ಸಾಮಾನ್ಯವಾಗುತ್ತಿದ್ದು, ಸಾಮೂಹಿಕ ವಿವಾಹವೂ ಸೇರಿದಂತೆ ಅಂತರಜಾತಿ ವಿವಾಹಗಳಿಗೆ ಸರ್ಕಾರವು ತಾಳಿಭಾಗ್ಯ ಯೋಜನೆ ಮೂಲಕ ಪ್ರೋತ್ಸಾಹ ನೀಡುತ್ತಿದೆ. ಸಾಮಾಜಿಕ ಸಂಘಸಂಸ್ಥೆ, ಮಠ ಮುಂತಾದವು ಸಾಮೂಹಿಕ ವಿವಾಹಕ್ಕೆ ಬೆಂಬಲಿಸುತ್ತಿವೆ. ಅಂತರ್ಜಾತಿ ವಿವಾಹವಾಗುವ ವಧು–ವರರಲ್ಲೊಬ್ಬರು ಪರಿಶಿಷ್ಟಜಾತಿಗೆ ಸೇರಿದ್ದರೆ, ಅಂತಹವರಿಗೆ ಸರ್ಕಾರ ೨೫,೦೦೦ ರೂ.ಗಳ ನೆರವು ನೀಡಿ ನೌಕರಿಯನ್ನೂ ನೀಡುತ್ತದೆ.

**ವಿಧವಾ ವಿವಾಹ :** ಕೂಡಿಕೆ, ಸೀರುಡಿಕೆ ಎಂದೂ ಕರೆಯಲ್ಪಡುವ ಇದು ಕೆಲವು ಜಾತಿಯ ಜನರಲ್ಲಿ ಈಗಲೂ ರೂಢಿಯಲ್ಲಿದೆ. ವಿಧವೆಯರು ವಿಧುರರನ್ನು ವಿವಾಹವಾಗುವುದಕ್ಕೆ ಕೂಡಿಕೆ ಎಂದು ಕರೆಯಲಾಗುತ್ತಿದ್ದು, ಅಮಾವಾಸ್ಯೆಯ ರಾತ್ರಿಯಂದು ವಿವಾಹ ಮಾಡಿ ಕುಲಬಾಂಧವರಿಗೆ ಔತಣ ನೀಡಲಾಗುತ್ತದೆ. ತಾಲೂಕಿನಲ್ಲಿ ಚಿಂತನಾಲಯ



ಸಂಸ್ಥೆಯು ವಿಧವಾ ವಿವಾಹಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕಳೆದೆರಡು ದಶಕಗಳಿಂದ ನೀಡುತ್ತಾ ಬಂದಿದೆ. ಹಿಂದೂಗಳಲ್ಲಿ ವಿವಾಹ ವಿಚ್ಛೇದನಕ್ಕೆ ಸಾಂಪ್ರದಾಯಿಕ ಒಪ್ಪಿಗೆ ಇಲ್ಲ, ಆದರೂ ಇಂದು ಕಾನೂನು ಪ್ರಕಾರ ವಿಚ್ಛೇದನಕ್ಕೆ ಅವಕಾಶವಿದೆ.

ಮುಸ್ಲಿಮರಲ್ಲಿ ವಿವಾಹವು ಒಂದು ಸಾಮಾಜಿಕ ಒಪ್ಪಂದವಾಗಿದ್ದು, ವಧು–ವರರ ಕುಟುಂಬದವರ ನಡುವೆ ಮೆಹಾರ ಮುಂತಾದ ವಿಷಯಗಳ ಬಗ್ಗೆ ಒಪ್ಪಂದವೇರ್ಪಟ್ಟು ನಂತರ ಮದುವೆ ಮಾಡಲಾಗುತ್ತದೆ. ವಿವಾಹ ದಿನದಂದು ವರನು ಕುದುರೆ ಮೇಲೆ ಕುಳಿತು ವಧುವಿನ ಮನೆಗೆ ಬಂದು ಖಾಜಿ ಸಮ್ಮುಖದಲ್ಲಿ ಮೆಹಾರ್ ಸಲ್ಲಿಸಿದ ನಂತರ ನಿಖಾ ಮಾಡಲಾಗುತ್ತದೆ. ಆನಂತರ ಶಾದಿ ಏರ್ಪಡಿಸಿ ಬಂಧು–ಮಿತ್ರರಿಗೆ ಔತಣ ನೀಡಲಾಗುತ್ತದೆ. ಮುಸ್ಲಿಮರಲ್ಲಿ ಪುರುಷರು ಯಾವುದೇ ಕಾರಣಕ್ಕೂ ಮೂರು ಬಾರಿ 'ತಲಾಕ್' ಎಂದು ಹೇಳಿದರೆ ವಿವಾಹ ವಿಚ್ಛೇದನಗೊಳ್ಳುತ್ತದೆ. ಆದರಿಂದು ಇದನ್ನು ಕಾನೂನಿನ ಮೂಲಕ ನಿಯಂತ್ರಿಸುವ ಪ್ರಯತ್ನಗಳು ನಡೆದಿದೆ.

ಕ್ರಿಶ್ಚಿಯನ್ನರಲ್ಲಿ ವಧು–ವರರ ಕುಟುಂಬದವರು ವಿವಾಹಕ್ಕೆ ಒಪ್ಪಿದ ನಂತರ ನಿಶ್ಚಿತಾರ್ಥವು ವರನ ಕಡೆಯ ಪ್ಯಾರಿಸ್ ಚರ್ಚಿನಲ್ಲಿ ಪಾದ್ರಿಗಳ ಸಮ್ಮುಖದಲ್ಲಿ ನಡೆಯುತ್ತದೆ. ಆನಂತರ ವಿವಾಹ ಸಂದರ್ಭದಲ್ಲಿ ವಧು–ವರರು ಉಂಗುರ ಬದಲಿಸಿಕೊಂಡು ರಿಜಿಸ್ಟರ್‌ನಲ್ಲಿ ಸಹಿ ಮಾಡಿ, ಔತಣ ನೀಡುವುದರೊಂದಿಗೆ ವಿವಾಹ ಪೂರ್ಣಗೊಳ್ಳುತ್ತದೆ. ಈಗ ಅವರಲ್ಲೂ ಮಾಂಗಲ್ಯ ಕಟ್ಟುವ ಸಂಪ್ರದಾಯ ರೂಢಿಯಲ್ಲಿದೆ.

**ಶವಸಂಸ್ಕಾರ :** ಶವಸಂಸ್ಕಾರಕ್ಕಾಗಿ ಆಯಾ ಜಾತಿಯವರ ಸ್ಮಶಾನಗಳು ಕೆಲವೆಡೆ ಇರುತ್ತವೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಅವರವರ ಹೊಲದಲ್ಲೇ ಹೂಳಲಾಗುತ್ತದೆ. ನರಸೀಪುರ ಹಾಗೂ ಬನ್ನೂರು ಪಟ್ಟಣಗಳಲ್ಲಿ ಚಿತಾಗಾರವಿದೆ. ಹಿಂದೂಗಳಲ್ಲಿ ಸತ್ತವರನ್ನು ಹೂಳುವ ಹಾಗೂ ಸುಡುವ ಸಂಪ್ರದಾಯವಿದೆ. ಬ್ರಾಹ್ಮಣ, ಬಂಜಾರ, ವೈಶ್ಯ ಮುಂತಾದ ಜಾತಿಯವರಲ್ಲಿ ಸುಡುವುದು ಸರ್ವೇಸಾಮಾನ್ಯವಾಗಿದೆ. ತೀರಾವಯಸ್ಸಾದವರು, ಕುಷ್ಟ, ತೊನ್ನು ಮುಂತಾದ ರೋಗಿಗಳ ಶವವನ್ನು ಎಲ್ಲಾ ಜಾತಿಯಲ್ಲೂ ಸುಡಲಾಗುತ್ತದೆ. ಶವಸಂಸ್ಕಾರದಲ್ಲಿ ಅತ್ಯಂತ ಪ್ರಾಚೀನ ಪದ್ಧತಿಯಾದ ಕಲ್ಲುಸೇವೆ ಶವಸಂಸ್ಕಾರ ಪದ್ಧತಿಯು ತಾಲೂಕಿನ ಬಿ.ಬೆಟ್ಟಹಳ್ಳಿ ಬಳಿಯ ವಡಗಲ್ ರಂಗನಾಥನ ಬೆಟ್ಟದ ಪರಿಸರದಲ್ಲಿ ತೀರಾ ಇತ್ತೀಚಿನವರೆಗೆ ರೂಢಿಯಲ್ಲಿತ್ತು. ಈ ಪದ್ಧತಿಯಲ್ಲಿ ಶವವನ್ನು ಕಲ್ಲುಪೊಟರೆ ನಡುವೆ ಇಟ್ಟು ಸುತ್ತ ಕಲ್ಲನ್ನು ಪೇರಿಸಲಾಗುತ್ತದೆ. ಉಳಿದಂತೆ ತಲೆಯನ್ನು ದಕ್ಷಿಣ ದಿಕ್ಕಿಗಿಟ್ಟು ಶವವನ್ನು ಕೂರಿಸಿ ಇಲ್ಲವೇ ಮಲಗಿಸಿ ಮಣ್ಣು ಮಾಡಲಾಗುತ್ತದೆ. ಸಮಾಧಿ ಮೇಲೆ ಶಿಲೆ, ವೃಂದಾವನ, ಮಂಟಪ, ಗದ್ದುಗೆ ಮುಂತಾದವನ್ನು ನಿರ್ಮಿಸುವ ಸಂಪ್ರದಾಯವಿಂದು ವಿರಳವಾಗಿದೆ. ವೀರಶೈವರಲ್ಲಿ ಶಿವದೀಕ್ಷೆ ಪಡೆದವರ ಶವಗಳಿಗೆ ಕ್ರಿಯಾಸಮಾಧಿ ಮಾಡಲಾಗುತ್ತದೆ.

ಬ್ರಾಹ್ಮಣರೂ ಸೇರಿದಂತೆ ಇತರ ವೈಷ್ಣವಾರಾಧಕರಲ್ಲಿ ಮರಣಶಯ್ಯೆಯಲ್ಲಿರುವ ವ್ಯಕ್ತಿಯ ಬಾಯಲ್ಲಿ ತುಳಸಿದಳವಿಟ್ಟು–ಗಂಗಾಜಲವನ್ನು ಬಿಟ್ಟು ಕಿವಿಯಲ್ಲಿ ದೇವರ

ನಾಮವನ್ನು ಹೇಳುವ ಸಂಪ್ರದಾಯವಿದೆ. ಸತ್ತವ್ಯಕ್ತಿಯ ಮನೆಯ ಮುಂದೆ ಬೆಂಕಿ ಕೊಳ್ಳಿಯನ್ನು ಇಡಲಾಗುತ್ತದೆ. ಶವಕ್ಕೆ ಸ್ನಾನ ಮಾಡಿಸಿ ಚಟ್ಟದಲ್ಲಿಟ್ಟು, ಸ್ಮಶಾನಕ್ಕೆ ಕೊಂಡೊಯ್ದು ಸಂಸ್ಕಾರ ಮಾಡಲಾಗುತ್ತದೆ. ಕೆಲವು ಜಾತಿಯವರಲ್ಲಿ ಶವದೊಂದಿಗೆ ಬೆಂಕಿ ಹಿಡಿದುಕೊಂಡು ಹೋಗುವ ಸಂಪ್ರದಾಯವಿದೆ. ಸ್ಮಶಾನದಲ್ಲಿ ಶವವನ್ನು ವಿಧಿಬದ್ಧವಾಗಿ ಪೂಜಿಸಿದ ನಂತರ ಅಗ್ನಿಗರ್ಪಿಸಲಾಗುತ್ತದೆ. ಇಲ್ಲವೇ ಗುಳಿಯಲ್ಲಿಟ್ಟು ಸಮಾಧಿ ಮಾಡಲಾಗುತ್ತದೆ. ಸುಟ್ಟವರ ಚಿತಾಭಸ್ಮವನ್ನು ಮಡಿಕೆಯಲ್ಲಿಟ್ಟುಕೊಂಡು ಪುಣ್ಯಕ್ಷೇತ್ರಕ್ಕೆ ಕೊಂಡೊಯ್ದು ಅಪರಕರ್ಮ ಕಾರ್ಯಗಳನ್ನು ಮಾಡಿ ನದಿಗೆ ವಿಸರ್ಜಿಸಲಾಗುತ್ತದೆ. ಅದೇ ಸಮಾಧಿ ಮಾಡಿದ್ದಲ್ಲಿ ಮೇಲೆ ತುಂಬೆ, ತುಳಸಿ ಗಿಡವನ್ನು ನೆಡಲಾಗುತ್ತದೆ. ಹತ್ತು ದಿನಗಳ ಸೂತಕ ಆಚರಿಸಿ ೧೧ನೇ ದಿನ ಶ್ರಾದ್ಧ ಮಾಡಿ ಬಂಧು-ಮಿತ್ರರಿಗೆ ಊಟ ಹಾಕಲಾಗುತ್ತದೆ. ಇತರ ಜಾತಿಗಳಲ್ಲಿ ೧೨ ರಿಂದ ೧೪ನೇ ದಿನ ಕುಲಬಾಂಧವರಿಗೆ ಊಟ ಹಾಕುತ್ತಾರೆ. ಮಹಾಲಯ ಅಮಾವಾಸ್ಯೆಯಂದು ವಾರ್ಷಿಕ ಶ್ರಾದ್ಧವನ್ನು ಆಚರಿಸುವ ಸಂಪ್ರದಾಯ ಹಲವು ಜಾತಿಗಳಲ್ಲಿದೆ.

ಮುಸ್ಲಿಮರಲ್ಲಿ ಸಾಯುತ್ತಿರುವ ವ್ಯಕ್ತಿಯ ಬಾಯಲ್ಲಿ ಜೇನುತುಪ್ಪವನ್ನು ಹನಿಸಿ ಖುರಾನ್ ಪಠಿಸುವ ಸಂಪ್ರದಾಯವಿದೆ. ಸತ್ತ ವ್ಯಕ್ತಿಯ ಶವವನ್ನು ತೊಳೆದು ಪರಿಮಳ ದ್ರವ್ಯಗಳನ್ನು ಸಿಂಪಡಿಸಿ ಬಿಳಿಬಟ್ಟೆಯಿಂದ ಮುಚ್ಚಿ ಶವಪೆಟ್ಟಿಗೆಯಲ್ಲಿ ಇಟ್ಟುಕೊಂಡು ಕಬರಸ್ಥಾನಕ್ಕೆ ಕೊಂಡೊಯ್ದು ಮಸೀದಿ ಬಳಿ ಕೆಳಗಿಳಿಸಿ, ನಮಾಜ್ ಮಾಡಿ ನಂತರ ಶವವನ್ನು ಗುಣಿಗಿಳಿಸಿ ತಲೆ ಉತ್ತರಕ್ಕಾದಂತೆ ಮಲಗಿಸಿ, ಮುಖವನ್ನು ಮೆಕ್ಕಾ (ಪಶ್ಚಿಮ) ದಿಕ್ಕಿಗೆ ತಿರುಗಿಸಿ, ಸಮಾಧಿ ಮಾಡಲಾಗುತ್ತದೆ. ಸತ್ತ ವ್ಯಕ್ತಿಯ ಮನೆಯಲ್ಲಿ ಮೂರು ದಿನ ಅಡುಗೆ ಮಾಡುವುದಿಲ್ಲ. ಆಗ ಬಂಧುಗಳೇ ಅವರಿಗೆ ಊಟ ಕಳುಹಿಸುತ್ತಾರೆ. ಮೂರನೆಯ ದಿನ **'ಕುಮರತ್'** ಔತಣವನ್ನು ನೀಡಲಾಗುತ್ತದೆ. ಇದೇ ರೀತಿ ೪೦ನೆಯ ದಿನ, ನಾಲ್ಕು, ಆರು, ಒಂಭತ್ತನೆಯ ತಿಂಗಳು ಸೇರಿದಂತೆ ವರ್ಷದ ಕೊನೆಯ ದಿನದಂದೂ ಬಂಧುಗಳಿಗೆ ಭೋಜನ ನೀಡುವ ಸಂಪ್ರದಾಯವಿದೆ.

ಕ್ರಿಶ್ಚಿಯನ್ನರಲ್ಲಿ ಮರಣಶಯ್ಯೆಯಲ್ಲಿರುವ ವ್ಯಕ್ತಿಗೆ ಪ್ಯಾರಿಸ್ ಪಾದ್ರಿಯು ಸಪ್ತ ವಿಧಿಯನ್ನು (seven sacraments) ಮಾಡುತ್ತಾರೆ. ನಂತರ ಸತ್ತ ವ್ಯಕ್ತಿಯ ಶವಕ್ಕೆ ಸ್ನಾನ ಮಾಡಿಸಿ, ಬಿಳಿಯುಡುಗೆ ತೊಡಿಸಿ ಶವ ಪೆಟ್ಟಿಗೆಯಲ್ಲಿರಿಸಿ, ಕೊಂಡ್ಯೊಯ್ದು ಪ್ಯಾರಿಸ್ ಚರ್ಚ್‌ನಲ್ಲಿ ಪವಿತ್ರ ಜಲವನ್ನು ಪಾದ್ರಿಯು ಸಿಂಪಡಿಸಿ ಆಶೀರ್ವದಿಸಿದ ನಂತರ ಸ್ಮಶಾನಕ್ಕೆ ತೆರಳಿ ಅಲ್ಲಿ ವಿಧಿಬದ್ಧವಾಗಿ ಸಂಸ್ಕಾರ ಮಾಡಲಾಗುತ್ತದೆ. ಅನಂತರ ೧೦ನೆಯ ದಿನ ಬಂಧುಗಳಿಗೆ ಊಟ ನೀಡಲಾಗುತ್ತದೆ.

**ಗೃಹಜೀವನ :** ತಾಲೂಕಿನ ಬೆನಕನಹಳ್ಳಿ, ಹೆಮ್ಮಿಗೆ ಮುಂತಾದೆಡೆ ಶಿಲಾಯುಗ ಮಾನವರು ಹಿಂದೆ ನೆಲೆಸಿದ್ದ ನಿವೇಶನಗಳಲ್ಲಿ ದೊರೆತಿರುವ ಅವಶೇಷಗಳಿಂದ ಅವರು ವಾಸಿಸುತ್ತಿದ್ದ ಮನೆಗಳ ಸ್ವರೂಪದ ಬಗ್ಗೆ ಪುರಾತತ್ವಜ್ಞರು ಈಗಾಗಲೇ ವರದಿ ಮಾಡಿದ್ದಾರೆ. ಪ್ರಸ್ತುತ ತಾಲೂಕಿನಲ್ಲಿ ಗುಡಿಸಲು, ತೊಟ್ಟಿಮನೆ, ಮಾಳಿಗೆಮನೆ, ಮಹಡಿಮನೆ



ಮುಂತಾದ ಬಗೆಯ ಮನೆಗಳು ಕಂಡುಬರುತ್ತವೆ. ಅವರವರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗನುಸಾರವಾಗಿ, ವಿವಿಧ ವರ್ಗದ ಜನ ವಿವಿಧ ಗಾತ್ರದ ಹಾಗೂ ಸ್ವರೂಪದ ಮನೆಗಳಲ್ಲಿ ವಾಸಿಸುತ್ತಾರೆ. ಗುಡಿಸಲು-ಜೋಪಡಿಗಳಲ್ಲಿ ಕೆಳವರ್ಗದವರು, ಆರ್ಥಿಕವಾಗಿ ಅಶಕ್ತರಾಗಿರುವವರು ಹಿಂದೆ ವಾಸಿಸುತ್ತಿದ್ದರು. ಆದರಿಂದು ಸರ್ಕಾರದಿಂದ ದೊರೆತಿರುವ ಆಸರೆಯಿಂದಾಗಿ ಅವರೂ ಕೂಡ ಜನತಾಮನೆ, ಆಶ್ರಯ ಮನೆ ಎಂದು ಕರೆಯುವ, ಛಾವಣಿಗೆ ಮಂಗಳೂರು ಹೆಂಚು/ಝಿಂಕ್ ಷೀಟ್ ಹಾಕಿರುವ ಸಣ್ಣಪುಟ್ಟ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ನಾಡು ಹೆಂಚನ್ನು ಹೊದಿಸಿರುವ ತಗ್ಗಾದ ತೊಟ್ಟಿಮನೆ, ಎತ್ತರದ ಛಾವಣಿ ಇರುವ ತೊಟ್ಟಿ ಮನೆಗಳಿದ್ದು, ಕ್ರಮೇಣ ನಾಡುಹೆಂಚಿನ ಬದಲು ಮಂಗಳೂರು ಹೆಂಚು, ಝಿಂಕ್‌ಶೀಟ್‌ಗಳು ಅಧಿಕಗೊಳ್ಳುತ್ತಿವೆ. ಹಿಂದೆ ಮದ್ರಾಸ್ ತಾರಸಿಯ ಮಹಡಿ ಮನೆಗಳಿದ್ದು, ಇಂದು ಅವುಗಳ ಜೊತೆಗೆ ಸಿಮೆಂಟಿನ ತಾರಸಿಯನ್ನುಳ್ಳ ಮೂರ್‍ನಾಲ್ಕು ಅಂತಸ್ತಿನ ಮನೆಗಳು ಪಟ್ಟಣ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಂಡುಬಂದರೆ, ಗ್ರಾಮಗಳಲ್ಲೂ ತಾರಸಿ ಮನೆಗಳು ತಲೆ ಎತ್ತುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ ಆಯಾ ವೃತ್ತಿಯವರು ತಮ್ಮ ಅಗತ್ಯಗಳಿಗನುಗುಣವಾಗಿ ಮನೆಯನ್ನು ನಿರ್ಮಿಸಿಕೊಳ್ಳುತ್ತಿದ್ದು, ರೈತರು ದನದ ಕೊಟ್ಟಿಗೆ, ಕಣಜ, ಹಿತ್ತಿಲು ಮುಂತಾದವುಗಳನ್ನು ಮನೆಪರಿಸರದಲ್ಲೇ ಹೊಂದಿದ್ದು, ಒಳಗೆ ವಿಶಾಲಮನೆಯಾದಲ್ಲಿ ಒಂದೆರಡು ಕೊಠಡಿ, ಸ್ನಾನದ ಮನೆ ಅಡಿಗೆ ಮನೆ, ದೇವರ ಮನೆ, ತಿಜೋರಿಕೋಣೆ, ಕಾಳಿನಕೋಣೆ ಮುಂತಾದವುಗಳಿರುತ್ತವೆ. ಅದೇ ಬಡವರಾದಲ್ಲಿ ಸಣ್ಣ ಮನೆಯಲ್ಲಿ ವಾಸಿಸುತ್ತಿದ್ದು, ದನದ ಕೊಟ್ಟಿಗೆಗೆ ತೆಂಗಿನ ಗರಿಯನ್ನು ಬಿಗಿದ ಛಾವಣಿ ಇರುತ್ತದೆ. ಹಿಂದೆ ಸಗಣಿ ನೆಲ ಸಾಮಾನ್ಯವಾಗಿದ್ದು, ಕೆಲವು ಮನೆಗಳಿಗೆ ಕಡಪ, ಚಪಡಿಕಲ್ಲಿನ ನೆಲಹಾಸಿರುತ್ತಿತ್ತು. ಆದರೆ ಇಂದು ಅವುಗಳ ಸ್ಥಾನವನ್ನು ಗಾರೆಯು ಆಕ್ರಮಿಸಿ ಗಾರೆ ನೆಲ ಸಾಮಾನ್ಯವಾಗಿದೆ. ಮನೆಯ ನಡುವೆ ಇರುವ, ತೆರೆದ ಚೌಕಾ/ಆಯಾಕಾರದ ತೊಟ್ಟಿಯು ನಾಲ್ಕು, ಎಂಟು, ೧೨, ೧೬, ಕಂಬಗಳನ್ನು ಹೊಂದಿರುತ್ತಿತ್ತು. ಹೆಚ್ಚಿನ ಸಂದರ್ಭಗಳಲ್ಲಿ ಮನೆಯ ಗೋಡೆಗಳು ಮಣ್ಣು ಬಿದಿರುಗಳನ್ನು ಬಳಸಿ ಕಟ್ಟಿದವಾಗಿದ್ದು, ಇತ್ತೀಚೆಗೆ ಇಟ್ಟಿಗೆ, ಮಣ್ಣು ಸಿಮೆಂಟ್ ಬಳಸಿ ನಿರ್ಮಿಸಿದ ಗೋಡೆಗೆ ಸುಣ್ಣ-ಬಣ್ಣಗಳನ್ನು ಬಳಿಯವುದು ಸಾಮಾನ್ಯವಾಗಿದೆ. ಕಳೆದ ಶತಮಾನದ ಐದನೆಯ ದಶಕದಲ್ಲಿ, ವಿದ್ಯುತ್‌ದೀಪಗಳು ಪಟ್ಟಣ, ಗ್ರಾಮ ಹಾಗೂ ಮನೆಗಳನ್ನು ಪ್ರವೇಶಿಸಿದರೂ ಅದು ಸಾರ್ವತ್ರಿಕಗೊಂಡು ಹೆಚ್ಚು ಬಳಕೆಗೆ ಬಂದದ್ದು, ಕಳೆದ ಶತಮಾನದ ಕೊನೆಯ ಎರಡು ದಶಕಗಳಲ್ಲಿ. ಇಂದು ತಾಲೂಕು ಪೂರಾ ವಿದ್ಯುದೀಕರಣಗೊಂಡಿದ್ದು, ಸರ್ಕಾರದ ನೆರವಿನಿಂದಾಗಿ ಬಹುತೇಕ ಎಲ್ಲಾ ಗೃಹಗಳಿಗೂ ವಿದ್ಯುತ್ ದೀಪ ಲಭಿಸಿದ್ದು, ವಿದ್ಯುತ್‌ರಹಿತ ಮನೆಗಳು ವಿರಳವಾಗುತ್ತಿವೆ. ತಾಲೂಕಿನ ಪಟ್ಟಣ ಪ್ರದೇಶದಲ್ಲಿ ಹೊಸ ಬಡಾವಣೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಜನತಾ ಬಡಾವಣೆಗಳಲ್ಲಿ ನವೀನ ಮನೆಗಳು ಕಂಡುಬಂದರೆ, ಊರು-ಪಟ್ಟಣಗಳ ಮೂಲವಸತಿ ಪ್ರದೇಶಗಳಲ್ಲಿ ಹಳೆಯ ಮಾದರಿಯ ಮನೆ, ಸಾಮಾಜಿಕ ಪರಿಸರಗಳು ಇಂದಿಗೂ ಉಳಿದುಕೊಂಡು ಬಂದಿದ್ದು, ಬನ್ನೂರು, ತಲಕಾಡು, ಮೂಗೂರು, ಮಾದಾಪುರ ಮುಂತಾದ ಸ್ಥಳಗಳನ್ನು ಇಲ್ಲಿ ಉದಾಹರಿಸಬಹುದಾಗಿದೆ. ನರಸೀಪುರ ಹಾಗೂ ಬನ್ನೂರು ಪಟ್ಟಣಗಳೂ ಸೇರಿದಂತೆ

ತಲಕಾಡು, ಸೋಮನಾಥಪುರ, ತಡಿಮಾಲಂಗಿ ಮುಂತಾದೆಡೆಗಳಲ್ಲಿ ಸಾಂಪ್ರದಾಯಿಕ ಮನೆಗಳ ಜೊತೆಗೆ ಆಧುನಿಕ ಕಟ್ಟಡಗಳೂ ತಲೆ ಎತ್ತಿ ನಿಂತಿವೆ. ತಾಲೂಕು ಕೇಂದ್ರ ನರಸೀಪುರವಾದರೂ ಹೆಚ್ಚು ಮನೆಗಳಿರುವುದು ಬನ್ನೂರಿನಲ್ಲೇ.

**ಗೃಹೋಪಯೋಗಿ ವಸ್ತುಗಳು** : ಬಡವರ್ಗಕ್ಕೆ ಸೇರಿದ ಜನರ ಮನೆಗಳಲ್ಲಿ ಹಿಂದೆ ಮಣ್ಣಿನ ಮಡಕೆ, ಅಲ್ಯುಮೀನಿಯಂ ತಟ್ಟೆ, ಪಾತ್ರೆ ಹಾಗೂ ಹಿತ್ತಾಳೆಯ ಹಂಡೆ ಮುಂತಾದವುಗಳಿದ್ದು, ಕುರ್ಚಿ, ಬೆಂಚು, ಟೇಬಲ್‌ಗಳು ವಿರಳವಾಗಿರುತ್ತಿದ್ದವು. ಆದರೆ ಇಂದು ಸ್ಟೀಲ್ ಪಾತ್ರೆ, ಕಬ್ಬಿಣದ ಕುರ್ಚಿ, ಮಂಚ, ಬೆಂಚು ಮುಂತಾದವು ಪ್ರತಿಯೊಬ್ಬರ ಮನೆಯಲ್ಲಿವೆ. ಮಧ್ಯಮ ಹಾಗೂ ಮೇಲ್ವರ್ಗದ ಜನರ ಮನೆಗಳಲ್ಲಿ ಹಿತ್ತಾಳೆ, ತಾಮ್ರ, ಅಲ್ಯೂಮೀನಿಯಂ ಪಾತ್ರೆ ಪಡಗಗಳನ್ನು ಉಪಯೋಗಿಸುತ್ತಿದ್ದು, ಪ್ಲಾಸ್ಟಿಕ್ ಕುರ್ಚಿ, ಟೀಪಾಯಿ, ಬಕೇಟು, ಮಗ್ಗು, ಬೇಸನ್, ಮುಂತಾದವನ್ನು ಎಲ್ಲರೂ ಬಳಸುತ್ತಾರೆ. ಆದರೂ ಹಳ್ಳಿಗಳಲ್ಲಿ ಶ್ರಾವಣ ಮಾಸದಲ್ಲಿ ಹಾಗೂ ಯುಗಾದಿ ಹಬ್ಬದಲ್ಲಿ ಹೊಸ ಮಡಕೆಗಳಲ್ಲೇ ಅಡಿಗೆ ಮಾಡಿ ಉಣ್ಣುವುದು ಸಂಪ್ರದಾಯವಾಗಿದೆ. ಎಲ್.ಪಿ.ಜಿ. ಗ್ಯಾಸ್–ಸ್ಟೌಗಳು ಹಳ್ಳಿಗಳನ್ನು ಪ್ರವೇಶಿಸಿದ್ದರೂ, ಸೌದೆಒಲೆ, ಒತ್ತೊಲೆಗಳು, ಇನ್ನೂ ಅಡಿಗೆ ಮನೆಯಲ್ಲಿ ಪ್ರಾಮುಖ್ಯತೆ ಉಳಿಸಿಕೊಂಡಿವೆ. ಚಾಪೆ, ಜಮಖಾನ, ಹಾಸಿಗೆ, ತಲೆದಿಂಬು, ಹೊದಿಕೆ ಕಂಬಳಿ, ರಗ್ಗುಗಳನ್ನು ಎಲ್ಲರೂ ಉಪಯೋಗಿಸುತ್ತಿದ್ದು, ಉಳ್ಳವರು ಮಂಚವನ್ನು ಬಳಸುತ್ತಾರೆ. ಹಳ್ಳಿ–ಪಟ್ಟಣಗಳ ಗೃಹೋಪಯೋಗಿ ವಸ್ತುಗಳಲ್ಲಿ ಗಣನೀಯ ಸುಧಾರಣೆ–ಬಸಲಾವಣೆಗಳಾಗಿರುವುದು ಉಲ್ಲೇಖಾರ್ಹವಾಗಿದೆ.

**ಆಹಾರ ಮತ್ತು ಪಾನೀಯ** : ತಾಲೂಕಿನ ಬಹುಪಾಲು ಜನ ರಾಗಿ–ಜೋಳಗಳನ್ನು ಪ್ರಧಾನವಾಗಿ ಅವಲಂಬಿಸಿದ್ದರೂ ನೀರಾವರಿಯಿಂದಾಗಿ ಅಕ್ಕಿಯನ್ನೂ ಸಮಾನವಾಗಿ ಸೇವಿಸುತ್ತಾರೆ. ಹಿಂದೆ ಸಜ್ಜೆ, ಬರಗ, ಕಂಬು, ನವಣೆ ಮುಂತಾದವನ್ನು ಬಳಸುತ್ತಿದ್ದುದಕ್ಕೆ ಶಾಸನಾಧಾರಗಳಿವೆ. ದ್ವಿದಳ ಧಾನ್ಯಗಳಾದ ಅವರೆ, ಹೆಸರು, ತೊಗರಿ, ಉದ್ದು, ಹುರುಳಿ, ಅಲಸಂದೆ, ಮುಂತಾದವನ್ನು ಸಾಮಾನ್ಯವಾಗಿ ಬಳಸಲಾಗುತ್ತದೆ. ರಾಗಿ ಅಥವಾ ಜೋಳದ ಮುದ್ದೆ, ಉಪ್ಪೆಸರು, ಉಪ್ಪೆಸರಿನ ಖಾರ, ಕಾಳು ತರಕಾರಿಗಳನ್ನು ಹಾಕಿ ಮಾಡಿದ ಸಾಂಬಾರು, ಉಪ್ಪಿನಕಾಯಿ, ಮೊಸರು–ಮಜ್ಜಿಗೆಯನ್ನು ದೈನಂದಿನ ಆಹಾರವಾಗಿ ಸೇವಿಸುತ್ತಾರೆ. ಹಬ್ಬ–ಹರಿದಿನ, ವಿವಾಹ ಸಂದರ್ಭಗಳಲ್ಲಿ ಆರ್ಥಿಕ ಸ್ಥಿತಿಗತಿಗನುಗುಣವಾಗಿ ವಿಶೇಷ ಭಕ್ಷ್ಯಗಳನ್ನು ಮಾಡಿ ಸೇವಿಸುತ್ತಾರೆ. ತಾಲೂಕಿನಾದ್ಯಂತ ಬೆಳಿಗ್ಗೆ ಚಹಾ–ಉಪಾಹಾರ, ಮಧ್ಯಾಹ್ನ ಊಟ, ಸಾಯಂಕಾಲ ಚಹಾ/ಕಾಫಿ, ಹಾಗೂ ರಾತ್ರಿ ಊಟ ಮಾಡುವುದು ಸರ್ವೇಸಾಮಾನ್ಯವಾಗಿದ್ದರೂ, ಸಾಂಪ್ರದಾಯಿಕ ರೀತಿಯ ಆಹಾರ ಸೇವನೆಯೂ ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಉಳಿದಿದೆ. ಹಳ್ಳಿಗಳಲ್ಲಿ ಬೆಳಿಗ್ಗೆ–ಸಂಜೆ ಕಾರ್ಯನಿರ್ವಹಿಸುವ ಚಹಾದಂಗಡಿ, ಗುಡ್ಲು ಹೋಟೆಲುಗಳು, ಬೆಳಗಿನ ನಾಷ್ಟಾ, ಚಹಾ–ಕಾಫಿಯನ್ನು ಬಂದ ಗಿರಾಕಿಗಳಿಗೆ ಪೂರೈಸಿದರೆ, ಪಟ್ಟಣದ ಹೋಟೇಲುಗಳು ಮುಂಜಾನೆಯಿಂದ ರಾತ್ರಿಯವರೆಗೆ ತೆರೆದಿದ್ದು, ವೈವಿಧ್ಯಮಯ ತಿಂಡಿ–ತಿನಿಸುಗಳ ಮೂಲಕ ಗ್ರಾಹಕರನ್ನು ಸೆಳೆಯುತ್ತವೆ. ಬನ್ನೂರು, ನರಸೀಪುರ, ತಲಕಾಡು,



ಸೋಮನಾಥಪುರ, ಮಾದಾಪುರ, ಮುಂತಾದೆಡೆಗಳಲ್ಲಿರುವ ಹೋಟೇಲುಗಳು ಸ್ಥಳೀಯರಿಗೆ ಪ್ರಯಾಣಿಕರಿಗೆ ಹಾಗೂ ಪ್ರವಾಸಿಗರಿಗೆ ಆಹಾರ ಪಾನೀಯಗಳನ್ನು ಒದಗಿಸುತ್ತವೆ. ಹಿಂದೆ ಕೆರೆಬಾವಿಗಳು ಕುಡಿಯುವ ನೀರನ್ನು ಪೂರೈಸುತ್ತಿದ್ದವು. ಆದರೆ ಇಂದು ಬೋರ್‌ವೆಲ್‌ಗಳ ಕೊರೆಯುವಿಕೆ, ಕೈಪಂಪು, ನಳ(ನಲ್ಲಿ), ಟ್ಯಾಂಕ್ ನಳಗಳ ಮೂಲಕ ನೀರು ಸರಬರಾಜು ವ್ಯವಸ್ಥೆ ತಾಲೂಕಿನ ಎಲ್ಲಾ ಗ್ರಾಮ ಉಪಗ್ರಾಮಗಳಲ್ಲೂ ಇರುವುದರಿಂದ ಕುಡಿಯುವ ನೀರಿನ ಸಮಸ್ಯೆ ಬಗೆಹರಿದಂತಾಗಿದೆ. ಚಹಾ–ಕಾಫಿ ಮುಂತಾದವುಗಳೊಂದಿಗೆ ಫಾಂಟಾ, ಕೋಕಾಕೋಲ, ಮುಂತಾದ ತಂಪು ಪಾನೀಯಗಳು ಗ್ರಾಮೀಣ ಪ್ರದೇಶಗಳಿಗೂ ಲಗ್ಗೆ ಹಾಕಿವೆ. ಮಾಂಸಹಾರಿಗಳು ಅವರವರ ಆರ್ಥಿಕ ಸಾಮರ್ಥ್ಯಕ್ಕನುಗುಣವಾಗಿ ಕೋಳಿ, ಕುರಿ, ಮುಂತಾದ ಪ್ರಾಣಿಗಳ ಮಾಂಸವನ್ನು ನಿರ್ದಿಷ್ಟ ದಿನದಂದು ಸೇವಿಸುತ್ತಾರೆ. ಹಿಂದೂಗಳಲ್ಲಿ ಸೋಮವಾರ–ಶನಿವಾರಗಳಲ್ಲಿ, ಶ್ರಾವಣ–ಕಾರ್ತಿಕ ಮಾಸಗಳಲ್ಲಿ ಮಾಂಸಾಹಾರ ಸೇವನೆಗೆ ನಿಷೇಧವಿದೆ. ಧೂಮಪಾನ (ಬೀಡಿ–ಸಿಗರೇಟು), ಪಾನ್‌ಬೀಡಾ ಮುಂತಾದವು ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗುತ್ತಿದ್ದು, ಮಹಿಳೆಯರು ಎಲೆ ಅಡಿಕೆ ಹಾಕಿಕೊಳ್ಳುವುದು ರೂಢಿಯಲ್ಲಿದೆ. ಆದರೆ ಇತ್ತೀಚೆಗೆ ಕೇಂದ್ರ ಸರ್ಕಾರವು ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನವನ್ನು ಕಾನೂನು ಬದ್ಧವಾಗಿ ನಿಷೇಧಿಸಿದೆ. ನಶ್ಯ ಏರಿಸುವುದು, ಭಂಗಿ ಸೇದುವುದು ವಿರಳವಾಗಿ ಕಂಡು ಬರುತ್ತದೆ. ಹೆಂಡ ಸಾರಾಯಿ ಸೇವನೆ ಹಳ್ಳಿಗಳಲ್ಲಿ ಅಧಿಕಗೊಂಡಿದ್ದು, ಸಾರಾಯಿ ಅಂಗಡಿಗಳು ಬಹುಪಾಲು ಗ್ರಾಮಗಳಲ್ಲಿದ್ದು, ಪಟ್ಟಣಪ್ರದೇಶದಲ್ಲಿ ಮಾಂಸಾಹಾರಿ ಹೋಟೆಲು. ಬಾರು, ಮದ್ಯದಂಗಡಿಗಳು ಐಷಾರಾಮಿನ ಬದುಕಿನ ಭಾಗವಾಗಿವೆ.

**ಉಡುಪು** : ತಾಲೂಕಿನ ಜನರ ಸಾಂಪ್ರದಾಯಿಕ ಉಡುಗೆಯ ಭಾಗವಾದ ಪುರುಷರ ಪಂಚೆ, ಧೋತ್ರ, ಪಟಾಪಟಿ ಚಡ್ಡಿ, ಒಳಅಂಗಿ, ಅಂಗಿ, ಜುಬ್ಬ, ಟವೇಲು ಮುಂತಾದವು; ಮಹಿಳೆಯರ ಸೀರೆ, ರವಿಕೆ, ಕುಪ್ಪಸ, ಲಂಗ, ಜಂಪರ್, ದಾವಣಿ ಮುಂತಾದವುಗಳ ಮೇಲೆ ಆಧುನೀಕತೆಯ ಪ್ರಭಾವ ಸಾಕಷ್ಟಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಹೊಲದಲ್ಲಿ ದುಡಿಯುವಾಗ, ಚಡ್ಡಿ, ಬನಿಯನ್ ಧರಿಸುವ ರೈತರು ಬಿಡುವಿನ ವೇಳೆಯಲ್ಲಿ ಪಂಚೆ ಶರ್ಟು ತೊಟ್ಟರೂ ಲುಂಗಿಯ ಬಳಕೆ ಹೆಚ್ಚಾಗುತ್ತಿದೆ. ಹೆಗಲ ಮೇಲೆ ಟವಲು ಹಾಕಿಕೊಂಡು, ಕಾಲಿಗೆ ಚಪ್ಪಲಿ ಮೆಟ್ಟಿಕೊಂಡು ಹೊರಗೆ ಹೋಗುತ್ತಾರೆ. ಆದರೆ ಇಂದಿನ ಯುವಕರು ಪ್ಯಾಂಟ್, ನಿಕ್ಕರ್, ಟಿ–ಶರ್ಟು, ಬರ್ಮುಡ ಚಡ್ಡಿ, ಲುಂಗಿ ಮುಂತಾದವನ್ನು ಧರಿಸುವುದರೊಂದಿಗೆ ಸಾಂಪ್ರದಾಯಕ ಉಡುಗೆ ಹಿಂದೆ ಸರಿಯುತ್ತಿದೆ. ಇದೇ ರೀತಿ ಮಹಿಳೆಯರ ಸೀರೆಗಳೂ ಕೂಡ ಹದಿನೆಂಟು ಮೊಳಗಳಿಂದ ಹನ್ನೆರಡು ಮೊಳ (ಎಂಟರಿಂದ ಐದೂವರೆ ಮಿಟರ್)ಕ್ಕೆ ಇಳಿದಿದ್ದು, ಒಳಲಂಗ–ರವಿಕೆಗಳ ಜೊತೆಗೆ ಮೊಲೆಕಟ್ಟಿನ ಬಳಕೆಯೂ ಹಳ್ಳಿಗಳಲ್ಲಿ ಸಾಮಾನ್ಯವಾಗಿ ಬಿಟ್ಟಿದೆ. ಹೆಣ್ಣುಮಕ್ಕಳು ವಯೋಮಿತಿಗನುಗುಣವಾಗಿ ಲಂಗ–ಜಂಪರ್, ಧರಿಸುತ್ತಾರಾದರೂ, ಫ್ರಾಕ್, ಸ್ಕರ್ಟ್, ಚೂಡಿದಾರ–ವೇಲ್, ಲಾಚಾ, ಮಿಡಿ, ಪ್ಯಾಂಟ್–ಶರ್ಟು, ಜೀನ್ಸ್, ಟಿ–ಶರ್ಟ್ ಮುಂತಾದ ವೈವಿಧ್ಯಮಯ ಉಡುಗೆಗಳು ಪಟ್ಟಣಗಳಲ್ಲಿ ಸಾಮಾನ್ಯವಾಗಿಬಿಟ್ಟಿದ್ದು,

ಹಳ್ಳಿಗಳಲ್ಲೂ ರೂಢಿಗೆ ಬಂದಿವೆ. ಯುವತಿಯರ ಸಾಂಪ್ರದಾಯಿಕ ಉಡುಗೆಯಾಗಿದ್ದ ಲಂಗ–ದಾವಣಿ ವಿರಳವಾಗಿ ಬಿಟ್ಟಿದೆ. ಮನೆಯಲ್ಲಿರುವಾಗ ವಯೋಮಾನಕ್ಕನುಗುಣವಾಗಿ ಹೆಣ್ಣುಮಕ್ಕಳು ನೈಟಿ, ಸೀರೆ ಧರಿಸಿದರೆ, ಪುರುಷರು ಲುಂಗಿ, ನಿಕ್ಕರ್, ಬರ್ಮುಡ, ಚಡ್ಡಿ ಹಾಗೂ ಶರ್ಟ್‌ನ್ನು ಧರಿಸುವುದು ಸಾಮಾನ್ಯವಾಗಿದೆ. ತಮ್ಮ ಆರ್ಥಿಕ ಸಾಮರ್ಥ್ಯಕ್ಕೆ ತಕ್ಕಂತೆ ಹೊಸಬಟ್ಟೆಯನ್ನು ಖರೀದಿಸಿ ಹೊಲಿಸಿ, ಅದನ್ನು ಗೌರಿ–ಗಣೇಶ, ಯುಗಾದಿ, ದೀಪಾವಳಿ ಮುಂತಾದ ಹಬ್ಬ ಹರಿದಿನಗಳಂದು ಹಿಂದೂಗಳು ಧರಿಸಿ ಸಂಭ್ರಮಿಸುತ್ತಾರೆ. ಮುಸ್ಲಿಂ ಪುರುಷರ ಉಡುಗೆ ಕುರ್ತಾ, ಪೈಜಾಮ, ಲುಂಗಿ, ಹಾಗೂ ಶರ್ಟುಗಳಾದರೆ ಮಹಿಳೆಯರು ಸೀರೆ–ರವಿಕೆ, ಚೂಡಿದಾರ್ ಹಾಗೂ ಬುರ್ಖಾ ಧರಿಸುತ್ತಾರೆ. ಆದರೆ ಇಂದು ಅವರಲ್ಲೂ ಸಾಕಷ್ಟು ಬದಲಾವಣೆಗಳಾಗಿದೆಯಾದರೂ ಸಂಪ್ರದಾಯಸ್ಥರು ಇನ್ನೂ ಇದ್ದಾರೆ. ಮುಸ್ಲಿಮರಾದಲ್ಲಿ ರಮ್ಜಾನ್, ಬಕ್ರೀದ್, ಹಬ್ಬಗಳಲ್ಲೂ, ಕ್ರಿಶ್ಚಿಯನ್ನರಾದಲ್ಲಿ ಹೊಸವರ್ಷದಿನ, ಕ್ರಿಸ್‌ಮಸ್, ಈಸ್ಟರ್ ಹಬ್ಬಗಳಲ್ಲೂ ಹೊಸಬಟ್ಟೆ ಧರಿಸಿ ಉಲ್ಲಾಸದಿಂದ ಹಬ್ಬ ಆಚರಿಸುತ್ತಾರೆ.

**ಆಭರಣಗಳು :** ಇತರ ಮಹಿಳೆಯರಂತೆ ತಾಲೂಕಿನ ಮಹಿಳೆಯರೂ ಮೂಲತಃ ಆಭರಣಪ್ರಿಯರೇ. ಹಬ್ಬ, ಹರಿದಿನ, ವಿವಾಹ ಮುಂತಾದ ವಿಶೇಷ ಸಂದರ್ಭಗಳಲ್ಲಿ ತಮ್ಮಲ್ಲಿರುವ ವೈವಿಧ್ಯಮಯ ಆಭರಣಗಳನ್ನು ಧರಿಸಿ ಸಂಭ್ರಮಿಸಿದರೆ, ದಿನನಿತ್ಯ ಓಲೆ, ಮಾಟಿ, ಮೂಗುಬೊಟ್ಟು, ತಾಳಿ, ಕರಿಮಣಿಸರಗಳನ್ನು ವರ್ಗಬೇಧವಿಲ್ಲದೆ ಸಾಮಾನ್ಯವಾಗಿ ಧರಿಸುತ್ತಾರೆ. ಉಳಿದಂತೆ ಕೈಗೆ ಗಾಜಿನಬಳೆ, ಉಂಗುರ, ಕಾಲಿಗೆ ಬೆಳ್ಳಿಯುಂಗುರ ಹಾಗೂ ಬೆಳ್ಳಿಯ ಕಾಲ್ಮುರಿಯನ್ನು ತೊಡುತ್ತಾರೆ. ಸಾಂಪ್ರದಾಯಿಕ ಆಭರಣಗಳಾದ ಕಡಗ, ಜಡೆಬಿಲ್ಲೆ, ನಾಗರ, ಮುರವು, ಚೌಲಿಗೊಣಸು, ಕೊಳವೆ, ಪಾಟ್ಲಿ, ಅಡ್ಡಿಗೆ, ಸರ, ಪದಕ, ಬಳೆ, ತೋಳ್ಬಂದಿ ಮುಂತಾದವು ವಿರಳಗೊಂಡು ನವೀನ ಮಾದರಿಯ ಆಭರಣಗಳತ್ತ ಮಹಿಳೆಯರು ಆಕರ್ಷಿತರಾಗಿದ್ದಾರೆ. ಹಿಂದೆ ಪುರುಷರು ಕಿವಿಗೆ ಹತ್ತೊಡಕು, ಕಲವಾರ ಹಾಗೂ ಪಟ್ಲಾರುಗಳನ್ನೂ, ಕೊರಳಿಗೆ ತಾಯತವನ್ನೂ ಕೈಗೆ ಕಡಗವನ್ನೂ ಧರಿಸುತ್ತಿದ್ದರು. ಆದರೆ ಇಂದು ಕಿವಿಗೆ ಹತ್ತೊಡಕು ತೊಟ್ಟವರು ವಿರಳವಾಗುತ್ತಿದ್ದು, ಕೊರಳಿಗೆ ಸರ, ಕೈಗೆ ಉಂಗುರ, ಮಣಿಕಟ್ಟಿನ ಸರ ಮುಂತಾದವು ಬಳಕೆಗೆ ಬಂದಿವೆ. ವಯಸ್ಸಾದ ಮಹಿಳೆಯರು ತಲೆಗೂದಲಿಗೆ ಗಂಟು ಬಿಗಿದರೆ, ಮಧ್ಯಮ ವಯಸ್ಸಿನವರೂ ಸೇರಿದಂತೆ ಇತರರು ತಲೆಬಾಚಿಕೊಂಡು ವಿವಿಧ ಬಗೆಯಲ್ಲಿ ಜಡೆಯನ್ನು ಹೆಣೆದುಕೊಳ್ಳುತ್ತಾರೆ. ಬಾಲಕಿಯರಿಗೆ ಬಾಬ್‌ಕಟ್ ಸೇರಿದಂತೆ, ವೈವಿಧ್ಯಮಯವಾಗಿ ತಲೆಗೂದಲನ್ನು ವಿನ್ಯಾಸ ಮಾಡಿಸುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಹರಳೆಣ್ಣೆ, ಕೊಬ್ಬರಿ ಎಣ್ಣೆಗಳನ್ನು ಬಳಸಿದರೆ, ಪಟ್ಟಣ ಪ್ರದೇಶದಲ್ಲಿ ಮಹಿಳೆಯರು ಕೊಬ್ಬರಿಎಣ್ಣೆಯನ್ನೇ ವಿಶೇಷವಾಗಿ ಬಳಸುತ್ತಾರೆ. ಹಲ್ಲುಜ್ಜಲು ಬ್ರೆಷ್–ಪೇಸ್ಟ್, ಸ್ನಾನಕ್ಕೆ ಸೋಪು, ಸೀಗೇಕಾಯಿ, ಷಾಂಪು, ಮೇಕಪ್ ಮಾಡಿಕೊಳ್ಳಲು ಸ್ನೋಪೌಡರ್, ಸುಗಂಧದ್ರವ್ಯ ಮುಂತಾದವನ್ನು ಬಳಸುವುದು ಸಾಮಾನ್ಯವಾಗಿದೆ. ಚಪ್ಪಲಿ, ಚಡಾವುಗಳ ಬಳಕೆ ತಾಲೂಕಿನಾದ್ಯಂತ ಸಾಮಾನ್ಯವಾಗಿ ರೂಢಿಯಲ್ಲಿದ್ದು, ಹಚ್ಚೆ ಹಾಕಿಸಿಕೊಳ್ಳುವ ಸಂಪ್ರದಾಯ ವಿರಳವಾಗುತ್ತಿದೆ.



**ಹಬ್ಬಗಳು :** ನಾಡಿನ ಇತರೆಡೆಗಳಂತೆ ಅವರವರ ಧರ್ಮಕ್ಕನುಗುಣವಾಗಿ ತಾಲೂಕಿನ ಜನರೂ ವರ್ಷದುದ್ದಕ್ಕೂ ಉಪವಾಸ, ವ್ರತ, ಹಾಗೂ ಹಬ್ಬಗಳನ್ನು ವಿವಿಧ ಸಂದರ್ಭಗಳಲ್ಲಿ ಆಚರಿಸುತ್ತಾರೆ. ಗ್ರಾಮದೇವತಾ ಹಬ್ಬ–ಜಾತ್ರೆಗಳು ಗ್ರಾಮೀಣ ಪ್ರದೇಶದಲ್ಲಿ ಜರುಗುತ್ತವೆ. ಹಿಂದೂಗಳಿಗೆ ಚಾಂದ್ರಮಾನ ವರ್ಷದ ಮೊದಲ ತಿಂಗಳ ಮೊದಲ ದಿನ ಆಚರಿಸಲಾಗುವ ಯುಗಾದಿ ಸಡಗರದ ಹಬ್ಬವಾಗಿದ್ದು, ಎಣ್ಣೆ ಸ್ನಾನ ಮಾಡಿ ಹೊಸ ಬಟ್ಟೆ ಧರಿಸಿ, ಬೇವು–ಬೆಲ್ಲ ತಿಂದು ಇದನ್ನು ಅಚರಿಸಲಾಗುತ್ತದೆ. ಆ ದಿನ ಸಿಹಿಯೂಟದ ರಸದೌತಣವಿರುತ್ತದೆ. ಚೈತ್ರಮಾಸದ ನವಮಿಯಂದು ಬರುವ ರಾಮನವಮಿ ವೈಷ್ಣವರಿಗೆ ಸಡಗರದ ಹಬ್ಬವಾಗಿದ್ದು, ಅಂದು ಪಾನಕ–ಕೋಸಂಬರಿಯನ್ನು ಸಾರ್ವಜನಿಕವಾಗಿ ಹಂಚುವ ಸಂಪ್ರದಾಯವಿದೆ. ಬನ್ನೂರಿನ ರಾಮ(ಕೋದಂಡರಾಮ)ದೇವರಗುಡಿಯಲ್ಲಿ ಇದನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ವೈಶಾಖ ಮಾಸದ ಅಕ್ಷಯ ತೃತೀಯದಂದು ಬರುವ ಬಸವಜಯಂತಿಯನ್ನು ವೀರಶೈವರು ಮನೆಯಲ್ಲಿ ಆಚರಿಸುವುದರ ಜೊತೆಗೆ ಬಸವೋತ್ಸವವನ್ನು ತಾಲೂಕು ಕೇಂದ್ರ ನರಸೀಪುರದಲ್ಲಿ ಏರ್ಪಡಿಸುವ ಮೂಲಕ ಸಾರ್ವಜನಿಕವಾಗಿಯೂ ಆಚರಿಸುತ್ತಾರೆ. ನಂತರ ಬರುವ ಆಷಾಢ ಮಾಸದಲ್ಲಿ ಹಿಂದೂಗಳು, ವಿವಾಹವೂ ಸೇರಿದಂತೆ ಯಾವುದೇ ಶುಭಕಾರ್ಯಗಳನ್ನು ಮಾಡುವುದಿಲ್ಲ. ಆದರೆ ಆಷಾಡಮಾಸದ ಪ್ರಥಮ ಏಕಾದಶಿಯು ಬಣಜಿಗ ಮುಂತಾದ ಕೆಲವು ಜಾತಿಯವರಿಗೆ ವಿಶೇಷ ಹಬ್ಬವಾಗಿದೆ. ಅಲ್ಲದೇ ಆಗ ಬರುವ ವರಮಹಾಲಕ್ಷ್ಮಿ, ಮಂಗಳಗೌರಿಪೂಜೆಗಳನ್ನು ಕೆಲವು ವರ್ಗದ ಮಹಿಳೆಯರು ಸಡಗರದಿಂದ ಆಚರಿಸುತ್ತಾರೆ. ಶ್ರಾವಣ ಶನಿವಾರವನ್ನು ವೆಂಕಟರಮಣನ ಒಕ್ಕಲಿನವರು ವಿಶೇಷ ದಿನವಾಗಿ ಆಚರಿಸುತ್ತಾರೆ. ನಾಗಪಂಚಮಿ, ಗೋಕುಲಾಷ್ಟಮಿ, ಅಷ್ಟೇ ಪ್ರಮುಖವಾಗಿವೆ. ಭಾದ್ರಪದ ಮಾಸದ ತೃತೀಯ ದಿನದಂದು ಬರುವ ಗೌರಿ ಮಹಿಳೆಯರಿಗೆ ಸಂಭ್ರಮದ ಹಬ್ಬವಾದರೆ, ಚೌತಿಯಂದು ಬರುವ ಗಣಪ ಪುರುಷರಿಗೆ ಸಂಭ್ರಮ ತರುತ್ತಾನೆ. ಹಿಂದಿನ ದಿನವೇ ಗೌರಿ–ಗಣೇಶರ ಮಣ್ಣಿನಮೂರ್ತಿಯನ್ನು ಮಾರುಕಟ್ಟೆಯಿಂದ ಸಾಂಪ್ರದಾಯಕವಾಗಿ ಶುಭಮುಹೂರ್ತದಲ್ಲಿ ತಂದು, ಮನೆಯಲ್ಲಿಟ್ಟು ಪೂಜಿಸುತ್ತಾರೆ. ಗೌರಿ ಹಬ್ಬದಂದು ಮಹಿಳೆಯರು ಗೌರಿ ಕೂರಿಸಿ ಪೂಜಿಸಿ ಬಾಗಿನ ನೀಡಿ ಕುಟುಂಬದವರೊಂದಿಗೆ ಸಿಹಿಯೂಟ ಮಾಡಿದರೆ, ಗಣೇಶನ ಹಬ್ಬದಂದು ಗಣೇಶನನ್ನು ಪೂಜಿಸಿ ಕಾಯಿ ಕಡುಬು ತಿಂದು ಆ ದಿನ ರಾತ್ರಿ ಇಲ್ಲವೇ ಮೂರು–ಐದು–ಏಳು–ಒಂಭತ್ತನೆಯ ದಿನದಂದು ಮೂರ್ತಿಯನ್ನು ವಿಸರ್ಜಿಸಲಾಗುತ್ತದೆ. ಗಣೇಶನನ್ನು ಸಾರ್ವಜನಿಕವಾಗಿ ಪೂಜಿಸುವ ಸಂಪ್ರದಾಯವೂ ಇದೆ. ಅದರಂತೆ ನರಸೀಪುರ, ಬನ್ನೂರು, ತಲಕಾಡು, ಮೂಗೂರು, ಸೋಸಲೆ ಮುಂತಾದೆಡೆಗಳಲ್ಲಿ ಗಣಪತಿಯನ್ನು ಸಾರ್ವತ್ರಿಕವಾಗಿ ಪೂಜಿಸಿ, ಮನರಂಜನಾ ಕಾರ್ಯಕ್ರಮಗಳನ್ನು ಏರ್ಪಡಿಸುವ ಪದ್ಧತಿಯಿದೆ. ಬೇಡ ಹಾಗೂ ಪರಿವಾರ ಜಾತಿಯಲ್ಲಿ ಗೌರಿಗೆ ವಿಶೇಷ ಸ್ಥಾನವಿದ್ದು, ಇತರ ಸಂದರ್ಭಗಳಲ್ಲೂ ಅವರು ಈ ದೇವಿಯನ್ನು ಪೂಜಿಸುತ್ತಾರೆ. ಮಣ್ಣೆತ್ತಿನ ಅಮಾವಾಸ್ಯೆಯಂದು ರೈತರು ಬಸವನ ಹಬ್ಬ ಮಾಡಿದರೆ ನಾಗಪಂಚಮಿಯಂದು ಹುತ್ತಕ್ಕೆ ಇಲ್ಲವೇ ಮಣ್ಣಿನ–ಶಿಲೆಯ, ಲೋಹದ, ಬೆಳ್ಳಿಯ ನಾಗರಕ್ಕೆ ಹಾಲೆರೆದು ಪೂಜಿಸಲಾಗುತ್ತದೆ. ಆಶ್ವಯುಜ

ಮಾಸದಲ್ಲಿ ಬರುವ ದಸರಾ ಇಡೀ ನಾಡಿಗೆ ಹತ್ತು ದಿನಗಳ ಸಂಭ್ರಮದ ಹಬ್ಬವಾಗಿದ್ದು, ಆಗ ತ್ರಿಶಕ್ತಿದೇವತೆಯರನ್ನು ತಲಾ ಮೂರ್ಮೂರು ದಿನ ಆರಾಧಿಸಲಾಗುತ್ತಿದ್ದು, ಏಳನೆಯ ದಿನ ಸರಸ್ವತಿ ಪೂಜೆ ಎಂಟನೆಯ ದಿನ ಆಯುಧಪೂಜೆ, ನವಮಿಯಂದು ದುರ್ಗಿಪೂಜೆ ಆಚರಿಸಿ ದಶಮಿಯಂದು ಬನ್ನಿ (ಶಮಿ) ಮರವನ್ನು ಪೂಜಿಸಿ ಜಂಬುಸವಾರಿಯನ್ನು ನೋಡಲು ಮೈಸೂರಿನತ್ತ ಧಾವಿಸುವುದು ಬಹು ಹಿಂದಿನಿಂದಲೂ ಈ ತಾಲೂಕಿನ ಜನರಲ್ಲಿ ಬಂದಿರುವ ಸಂಪ್ರದಾಯವಾಗಿದೆ. ದಸರೆ ಸಂದರ್ಭದಲ್ಲಿ ಮನೆಯಲ್ಲಿ ಗೊಂಬೆ ಇಟ್ಟು ಪೂಜಿಸುವ ರೂಢಿಯು ಇತರೆಡೆಗಳಂತೆ ತಾಲೂಕಿನಲ್ಲೂ ವಿರಳವಾಗುತ್ತಿದೆ. ಆದರೆ ಇಂದು ಆಧುನಿಕ ಮನೆಗಳಲ್ಲಿ ಷೋಕೇಸ್‌ನಲ್ಲಿ ಗೊಂಬೆಗಳನ್ನು ಖಾಯಂ ಆಗಿ ಇಡುವ ಸಂಪ್ರದಾಯ ಸಾಮಾನ್ಯವಾಗುತ್ತಿದೆ. ಆಶ್ವಯುಜ ಮಾಸದ ಮಹಾಲಯ ಅಮಾವಾಸ್ಯೆಯನ್ನು, ಪಿತೃಪಕ್ಷವಾಗಿ ಪೂರ್ವಿಕರಿಗೆ ಎಡೆ ಇಡುವುದರ ಮೂಲಕ ಆಚರಿಸಲಾಗುತ್ತದೆ. ಕಾರ್ತಿಕ ಮಾಸದ ಮೂರು ದಿನಗಳ ದೀಪಾವಳಿಯ ಸಂದರ್ಭದಲ್ಲಿ ನರಸೀಪುರ, ತಲಕಾಡು, ಬನ್ನೂರು ಮುಂತಾದೆಡೆ ಇರುವ ಕೋಮಟಿ ವರ್ತಕರು ವಿಶೇಷವಾಗಿ ಲಕ್ಷ್ಮಿಪೂಜೆಯನ್ನು ಮಾಡುತ್ತಾರೆ. ಸಂಕ್ರಾಂತಿ (ಮಕರ ಸಂಕ್ರಮಣ) ನಾಡಿನ ರೈತರ ಇನ್ನೊಂದು ಪ್ರಮುಖ ಹಬ್ಬವಾಗಿದ್ದು, ಆ ಸಂದರ್ಭದಲ್ಲಿ ಎಣ್ಣೆ ಸ್ನಾನ ಮಾಡಿ ಹೊಸಬಟ್ಟೆ ತೊಟ್ಟು, ಎಳ್ಳು-ಬೆಲ್ಲ ತಿಂದು ಸಿಹಿಯುಂಡು ಪುರುಷರು ಹಬ್ಬ ಆಚರಿಸಿದರೆ, ಮಹಿಳೆಯರು ಹಾಗು ಹೆಣ್ಣುಮಕ್ಕಳು ಮನೆಮನೆಗೆ ಹೋಗಿ ಪರಸ್ಪರ ಎಳ್ಳು-ಬೆಲ್ಲ ನೀಡುವ ಸಂಪ್ರದಾಯವಿದೆ. ರೈತರಿಗೆ ಇದು ದೊಡ್ಡ ಹಬ್ಬವಾಗಿದ್ದು,ಅಂದು ದನಗಳನ್ನು ಅಲಂಕರಿಸಿ ಮೆರವಣಿಗೆಯಲ್ಲಿ ಕರೆದೊಯ್ದು ನಿರ್ದಿಷ್ಟ ಸ್ಥಳದಲ್ಲಿ ಕಿಚ್ಚು ಹಾಯ್ಸುತ್ತಾರೆ. ಮಾಘ(ಫೆಬ್ರವರಿ)ಮಾಸದಲ್ಲಿ ಬರುವ ಶಿವರಾತ್ರಿ ಹಬ್ಬ ಶೈವರೂ ವೀರಶೈವರೂ ಸೇರಿದಂತೆ ಎಲ್ಲಾ ಶಿವಾರಾಧಕರಿಗೂ ಪ್ರಮುಖವಾಗಿದ್ದು ಅಂದು ದಿನವಿಡೀ ಉಪವಾಸವಿದ್ದು, ಸಾಯಂಕಾಲ ಶಿವಪೂಜೆ ಮುಗಿಸಿ, ಪ್ರಸಾದ (ಫಲಾಹಾರ) ಸ್ವೀಕರಿಸಿ, ರಾತ್ರಿಯಿಡೀ ಶಿವನಾಮಸ್ಮರಣೆ ಮಾಡುತ್ತಾ ಜಾಗರಣೆ ಮಾಡುವುದರಿಂದ ಕೈಲಾಸ ಪ್ರಾಪ್ತಿಯಾಗುವುದೆಂಬ ನಂಬಿಕೆ ಇವರಲ್ಲಿದೆ. ತಾಲೂಕಿನ ನರಸೀಪುರ, ತಲಕಾಡು, ಮುಗೂರು, ಮುಡುಕುತೊರೆ, ಸೋಸಲೆ, ತೋಪಿನಮಠ ಮುಂತಾದೆಡೆಗಳಲ್ಲಿ ಜಾಗರಣೆಗೆ ಅನುಕೂಲವಾಗಲೆಂದು ಧಾರ್ಮಿಕ ಕಾರ್ಯಕ್ರಮಗಳನ್ನು ರಾತ್ರಿಯಿಡೀ ನಡೆಸಲಾಗುತ್ತದೆ. ಫಾಲ್ಗುಣ ಮಾಸದಲ್ಲಿ ಬರುವ ಹೋಳಿ ಹಬ್ಬದ ಸಂದರ್ಭದಲ್ಲಿ ಮನ್ಮಥವನ್ನು ಅಶ್ಲೀಲವಾಗಿ ಬೈಯುತ್ತಾ ಸಾರ್ವಜನಿಕವಾಗಿ ಕಾಮದಹನ ಮಾಡಲಾಗುತ್ತದೆ. ಗ್ರಾಮೀಣ ಭಾಗದಲ್ಲಿ ಮಾರಿ ಹಾಗೂ ಚೌಡೇಶ್ವರಿ ಹಬ್ಬ ಸಂದರ್ಭದಲ್ಲಿ ಬೆಲ್ಲದ ಅನ್ನದ ರಾಶಿ (ಮಡೆ) ಮಾಡಿ ನಂತರ ಜನರಿಗೆ ಹಂಚಲಾಗುತ್ತದೆ.

ತಾಲೂಕಿನ ನರಸೀಪುರ, ಗರ್ಗೇಶ್ವರಿ, ಬನ್ನೂರು, ತಲಕಾಡು, ಮುಂತಾದ ಕಡೆಗಳಲ್ಲಿರುವ ಮುಸ್ಲಿಮರು ಮೊಹರಂ, ರಮ್ಜಾನ್, (ಈದ್‌ಉಲ್‌ಫಿತರ್), ಬಕ್ರೀದ್ (ಈದ್ ಉಲ್‌ಹರ್ಝ್)ಮುಂತಾದ ಹಬ್ಬಗಳನ್ನು ಸಂಭ್ರಮದಿಂದ ಅಚರಿಸುತ್ತಾರೆ. ಮೊಹರಂ ತಿಂಗಳ ಮೊದಲ ಹತ್ತು ದಿನಗಳ ಕಾಲ ಆಚರಿಸಲಾಗುವ ಈ ಹಬ್ಬದ ಸಂದರ್ಭದಲ್ಲಿ



ಪ್ರತೀ ದಿನ ಮಸೀದಿಗೆ ಹೋಗಿ ನಮಾಜ್ ಮಾಡುತ್ತಿದ್ದು, ಹತ್ತನೆಯ ದಿನ ಮೊಹರಂ ಹಬ್ಬದ ಕೊನೆಯ ದಿನವಾಗಿರುತ್ತದೆ. ಷವಲ್ ತಿಂಗಳಲ್ಲಿ ಇವರು ಅಚರಿಸುವ ಒಂದು ತಿಂಗಳ ರಮ್ಜಾನ್ ಹಬ್ಬದ ಸಂದರ್ಭದಲ್ಲಿ ಮಸ್ಲಿಮರು ಸೂರ್ಯೋದಯಕ್ಕೆ ಮೊದಲು ಹಾಗೂ ಚಂದ್ರೋದಯಕ್ಕೆ ಮೊದಲು ಎರಡು ಹೊತ್ತು ಊಟ ಮಾಡುತ್ತಾರೆ. ದಿನಕ್ಕೆ ಐದು ಬಾರಿ ನಮಾಜ್ ಮಾಡುತ್ತಾರೆ. ರಮ್ಜಾನ್ ಕೊನೆಯ ದಿನ ಈದ್‌ಗಾ ಮೈದಾನಕ್ಕೆ ಮೆರವಣಿಗೆಯಲ್ಲಿ ಪ್ರಾರ್ಥನೆಗೆ ಹೋಗುವ ಮುನ್ನ ಶ್ರೀಮಂತ ಮುಸ್ಲಿಮರು ತಮ್ಮ ಆದಾಯದಲ್ಲಿ ಸ್ವಲ್ಪ ಭಾಗವನ್ನು ಹತ್ತಿರದ ಬಂಧುಗಳೂ ಸೇರಿದಂತೆ ನಿರ್ಗತಿಕರಿಗೆ ದಾನ ಮಾಡುವ (ಝುಕ್ವಾತ್) ಸಂಪ್ರದಾಯವಿದೆ. ಝಿಲ್ಹಜ್ ತಿಂಗಳಲ್ಲಿ ಬರುವ ಬಕ್ರೀದ್ ಹಬ್ಬದಂದು ಹೊಸಬಟ್ಟೆ ತೊಟ್ಟು, ಮೆರವಣಿಗೆಯಲ್ಲಿ ಈದ್‌ಗಾ ಮೈದಾನಕ್ಕೆ ತೆರಳಿ, ಸಾಮೂಹಿಕವಾಗಿ ಪ್ರಾರ್ಥಿಸಿ, ಹಬ್ಬದೂಟ ಮಾಡುತ್ತಾರೆ. ಅಲ್ಲದೇ ಶಾಬಾನ್ ತಿಂಗಳ ೧೪ನೆಯ ದಿನದಂದು ಬರುವ ಶಾಬ್-ಇ-ಬರತ್, ರಬಿ ಉಸ್‌ಸನ್ ತಿಂಗಳಲ್ಲಿ ಬರುವ ಸಂತ ಹುಸೇನನ ಹುಟ್ಟುಹಬ್ಬ, ರಬಿ-ಉಲ್-ಅವ್ವಲ್ ತಿಂಗಳ ೧೨ನೇ ದಿನ ಬರುವ ಪೈಗಂಬರರ ಹುಟ್ಟುಹಬ್ಬ ಹಾಗೂ ತೀವ್ರ ಅನಾರೋಗ್ಯದಿಂದ ಪೈಗಂಬರರು ಗುಣಮುಖರಾದ ಅಪೂರ್ವ ಸಂದರ್ಭದ ಸ್ಮರಣಾರ್ಥವಾಗಿ ಸಫರ್ ತಿಂಗಳ ಕೊನೆಯ ಬುಧವಾರದಂದು ಆಚರಿಸುವ ಆಕ್ರಿ ಚಾರ್ಸುಂಬ್ಬ ಹಬ್ಬ ಮುಸ್ಲಿಮರ ಇತರ ಹಬ್ಬಗಳಾಗಿವೆ. ಜೀವನದಲ್ಲೊಮ್ಮೆ ಮೆಕ್ಕಾಕ್ಕೆ ಹಜ್ ಯಾತ್ರೆ ಕೈಗೊಳ್ಳಬೇಕೆಂಬುದು ಪ್ರತಿಯೊಬ್ಬ ಮುಸ್ಲಿಮರ ಹೆಬ್ಬಯಕೆಯಾಗಿದೆ.

ತಾಲೂಕಿನ ವಿವಿಧೆಡೆ ವಿರಳ ಸಂಖ್ಯೆಯಲ್ಲಿ ನೆಲೆಸಿರುವ ಕ್ರಿಶ್ಚಿಯನ್ನರು ವರ್ಷದ ಮೊದಲ ದಿನವಾದ ಜನವರಿ ಒಂದರಂದು ಹೊಸವರ್ಷಾರಂಭವನ್ನು ಸಡಗರದಿಂದ ಆಚರಿಸುತ್ತಾರೆ. ಶುಭಶುಕ್ರವಾರ, ಈಸ್ಟರ್ ದಿನ (ಏಸುವಿನ ಪುನರುತ್ಥಾನ) ಸೆಪ್ಟೆಂಬರ್ ತಿಂಗಳ ಎಂಟರಂದು ಬರುವ ಮೇರಿಯಮ್ಮನ ಜನ್ಮದಿನ ಹಾಗೂ ಡಿಸೆಂಬರ್ ತಿಂಗಳ ೨೫ರಂದು ಬರುವ ಕ್ರಿಸ್‌ಮಸ್ ಅವರ ಇತರ ಪ್ರಮುಖ ಹಬ್ಬಗಳಾಗಿವೆ. ಡೋರನಹಳ್ಳಿಯ (ಕೃಷ್ಣರಾಜನಗರ ತಾಲೂಕು) ಸಂತ ಆಂಥೋನಿ ಚರ್ಚಿನಲ್ಲಿ ನಡೆಯುವ ಜಾತ್ರೆಯೂ ಸೇರಿದಂತೆ, ನಾಡಿನ ಇತರ ಕ್ರೈಸ್ತ ಧಾರ್ಮಿಕ ಕೇಂದ್ರಗಳಿಗೆ ಅನುಕೂಲವಾದಾಗ ಅಗತ್ಯವಿದ್ದಾಗ ಯಾತ್ರೆ ಕೈಗೊಳ್ಳುವ ಸಂಪ್ರದಾಯ ತಾಲೂಕಿನ ಕ್ರಿಶ್ಚಿಯನ್ನರಲ್ಲೂ ಇದೆ.

**ಜಾತ್ರೆಗಳು :** ಇತರೆಡೆಗಳಂತೆ ತಾಲೂಕಿನ ಮುಡುಕುತೊರೆ, ಬನ್ನೂರು, ಮೂಗೂರು, ತಿರುಮಕೂಡಲು, ನರಸೀಪುರ, ತಲಕಾಡು ಮುಂತಾದೆಡೆಗಳಲ್ಲಿ ವಾರ್ಷಿಕ ಜಾತ್ರೆಗಳು ನಡೆಯುತ್ತವೆ. ಅಲ್ಲದೇ ತಿರುಮಕೂಡಲಿನಲ್ಲಿ ಮೂರು ವರ್ಷಗಳಿಗೊಮ್ಮೆ ಜರುಗುವ ಕುಂಭಮೇಳ, ತಲಕಾಡಿನಲ್ಲಿ ೧೨ ವರ್ಷಗಳಿಗೊಮ್ಮೆ ನಡೆಯುವ ಪಂಚಲಿಂಗ ದರ್ಶನಗಳು ತಾಲೂಕಿನ ವೈಶಿಷ್ಟ್ಯಗಳಾಗಿದ್ದು, ಆ ಸಂದರ್ಭದಲ್ಲಿ ಲಕ್ಷಾಂತರ ಜನ ಭಾಗವಹಿಸುತ್ತಾರೆ. ತಿರುಮಕೂಡಲಿನಲ್ಲಿ ೨೦೧೦ರಲ್ಲಿ ಕುಂಭಮೇಳ ಯಶಸ್ವಿಯಾಗಿ ನಡೆಯಿತು. ತಲಕಾಡಿನಲ್ಲಿ ಪಂಚಲಿಂಗದರ್ಶನವು ೨೦೦೯ರಲ್ಲಿ ಯಶಸ್ವಿಯಾಗಿ ನಡೆದು, ಲಕ್ಷಾಂತರ ಜನ ಭಾಗವಹಿಸಿದ್ದರು. ಸಾಮಾನ್ಯವಾಗಿ ಜಾತ್ರೆ ಸಮಯದಲ್ಲಿ ವಿವಿಧ ವಸ್ತುಗಳನ್ನು ಮಾರುವ

ಮಾರಾಟಮಳಿಗೆಗಳೂ ಇರುತ್ತವೆ. ಅದರಲ್ಲೂ ತಲಕಾಡಿನ ಪಂಚಲಿಂಗದರ್ಶನ ಹಾಗೂ ಮುಡುಕುತೊರೆಯ ಜಾತ್ರೆ ಸಂದರ್ಭದಲ್ಲಿ ಪ್ರವಾಸಿ ಚಿತ್ರಮಂದಿರ, ಸರ್ಕಸ್, ಮುಂತಾದವು ಜಾತ್ರೆಯ ಬಯಲಿಗೆ ಲಗ್ಗೆ ಹಾಕುತ್ತವೆ. ಮುಡುಕುತೊರೆ, ಬನ್ನೂರು, ನರಸೀಪುರ ಹಾಗೂ ಕಲಿಯೂರು ಜಾತ್ರೆ ಸಂದರ್ಭದಲ್ಲಿ ದನಗಳ ಜಾತ್ರೆಯೂ ಕೂಡುತ್ತವೆ. ಅದರಲ್ಲೂ ಮುಡುಕುತೊರೆಯ ಪಾರ್ವತಿ–ಮಲ್ಲಿಕಾರ್ಜುನ ಜಾತ್ರೆಯ ಸಂದರ್ಭದಲ್ಲಿ ಸೇರುವ ದನಗಳ ಜಾತ್ರೆಯಲ್ಲಿ ಸಾವಿರಾರು ದನಗಳ ವಿಲೇವಾರಿಯಾಗುತ್ತವೆ. ಉತ್ತಮ ರಾಸುಗಳನ್ನು ಖರೀಸುವ ಸಲುವಾಗಿ ನಾಡಿನ ವಿವಿಧೆಡೆಗಳಿಂದ ರೈತರು ಬರುತ್ತಾರೆ. ಜಾತ್ರೆಗೆ ಬರುವ ಎತ್ತುಗಳಲ್ಲಿ ಉತ್ತಮವಾದುದಕ್ಕೆ ಬಹುಮಾನ ನೀಡುವ ಸಂಪ್ರದಾಯವೂ ಇದೆ. ವಿವರಗಳಿಗೆ ಪ್ರೇಕ್ಷಣೀಯ ಸ್ಥಳಗಳು ಅಧ್ಯಾಯ ನೋಡಿ.

**ತಿರುಮಕೂಡಲಿನ ಕುಂಭಮೇಳ:** ಕಾವೇರಿ–ಕಪಿಲ ನದಿ ಹಾಗೂ ಸ್ಫಟಿಕ ಸರೋವರದ ಸಂಗಮ ಸ್ಥಳ (ಕೂಡಲು)ದಲ್ಲಿರುವ ತಿರುಮಕೂಡಲಿನ ಅಗಸ್ತೇಶ್ವರ ದೇವಾಲಯವು ಸುಮಾರು ಹತ್ತನೆಯ ಶತಮಾನದಷ್ಟು ಪ್ರಾಚೀನ ಗುಡಿಯಾಗಿದ್ದು, ನಂತರದಲ್ಲಿ ಪಂಚಲಿಂಗ ಸ್ಥಾನವಾಗಿಯೂ ಮಹತ್ವ ಪಡೆದಿದ್ದ ಅಂಶ ಶಾಸನಗಳಿಂದ ವೇದ್ಯವಾಗುತ್ತದೆ. ಅಲ್ಲಿ ಕಳೆದ ಶತಮಾನದಿಂದ ಕುಂಭಮೇಳವನ್ನು ಆರಂಭಿಸಲಾಗಿದ್ದು, ಆ ಸಮಯದಲ್ಲಿ ಸಂಗಮದಲ್ಲಿ ಮಿಂದು ಅಗಸ್ತೇಶ್ವರಲಿಂಗವೂ ಸೇರಿದಂತೆ ಪಂಚಲಿಂಗಗಳಿಗೆ ಪೂಜಿಸಿ, ಪುನೀತರಾಗಲು ಲಕ್ಷಾಂತರ ಜನ ಸೇರುತ್ತಾರೆ. (ವಿವರಗಳಿಗೆ ತಿರುಮಕೂಡಲು ನೋಡಿ) ೨೦೧೦ರ ಜನವರಿ ತಿಂಗಳಲ್ಲಿ ಜರುಗಿದ ಕುಂಭಮೇಳದಲ್ಲೂ ಲಕ್ಷಾಂತರ ಜನ ಭಾಗವಹಿಸಿದ್ದರು.

**ತಲಕಾಡಿನ ಪಂಚಲಿಂಗದರ್ಶನ:** ಚಾಂದ್ರಮಾನ ಪಂಚಾಂಗದ ಕಾರ್ತಿಕ ಮಾಸ (ಐದನೆಯ ಸೋಮವಾರ) ಹಾಗೂ ಸೌರಮಾನ ಪಂಚಾಂಗದ ವೃಶ್ಚಿಕ ಮಾಸಗಳು ಕೂಡಿದಂತೆ ಬರುವ ಅಮಾವಾಸ್ಯೆಯ ದಿನದಂದು ಸೂರ್ಯೋದಯ–ಸೂರ್ಯಾಸ್ತಮಗಳ ನಡುವಣ ಅವಧಿಯಲ್ಲಿ ತಲಕಾಡಿನ ಪಂಚಲಿಂಗಗಳ ದರ್ಶನವನ್ನು ಮಾಡಿದರೆ ಮೋಕ್ಷ ಪ್ರಾಪ್ತಿ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಜರುಗುವ ಈ ಜಾತ್ರೆಗೆ ಲಕ್ಷಾಂತರ ಜನ ಭಾಗವಹಿಸುತ್ತಾರೆ. ಈ ಮಹೂರ್ತವು ಸಾಮಾನ್ಯವಾಗಿ ೧೨ ವರ್ಷಗಳಿಗೊಮ್ಮೆ ದೊರಕುವುದರಿಂದ ಅದಕ್ಕೆ ಮಹತ್ವವಿದೆ. (ವಿವರಗಳಿಗೆ ತಲಕಾಡು ನೋಡಿ)

ತಾಲೂಕಿನಾದ್ಯಂತ ನಾನಾ ಗ್ರಾಮಗಳಲ್ಲಿರುವ ದೇವಾಲಯ ಹಾಗೂ ಸಂತರ ಸಲುವಾಗಿ ವಾರ್ಷಿಕ ಜಾತ್ರೆಗಳು ನಡೆಯುತ್ತವೆ. ಅವುಗಳಲ್ಲಿ ಪ್ರಮುಖ ಜಾತ್ರೆಗಳ ಪಟ್ಟಿಯನ್ನು ಮಾತ್ರ ಮುಂದೆ ನೀಡಲಾಗಿದೆ. ಹೆಚ್ಚಿನ ಮಾಹಿತಿಯು ತಾಲೂಕಿನ ಮುಜರಾಯಿ ಶಾಖೆಯಲ್ಲಿ ದೊರೆಯುತ್ತದೆ.

**ಯಾತ್ರೆಗಳು :** ನಾಡಿನ ಇತರೆಡೆಗಳಂತೆ ತಾಲೂಕಿನ ಜನರೂ ತಮ್ಮ ಕುಲದೇವರುಗಳಿಗೆ ನಡೆದುಕೊಳ್ಳುವುದರ ಜೊತೆಗೆ ವಿವಿಧ ತೀರ್ಥಕ್ಷೇತ್ರಗಳಿಗೂ ಯಾತ್ರೆ ಕೈಗೊಳ್ಳುತ್ತಾರೆ. ತಾಲೂಕಿನ ತಿರುಮಕೂಡಲು, ಸೋಸಲೆ, ನರಸೀಪುರ, ಮುಡುಕುತೊರೆ, ತಲಕಾಡು,



ಮೂಗೂರು, ಮುಂತಾದ ಶೈವ, ವೈಷ್ಣವ ಹಾಗೂ ಶಕ್ತಿ ಕೇಂದ್ರಗಳ ಜೊತೆಗೆ ನೆರೆಯ ಮಲೆಮಹದೇಶ್ವರ ಬೆಟ್ಟ, ಬಿಳಿಗಿರಿರಂಗನಬೆಟ್ಟ, ಮೇಲುಕೋಟೆ, ಗೋಪಾಲಸ್ವಾಮಿ ಬೆಟ್ಟ ಮುಂತಾದವುಗಳು. ಜೊತೆಗೆ ಬೊಪ್ಪಗೌಡನಪುರ, ಕಪ್ಪಡಿ, ಚಿಕ್ಕಾಲೂರು, ಸ್ಥಳಗಳಿಗೂ ಯಾತ್ರೆ ಕೈಗೊಳ್ಳುತ್ತಾರೆ. ಅಲ್ಲದೇ ರಾಜ್ಯದ ಧರ್ಮಸ್ಥಳ, ಹೊರನಾಡು, ಶೃಂಗೇರಿ, ಕೊಲ್ಲೂರು, ಗೋಕರ್ಣ, ಮುರ್ಡೇಶ್ವರ, ಮುಂತಾದ ಧಾರ್ಮಿಕ ಸ್ಥಳಗಳೂ ಸೇರಿದಂತೆ ಹೊರರಾಜ್ಯಗಳಲ್ಲಿರುವ ತಿರುಪತಿ, ಕದಿರಿ, ಮಂತ್ರಾಲಯ, ಶ್ರೀಶೈಲ, ರಾಮೇಶ್ವರ, ಪಂಡರಿಪುರ, ಕೊಲ್ಹಾಪುರ, ಸೊಲ್ಲಾಪುರ, ಪಳನಿ, ಕೊಂಗಳ್ಳಿ ಮಲ್ಲಿಕಾರ್ಜುನ, ಕಾಶಿ, ಗಯಾ, ಬದರಿನಾಥ, ಕೇದಾರ, ಮುಂತಾದೆಡೆಗಳಿಗೂ ತೀರ್ಥಯಾತ್ರೆ ಕೈಗೊಳ್ಳುತ್ತಾರೆ.

## ತಾಲೂಕಿನ ಪ್ರಮುಖ ಜಾತ್ರೆಗಳ ಪಟ್ಟಿ

| ಊರು | ದೇವರು | ಜಾತ್ರೆ ದಿನಾಂಕ | ಅವಧಿ | ಭಾಗವಹಿಸುವವರ ಸಂಖ್ಯೆ | ದನಗಳ ಜಾತ್ರೆ |
|---|---|---|---|---|---|
| ಕಲಿಯೂರು | ಮಹಾದೇಶ್ವರ ಜಾತ್ರೆ | ಫೆಬ್ರವರಿ ೨ ರಿಂದ | ಐದು ದಿನ | ೨೦,೦೦೦ ಜನ | ಉಂಟು |
| ಬನ್ನೂರು | ಹೇಮಾದ್ರಮ್ಮ | ಮಾರ್ಚ್ | ಒಂದು ದಿನ | ೨೦,೦೦೦ | ಇಲ್ಲ |
| –“– | ರಾಮದೇವರು | ಫೆಬ್ರವರಿ | ಒಂದು ದಿನ | ೫೦,೦೦೦ | ಇಲ್ಲ |
| ಮುಡುಕುತೊರೆ | ಪಾರ್ವತಿ ಮಲ್ಲಿಕಾರ್ಜುನ | ಫೆಬ್ರವರಿ | ಎರಡು ವಾರ | ೧,೦೦,೦೦೦ | ಉಂಟು |
| ಮೂಗೂರು | ತ್ರಿಪುರ ಸುಂದರಮ್ಮ | ಜನವರಿ | ೨–೩ ದಿನ | ೫೦,೦೦೦ | ಇಲ್ಲ |
| –“– | ದೇಶೇಶ್ವರ | | | ೫,೦೦೦ | ಇಲ್ಲ |
| ತಲಕಾಡು | ಪಂಚಲಿಂಗದರ್ಶನ | ನವೆಂಬರ್ | ಒಂಭತ್ತು | ೧೨ ವರ್ಷಗಳಿಗೊಮ್ಮೆ | ಇಲ್ಲ |
| –“– | ಕೀರ್ತಿನಾರಾಯಣ | ಮಾರ್ಚ್ | ಒಂದು ವಾರ | ೫,೦೦೦ | ಇಲ್ಲ |
| ತಿ.ನರಸೀಪುರ | ಗುಂಜಾನರಸಿಂಹಸ್ವಾಮಿ | ಮಾರ್ಚ್ | ಎರಡು ದಿನ | ೧೦,೦೦೦ | ಉಂಟು |
| –“– | ಮೂಲಸ್ಥಾನೇಶ್ವರ | ಮಾರ್ಚ್ | ಒಂದು | ೧,೦೦೦ | ಇಲ್ಲ |
| ತಿರುಮಕೂಡಲು | ಅಗಸ್ತೇಶ್ವರ ಕುಂಭಮೇಳ | ಏಪ್ರಿಲ್–ಮೇ | ಮೂರು ದಿನ | ಐದು ಲಕ್ಷ | ಮೂರು ವರ್ಷಕ್ಕೊಮ್ಮೆ |
| ಶ್ರೀರಂಗರಾಜಪುರ | ವೇಣುಗೋಪಾಲ | ಮೇ–ಜೂನ್ | ನಾಲ್ಕು ದಿನ | ೧,೦೦೦ | ಇಲ್ಲ |
| ಸೋಸಲೆ | ಹೊನ್ನಾದೇವಿ | ಏಪ್ರಿಲ್ | ಒಂದು ವಾರ | ೧೦,೦೦೦ | ಇಲ್ಲ |